### ಕನ್ನಡ ಭಾಷೆ ಪಠ್ಯ

## ಎರಡನೆ ವರ್ಷದ ಬಿಎಸ್ಸಿ ಐಡಿ.,
## ಮೂರನೆ ಮತ್ತು ನಾಲ್ಕನೆ ಸೆಮಿಸ್ಟರ್

[ಎನ್ಇಪಿ ೨೦೨೨–೨೫]

# ಕನ್ನಡ ಸೌಂದರ್ಯ


ಪ್ರಧಾನ ಸಂಪಾದಕ

ಡಾ. ಬಿ. ಗಂಗಾಧರ

ಸಂಪಾದಕರು

ಶ್ರೀ ಎಸ್. ರವೀಂದ್ರ

ಡಾ. ಎಂ. ತಿಮ್ಮರಾಯಪ್ಪ

ಡಾ. ಬಿ.ಕೆ. ಮಂಜುಳ

ಡಾ. ಸಿ.ಎ. ರಮೇಶ್



**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**

**ಟಮಕ, ಕೋಲಾರ – 563103**

# ಬಿಎಸ್ಸಿ ಐಡಿ ಕನ್ನಡ ಸೌಂದರ್ಯ–೨
# ಮೂರನೇ ಸೆಮಿಸ್ಟರ್ ಪಠ್ಯ ಪರಿವಿಡಿ

**ಘಟಕ : ೧**

| | | |
|---|---|---|
| ೧) ಹಳಗನ್ನಡ ಕಾವ್ಯ | ಪೊಲ್ಲಮೆಯೆಲೇಸು ನಲ್ಲರ ಮೆಯ್ಯೊಳ್ | –ಜನ್ನ |
| ೨) ಕಥೆ | ಅನಾಥೆ ಅನಸೂಯೆ | –ಕೆ.ವಿ. ಅಯ್ಯರ್ |
| ೩) ಪ್ರಬಂಧ | ಪದ್ಯ ಒಂದರ ಕುರಿತು | –ಜಿ. ರಾಜಶೇಖರ |

**ಘಟಕ : ೨**

| | | |
|---|---|---|
| ೧) ನಡುಗನ್ನಡ ಕಾವ್ಯ | ವಚನಗಳು | –ಚೆನ್ನಬಸವಣ್ಣ |
| ೨) ಕಥೆ | ಕುಂಡಜ್ಜನ ಪರಸಂಗ | –ಡಾ. ಕೃಷ್ಣಮೂರ್ತಿ ಹನೂರು |
| ೩) ಪ್ರಬಂಧ | ಬೆಂಗಳೂರು ಅತ್ತೆಮ್ಮನ ಫಳಾರ | –ಕೇಶವರೆಡ್ಡಿ ಹಂದ್ರಾಳ |

**ಘಟಕ : ೩**

| | | |
|---|---|---|
| ೧) ಹೊಸಗನ್ನಡ ಕಾವ್ಯ | ಬಿತ್ತನೆ | –ಕೆ.ಎಸ್. ನಿಸಾರ್ ಅಹಮದ್ |
| ೨) ಕಥೆ | ತೊಳೆದ ಮುತ್ತು | –ಕೆರೂರು ವಾಸುದೇವಾಚಾರ್ಯ |
| ೩) ಪ್ರಬಂಧ/ಸಂಕೀರ್ಣ | ಮಾನವ ನಿರ್ಮಿತ ಮಹಾಸಮಸ್ಯೆಗಳು | –ನಾಗೇಶ ಹೆಗಡೆ |

**ಘಟಕ : ೪**

| | | |
|---|---|---|
| ೧) ಹೊಸಗನ್ನಡ ಕಾವ್ಯ | ಮಹಾತ್ಮ | –ಗಂಗಾಧರ ಚಿತ್ತಾಲ |
| ೨) ಕಥೆ | ತಾಯಿ | –ಡಾ. ಯು.ಆರ್. ಅನಂತಮೂರ್ತಿ |
| ೩) ಪ್ರಬಂಧ/ಸಂಕೀರ್ಣ | ಹರಕೆಗಳು | –ಎ.ಎನ್. ಮೂರ್ತಿರಾವ್ |

## ಘಟಕ : ೧

# ೧. ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

–ಜನ್ನ

**ಆಶಯ:** ಬಂಗಾರದ ಪಂಜರದಲ್ಲಿರುವ ಗಿಳಿಗೆ ಮೃಷ್ಟಾನ್ನವನ್ನು ಬಡಿಸಿದರೇನು, ಸ್ವತಂತ್ರವಾಗಿ ಹಾರಾಡುವ ಗಿಳಿಯ ಸಂತೋಷಕ್ಕೆ ಸಮನಾಗುವುದೇ. ಭಾರತೀಯ ಸಮಾಜದ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ತನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡು ತನ್ನ ಅಂತರಂಗದ ಸಾವಿರಾರು ಭಾವನಾತ್ಮಕ ಆಸೆಗಳನ್ನು ತನ್ನಲ್ಲಿಯೇ ಬಂದಿಸಿಟ್ಟುಕೊಂಡು ಬಂದಿದ್ದಾಳೆ. ಜನ್ನನ ಅಮೃತಮತಿ ಸ್ತ್ರೀ ಸ್ವಾತಂತ್ರ್ಯದ ಪ್ರತೀಕವಾಗಿ ನಮ್ಮ ಮುಂದೆ ಕಂಡು ಬರುವಳು. ಯಾವುದು ನಿಜವಾದ ಪ್ರೀತಿ ಯಾವುದು ನಿಜವಾದ ಸೌಂದರ್ಯ ಎಂಬ ಪ್ರಶ್ನೆ ಇಲ್ಲಿ ಚರ್ಚಾಸ್ಪದವಾಗಿದೆ.

ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ
ಸ್ಮರಚಾಪಮನಿಳಿಕಯ್ವರೆ
ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

ಒಲವಾದೊಡೆ ರೂಪಿನ ಕೋ
ಟಲೆಯೇವುದೋ ಕಾರ್ಯಮಾಗೆ ಕಾರಣದಿಂದಂ
ಫಲಮೇನಿಂದೆನಗಾತನೆ
ಕುಲದೈವಂ ಕಾಮದೇವನಿಂದ್ರಂ ಚಂದ್ರಂ

ಎಂದಾಕೆಗೆ ಲಂಚಮನಿ
ತ್ತೆಂದುದನೆಂದೆರವಿಗೊಂಡು ಕಳಿಪುವುದುಮವಳ್
ಸಂದಿಸಿದೊಡಮೃತಮತಿ ರಾ
ತ್ರಿಂದಿವಮಾತನೊಳೆಸಲಿಸಿದಳ್ ತೆರಪುಗಳಂ

ಆ ವಿಕಟಾಂಗನೊಳಂತಾ
ದೇವಿಗೆ ರುಚಿಯಾಗೆ ರತಿಫಲಾಸ್ವಾದನದೊಳ್
ಬೇವಂ ಮೆಚ್ಚಿದ ಕಾಗೆಗೆ
ಮಾವಿಳಿದಪ್ಪಂತೆ ಪತಿಯೊಳಿಳಿದಾಯ್ತು ಮನಂ

ಆ ಗಂಡನನಪ್ಪಿದ ತೋಳ್
ಪೋಗಂಡನನಪ್ಪುವಂತೆ ಮಾಡಿದಬಿದಿಯಂ
ಮೂಗಂ ಕೊಯ್ದಿಟ್ಟಿಗೆಯೊಳ್
ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪೆನೇ.

**ಕಠಣ ಪದಗಳ ಅರ್ಥ:** ಕತ್ತುರಿ– ಕಸ್ತೂರಿ, ಮಲಯಜ– ಗಂಧದ ಕೊರಡು, ಸ್ಮರಚಾಪ–ಕಾಮನಬಿಲ್ಲು, ಒಲುಮೆ– ಪ್ರೀತಿ ಪ್ರೇಮ, ಕಾಮದೇವಂ– ಪ್ರಿಯಕರ, ಪ್ರೇಮಿ, ತೆರಪು– ಬಿಡುವಿನ ವೇಳೆ, ವಿಕಟಾಂಗ– ವಿಕಲಾಂಗ.

**ಕವಿಪರಿಚಯ:** ಜನ್ನ(೧೨೦೯–೧೩೨೦) ಹೊಯ್ಸಳ ಚಕ್ರವರ್ತಿ ವೀರಬಲ್ಲಾಳನ ಆಸ್ಥಾನದಲ್ಲಿದ್ದ ಮಹಾಕವಿ ಜನ್ನ. ಈತನ ತಂದೆ ಶಂಕರ, ತಾಯಿ ಗಂಗಾದೇವಿ. ಹದಿಮೂರನೆ ಶತಮಾನದ ಪೂರ್ವಾರ್ಧದಲ್ಲಿ ಇದ್ದವನು. ಈತನ ಕೃತಿಗಳು ಅನಂತನಾಥ ಪುರಾಣ, ಯಶೋಧರ ಚರಿತೆ, ಅನುಭವ ಮುಕುರ.  ಮೊದಲೆರಡು ಕಾವ್ಯದಲ್ಲಿ ಗಂಡುಹೆಣ್ಣಿನ ಮಧ್ಯದ ತ್ರಿವಳಿ ಸಂಬಂಧನ್ನು ಈತ ಚಿತ್ರಿಸಿದ್ದಾನೆ.

**ಪ್ರಶ್ನೆಗಳು:**

೧. ಅಮೃತಮತಿ ಸೌಂದರ್ಯ ಕುರಿತು ತನ್ನ ದೂದವಿಗೆ ನೀಡಿದ ಉತ್ತರವೇನು?
೨. ಅಮೃತಮತಿಯ ನಿರ್ಮಲ ಪ್ರೇಮವನ್ನು ಕುರಿತು ವಿವರಿಸಿ?
೩. ಸ್ತ್ರೀಸ್ವಾತಂತ್ರ್ಯದ ಪ್ರತೀಕವಾಗಿ ಅಮೃತಮತಿ ಪಾತ್ರವನ್ನುವಿವರಿಸಿ?
೪. ಅಮೃತಮತಿಯ ನಿಲುವು ಸಕಾರಣವೆ? ಚರ್ಚಿಸಿ.

# ೨. ಅನಾಥೆ ಅನಸೂಯೆ

**–ಕೆ.ವಿ. ಅಯ್ಯರ್**

**ಆಶಯ:** ಒಂಟಿಯಾಗಿ ಜೀವಿಸುವುದರಿಂದ ತೃಪ್ತಿ ಪಡೆಯಲಾಗುವುದಿಲ್ಲ. ಪ್ರತಿಯೊಬ್ಬರಿಗೂ ಜೀವನದಲ್ಲಿ ಒಂದಿಲ್ಲೊಂದು ಕೊರತೆ ಇದ್ದೇ ಇರುತ್ತದೆ. ಸಂಬಂಧಗಳಿಂದ ಜೀವನದಲ್ಲಿ ಕಳೆದುಕೊಂಡ ಸವಿಯನ್ನು ಮತ್ತೆ ಪಡೆಯಲು ಸಾಧ್ಯವಾಗುತ್ತದೆ.

ಹೆಸರು ಅನಸೂಯೆ. ವಯಸ್ಸು ನಲವತ್ತು ಮೀರಿತ್ತು. ಮೂವತ್ತಕ್ಕೇ ವಿತಂತುವಾಗಿದ್ದಳು. ಒಡಲು ಕುಡಿ ಒಡೆದಿರಲಿಲ್ಲ. ಹತ್ತಿರದ ಬಂಧುಗಳೂ ಇರಲಿಲ್ಲ. ಪತಿ ತೀರಿಕೊಂಡಾಗ ದೂರದವರು ಯಾರೋ ಬಂಧುಗಳು ಬಂದು ಅಪರಕರ್ಮಗಳನ್ನು ಮುಗಿಸಿಕೊಟ್ಟು ಹೋದರು. ಮನೆ ಬರಿದಾಯಿತು. ಮನಸ್ಸೂ ಬರಿದಾಯಿತು.

ಈಗಿನ ವಾಸದ ಮನೆ ಚಿಕ್ಕದು. ಆದರೂ ಒಪ್ಪವಾಗಿತ್ತು. ಅದು ಇದ್ದುದು ಬೆಂಗಳೂರು ನಗರದ ಹಳೇ ಶೀಗೆಬೇಲಿಯ ಒಂದು ಮನೆಯ ಮಹಡಿಯಲ್ಲಿ ಹತ್ತಿ ಇಳಿಯಲು ಪ್ರತ್ಯೇಕ ಮೆಟ್ಟಲಿತ್ತು. ಕೆಳಗೆ ವಾಸವಿದ್ದ ಮನೆಯ ಮಾಲೀಕರು ಒಳ್ಳೆಯವರು.

ಕಾಲಯಾಪನೆ ಕಷ್ಟವಿರಲಿಲ್ಲ. ಗಂಡನ ಜೀವವಿಮೆಯಿಂದ ಬಂದ ಮೊತ್ತ, ಬ್ಯಾಂಕ್ ಒಂದರಲ್ಲಿ ಬಡ್ಡಿ ಕೂಡಿಸಿಕೊಳ್ಳುತ್ತಿತ್ತು. ಆತ ಗೌರ್ನಮೆಂಟ್ ಹುದ್ದೆಯಲ್ಲಿ ಸೂಪರಿಂಟೆಂಡಿಂಗ್ ಎಂಜಿನಿಯರ್ ಆಗಿದ್ದ. ಡ್ಯೂಟಿಯ ಮೇಲಿದ್ದಾಗ ದುರಂತ ಸಂಭವಿಸಿತ್ತಾದ್ದರಿಂದ, ವಿಧವೆಗೆ ಮಾಸಾಶನ ದೊರೆತಿತ್ತು. ಆಕೆಯ ನಿತ್ಯಜೀವನ ಅದರಿಂದಲೇ ಸಾಗಿತ್ತು. ಆಕೆಗೆ ತನ್ನ ಅಡುಗೆ, ತನ್ನ ಊಟ, ತನ್ನ ಓದು, ಹವ್ಯಾಸವಾಗಿದ್ದುವು. ಕೈಮೇಲೆ ಬಹಳ ಸಮಯ ಉಳಿಯುತ್ತಿತ್ತು. ಜೀವನ ನಿರರ್ಥಕವಾಗುತ್ತಿದೆಯೆಂದು ಬಗೆದು, ಒಂದೇ ಫರ್‌ಲಾಂಗ್ ದೂರದಲ್ಲಿ ಇದ್ದ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇರಿಕೊಂಡಳು. ಆಗಿನ ಮೆಟ್ರಿಕ್ ಪರೀಕ್ಷೆಯಾಗಿ 'ಎಫ್.ಎ. ಪರೀಕ್ಷೆಗೆ ಒಂದು ವರ್ಷ ಓದಿದ್ದಳಾದ್ದರಂದ ಶಾಲೆಯ ಮುಖ್ಯಾಧ್ಯಾಪಕಿಯ ಸ್ಥಾನ ಇನ್ನೂ ಒಂದೆರಡು ವರ್ಷಗಳಲ್ಲಿ ಆಕೆಗೇ ಮೀಸಲಾಗಿತ್ತು.

ಆಕೆ ಸಿನಿಮಾಗಳನ್ನು ಅಷ್ಟಾಗಿ ನೋಡುತ್ತಿರಲಿಲ್ಲ. ತನ್ನ ಹೆಸರಿನ ಆ ಮಹಾಸತಿಯ ಕಥೆಯನ್ನು ಪುರಾಣಗಳಲ್ಲಿ ಓದಿದ್ದಳು, ಕೇಳಿದ್ದಳು. ನೋಡಲು ನಿರ್ಧರಿಸಿ, ಎದ್ದು, ಗಿಳಿರಾಮನನ್ನು ಪಂಜರದೊಳಕ್ಕೆ ಕೂಡಿ, ಚಳಿಯ ದಿನಗಳಾದ್ದರಿಂದ ಹೊದೆವ ಶಾಲೊಂದನ್ನು ಮಡಚಿಟ್ಟುಕೊಂಡು, ಮನೆಯ ಬಾಗಿಲು ಕಿಟಕಿಗಳನ್ನು ಭದ್ರಪಡಿಸಿ, ಮುಂದಿನ ಕೈಸಾಲೆಯ ದೀಪ ಒಂದನ್ನು ಮಾತ್ರ ಹೊತ್ತಿಸಿಟ್ಟು, ಹೊರಬಾಗಿಲಿಗೆ ಬೀಗ ಹಾಕಿಕೊಂಡು, ಮೆಟ್ಟಿಲುಗಳನ್ನಿಳಿದು, ಸಿನಿಮಾ ಮಂದಿರದ ದಾರಿಯನ್ನು ಹಿಡಿದಳು.

ಆಕೆಗೆ ಅಂದು ಸ್ವಲ್ಪ ಕೆಮ್ಮು ಇತ್ತು. ದಾರಿಯಲ್ಲಿ ಹೋಗುತ್ತ ಅಂಗಡಿಯೊಂದರಲ್ಲಿ 'ಪೆಪ್ಪರ್‌ಮಿಂಟ್–ಸ್ಟ್ರಾಂಗ್' ಒಂದು ರೋಲ್ ಕೊಂಡು, ಬಿಚ್ಚಿ, ಒಂದನ್ನು ಬಾಯಲ್ಲಿ ಹಾಕಿಕೊಂಡು ನೆಟ್ಟಗೆ ಸಿನಿಮಾ ಮಂದಿರಕ್ಕೆ ಬಂದಳು.

ಸಿನಿಮಾ ಮಂದಿರಗಳಲ್ಲಿ ಹೆಂಗಸರಿಗೆ ಪ್ರತ್ಯೇಕ ಸ್ಥಳವನ್ನಿಡುತ್ತಿದ್ದ ಕಾಲವದು. ಅವರು ಟಿಕೆಟ್ ಕೊಳ್ಳುವುದಕ್ಕೂ ಪ್ರತ್ಯೇಕ ಗೂಡು ಇತ್ತು. ಅನಸೂಯೆ ಕೈಯಲ್ಲಿ ಸಾಕಷ್ಟು ಹಣವನ್ನು ಹಿಡಿದು, ಅಲ್ಲಿ ಸಾಲು ನಿಂತಿದ್ದ ಎಲ್ಲ ಹೆಂಗಸರಿಗೂ ಕೊನೆಯವಳಾಗಿ ನಿಂತಳು. ನಾಲ್ಕೈದು ನಿಮಿಷಗಳಲ್ಲಿ ಅವಳಿಂದ ಹಿಂದಿನ ಸಾಲೂ ಬೆಳೆಯಿತು.

ಈಗ ಸಾಲಿನ ನಡುವೆ ಇದ್ದ ಅನಸೂಯೆ, ನಿಮಿಷಗಳನ್ನು ಕಳೆಯಲು ಅತ್ತಿತ್ತ ನೋಡತೊಡಗಿದಳು. ಅನತಿ ದೂರದಲ್ಲಿ ನಿಂತಿದ್ದ ಹುಡುಗಿಯೊಬ್ಬಳು ಅನಸೂಯೆಯ ಕಣ್ಣುಗಳನ್ನು ಮಂದಹಾಸದಿಂದ ಇದಿರುಗೊಂಡಳು. ಮಗುವಿನ ಕಣ್ಣುಗಳು ಜಿಂಕೆಮರಿಯ ಕಣ್ಣುಗಳಂತೆ ವಿಶಾಲವಾಗಿದ್ದುವು. ಹುಡುಗಿಯ ತಲೆತುಂಬ ಉದ್ದನೆಯ ಕೂದಲು ಎರಡು ಜಡೆಗಳಾಗಿ, ಕೊನೆಯನ್ನು ತಲೆಯ ಪಕ್ಕಗಳೇ ಕೋದುಕೊಂಡಿದ್ದುವು. ಎರಡು ಜಡೆಗೂ ಎರಡು ಕೆಂಪು ರಿಬ್ಬನ್‌ಗಳು ಚೆಂದ ಕೊಟ್ಟಿದ್ದುವು. ಕಾಲುಗಳಿಗೆ ಪಾಲಿಷ್ ಮಾಡಿದ್ದ ಕರಿಯ ಸ್ಲಿಪ್–ಆನ್ ಷೂಗಳನ್ನು ಹಾಕಿಕೊಂಡಿದ್ದಳು. ತೊಡೆಯವರೆಗೂ ಕಪ್ಪನೆಯ ಕಾಲುಚೀಲಗಳು ಇದ್ದವು. ತೊಟ್ಟಿದ್ದ ಪರ್ಸಿಯನ್ ಕಾಲರ್ ಕೋಟು ಒಂದು ಬಗೆಯ ಹಸಿರು ವೆಲ್ವೆಟೀನ್. ಅದಕ್ಕೆ ಅಗಲ ಅಗಲವಾದ ಕೆಂಪು ಗುಂಡಿಗಳಿದ್ದವು. ಹುಡುಗಿ ನಿಂತಿದ್ದ ಒಂದು ಚೆಲುವಿನ ಭಂಗಿ ಅನಸೂಯೆಯ ಕಣ್ಣುಗಳನ್ನು ಹೆಚ್ಚು ಆಕರ್ಷಿಸಿದುವು.

ನೋಡುತ್ತಿದ್ದ ಹಾಗೆಯೇ ಆ ಹುಡುಗಿ ನೆಟ್ಟಗೆ ಅನಸೂಯೆಯ ಬಳಿಗೇ ನಡೆದು ಬಂದು, ಮೃದುವಾಗಿ ನಗುತ್ತ ದೈನ್ಯದಿಂದ ಕೇಳಿದಳು : 'ನನಗೊಂದು ಉಪಕಾರ ಮಾಡಬಲ್ಲಿರಾ?'

– 'ನನ್ನಿಂದ ಆಗುವುದಾದರೆ....ಆಗಬಹುದಾದರೆ, ಹೇಳಮ್ಮ?'

– 'ನೋಡೀ ! ನಾನು ಚಿಕ್ಕವಳು, ಆದ್ದರಿಂದ ಟಿಕೇಟು ಕೊಡುವುದಿಲ್ಲ. ನೋಡಬೇಕೆಂಬ ಆಶೆ ಇದೆ. ಮಕ್ಕಳಿಗೆ ಅರ್ಧ ಛಾರ್ಜಂತೆ–ಇಗೋ ಕೊಳ್ಳಿ ನನ್ನ ಟಿಕೇಟಿನ ಹಣ–ಎರಡನೆಯ ತರಗತಿಗೆ...'

– 'ಅದೆಷ್ಟು ಹೊತ್ತಿನಿಂದ ಅಲ್ಲಿಯೇ ನಿಂತಿದ್ದೆ?'

– 'ಸ್ವಲ್ಪ ಹೊತ್ತಿನಿಂದ. ಇಲ್ಲಿ ಇನ್ಯಾರನ್ನೂ ಕೇಳುವ ಧೈರ್ಯ ಬರಲಿಲ್ಲ ನನಗೆ.'

ಅನಸೂಯೆಯೂ ಎರಡನೆಯ ತರಗತಿಗೇ ಹಣ ಹಿಡಿದು ನಿಂತಿದ್ದಳು. ಸರದಿ ಬಂದಾಗ ತನಗೆ ಪೂರ ಟಿಕೆಟೊಂದನ್ನೂ ಹುಡುಗಿಗೆ ಅರ್ಧ ಟಿಕೆಟನ್ನೂ ಕೊಂಡಳು. ಮಧ್ಯಾಹ್ನದ 'ಷೋ' ಇನ್ನೂ ಮಗಿದಿರಲಿಲ್ಲವಾದ್ದರಿಂದ, ವರಾಂಡದಲ್ಲಿದ್ದ ಬೆಂಚುಗಳ ಮೇಲೆ ಹತ್ತು ನಿಮಿಷ ಕೂತಿರಬೇಕಾಯಿತು. ಹುಡುಗಿಯೂ ಬಂದು ಅವಳ ಪಕ್ಕದಲ್ಲಿಯೇ ಕುಳಿತಳು.

ಅನಸೂಯೆಗೆ ಆಗ ತಾನೊಂದು ನ್ಯಾಯ ಬಾಹಿರವಾದ ಕಾರ್ಯವನ್ನು ಮಾಡಿದೆನೆಂಬ ಶಂಕೆ ತಲೆದೋರಿತು. ಹುಡುಗಿಯನ್ನು ನೋಡಿ, 'ಏನೆ ಮಗು! ನನ್ನ ಕೈಯಿಂದ ಒಂದು ತಪ್ಪು ಕೆಲಸವನ್ನು ಮಾಡಿಸಿಬಿಟ್ಟೆಯಲ್ಲಾ! ನಿನ್ನ ತಾಯಿ ಬಲ್ಲಳೆ? ನೀನು ಕೇಳಿ ಬಂದೆಯ? ನಿನ್ನೊಬ್ಬಳನ್ನೆ ಕಳಿಸಿಕೊಟ್ಟಳೆ?' ಎಂದು ಕೇಳಿದಳು.

ಹುಡುಗಿ ಏನೊಂದು ಉತ್ತರವನ್ನೂ ಕೊಡಲಿಲ್ಲ. ಹಾಕಿಕೊಂಡಿದ್ದ ಕೋಟನ್ನು ಬಿಚ್ಚಿ ನಾಜೋಕಾರಿ ಮಡಚಿ ತೊಡೆಯ ಮೇಲಿಟ್ಟುಕೊಂಡಳು. ಮೈಮೇಲೆ ತಿಳಿ ನೀಲಿಬಣ್ಣದ ಫ್ರಾಕ್ ತೊಟ್ಟಿದ್ದಳು. ಕುತ್ತಿಗೆಯಲ್ಲಿ ನವುರಾದ ಚಿನ್ನದ ಸರ ಇತ್ತು. ಉತ್ತರ ಕೊಡಲು ಏನೂ ತೋಚದ ಹುಡುಗಿ ಸರದೊಡನೆ ತನ್ನ ಕೈಬೆರಳುಗಳಿಂದ ಆಡತೊಡಗಿದಳು. ಹುಡುಗಿಯ ಆ ವಿಶಾಲವಾದ ಕಣ್ಣುಗಳಲ್ಲಿ ಚಂಚಲತೆ ಚಪಲತೆ ಕಾಣಬರಲಿಲ್ಲ. ಅವಳ ಸುಂದರವಾದ ಕೈಯೂ ಬೆರಳುಗಳೂ ಮುಂದೆ ಬೆಳೆಯಬಹುದಾದ ಕಲಾನೈಪುಣ್ಯದ ಸೂಚಕಗಳಾಗಿದ್ದುವು. ಹುಡುಗಿ ಒಂದು ಸಲ ತಲೆಯೆತ್ತಿ ಅನಸೂಯೆಯನ್ನು ನೋಡಿ 'ಪುಣ್ಯಕಥೆಯಲ್ಲವೆ?' ಎಂದು ಹೇಳಿ ಸುಮ್ಮನಾದಳು.

ಅನಸೂಯೆ ಕೇಳಿದ ಎಲ್ಲ ಪ್ರಶ್ನೆಗಳಿಗೂ ಇದು ಸೂಕ್ತವಾದ ಒಂದೇ ಉತ್ತರವಾಗಿತ್ತು. ಹುಡುಗಿಗೆ ಒಂದು ಪೆಪ್ಪರ್‌ಮಿಂಟ್ ಕೊಟ್ಟು 'ನಿನ್ನ ಹೆಸರೇನೆ?' ಕೇಳಿದಳು ಅನಸೂಯೆ.

'ಅನಸೂಯೆ.'

'ಆಶ್ಚರ್ಯ ಇದು. ನಿನ್ನ ಹೆಸರೂ ಅನಸೂಯೆಯೆ!... ನನ್ನ ಹೆಸರೂ ಅನಸೂಯೆ. ಇನ್ನು ಮುಂದಿನ ಹೆಸರು ಅನಸೂಯೆ. ಟಿ. ಚಂದ್ರಶೇಖರ ಅಲ್ಲ ತಾನೆ!'

'ಬರೀ ಅನಸೂಯೆ.'

'ಅಂತೂ ಇದು ಆಶ್ಚರ್ಯವೆ!'

'ಸಾಧಾರಣಮಟ್ಟಿಗೆ' ಎಂದು ಹುಡುಗಿ ಬಾಯಲ್ಲಿದ್ದ ಪೆಪ್ಪರ್‌ಮಿಂಟನ್ನು ನಾಲಗೆಯಿಂದ ತಿರುವುತ್ತ ಹೇಳಿದಳು.

'ಈ ವಯಸ್ಸಿಗೆ ನಿನ್ನ ಈ ಭಾಷಾಸಂಪತ್ತಿ ಅಪರೂಪ.'

'ಹೌದೆ?'

'ಹೌದೆಂದೇ ಕಾಣುತ್ತೆ....ಇರಲಿ. ನೀನು ಸಿನಿಮಾಗಳನ್ನು ಹೆಚ್ಚು ನೋಡುತ್ತೀಯಾ?'

'ಇಲ್ಲ. ಇದೇ ಮೊದಲು. ನನ್ನ ಹೆಸರು ಅನಸೂಯೆ....ನಿನ್ನ ಹೆಸರೂ ಅನಸೂಯೆ. ಈವತ್ತಿನ ಚಿತ್ರದ ಹೆಸರೂ ಸತೀ ಅನಸೂಯೆ. ಇದು ಇನ್ನೂ ಆಶ್ಚರ್ಯವಲ್ಲವೆ!

ಅಷ್ಟು ಹೊತ್ತಿಗೆ ಮಧ್ಯಾಹ್ನದ 'ಷೋ' ಮುಗಿದು, ಒಳಗಿದ್ದ ಜನ ಹೊರಕ್ಕೆ ಬಂದರು. ಇವರಿಬ್ಬರೂ ಒಳಕ್ಕೆ ಹೋಗಿ ತಮ್ಮ ತಮ್ಮ ಸ್ಥಾನಗಳನ್ನು ಆರಿಸಿ ಕುಳಿತುಕೊಂಡರು. ಚಿಕ್ಕ ಅನಸೂಯೆ ಸ್ವಲ್ಪ ಮುಂದಿನ ಸೀಟಿನಲ್ಲಿ ಕುಳಿತಳು. ಹತ್ತು ನಿಮಿಷಗಳ ಅನಂತರ 'ಷೋ' ಪುನಃ ಮೊದಲಾಯ್ತು.

'ಷೋ' ಮುಗಿದಾಗ ಇಬ್ಬರೂ ಬೇರೆಬೇರೆಯಾದರು. ಚಿಕ್ಕವಳು ಮನೆಗೆ ಹೋದಳೆಂದುಕೊಂಡು ಅನಸೂಯೆ ತನ್ನ ಮನೆಯ ಕಡೆ ನಡೆದಳು.

ಐದನೆಯ ದಿನ ಆಕಾಶವನ್ನು ದಟ್ಟವಾಗಿ ಕವೆದಿದ್ದ ಮೋಡಗಳು ಸ್ವಲ್ಪ ತೆಳವಾದುವು. ಅಲ್ಪ ಸ್ವಲ್ಪ ಸೂರ್ಯರಶ್ಮಿಯನ್ನು ಕಂಡು ಜನ ಪ್ರಫುಲ್ಲಚಿತ್ತರಾದರು. ಅಂದು ಸಂಜೆ ಅನಸೂಯೆ ಮಾರ್ಕೆಟ್‌ಗೆ ಹೋಗಿ ತನಗೆ ಬೇಕಾದ್ದನ್ನು ಕೊಂಡು ತಂದು, ಅಡುಗೆ ಮಾಡಿ, ಊಟ ಮುಗಿಸಿ, ರಾಮನಿಗೂ ಹಣ್ಣು ಮೇವುಗಳನ್ನು ಇಟ್ಟು, ಪಂಜರದೊಳಕ್ಕೆ ಸೇರಿಸಿ, ರಾತ್ರಿ ಹತ್ತು ಗಂಟೆಯ ತನಕ ಓದುತ್ತಿದ್ದು, ಅನಂತರ ಹಾಸುಗೆ ಬಿಡಿಸಿ, ದೀಪವಾರಿಸಿ, ಮಲಗಿದಳು.

ಆಗ ಹೊರಬಾಗಿಲನ್ನು ಯಾರೋ ಬಲವಾಗಿ ತಟ್ಟಿದಂತೆ ಸದ್ದಾಯಿತು. ಯಾರೂ ಕೂಗಿ ಕರೆದ ಶಬ್ದ ಕೇಳಿಬರಲಿಲ್ಲ. ಪರಿಚಿತರು ಬಾಗಿಲನ್ನು ತಟ್ಟಿದ್ದರೆ ಆಕೆಯ ಹೆಸರನ್ನು ಕೂಗುತ್ತಿದ್ದರು. ಆಗ ಯಾರೂ ಬಾಯಿಬಿಟ್ಟು ಕರೆಯಲಿಲ್ಲ. ಮತ್ತೆ ಬಾಗಿಲನ್ನು ತಟ್ಟಿದ ಶಬ್ದವಾಯಿತು. ಈಗಲೂ ಕರೆದ ಶಬ್ದವಿಲ್ಲ. 'ಕೂಗಿ ಕರೆದಾರು' ಎಂದು ಅನಸೂಯೆ ಹಾಸಿಗೆಯಲ್ಲಿ ಎದ್ದು ಕುಳಿತಳು. ಬರೀ ಬಾಗಿಲು ತಟ್ಟಿದ ಶಬ್ದ ಒಂದು ವಿನಾ, ಕರೆದ ಶಬ್ದವಿಲ್ಲ. ಪರಿಚಿತರು, ದಿನಸಿ ಅಂಗಡಿಯ ಆಳುಗಳು, ಹಾಲಿನವನು, ಕಟ್ಟಿಗೆ ಇದ್ದಿಲು ಅಂಗಡಿಯವರು, ಹೀಗೆ ಬಂದು ಬಾಗಿಲು ತಟ್ಟುವುದುಂಟು. 'ಅಮ್ಮಾ....ಅಮ್ಮಾವ್ರೇ' ಎಂದು ಕೂಗಿ ಕರೆಯುವುದೂ ವಾಡಿಕೆ.

ಅನಸೂಯೆ ಸ್ವಲ್ಪ ಧೈರ್ಯ ತಂದುಕೊಂಡು, ಸರ್ವಸಮಯಕ್ಕೂ ನೆಚ್ಚಿನ ಬಂಟನೆನ್ನಬಹುದಾದ ಕೈಬೆತ್ತ ಒಂದನ್ನು ಬೆನ್ನ ಹಿಂದೆ ಮರೆಸಿಟ್ಟುಕೊಂಡು, 'ಬಂದೆ...ಬಂದೆ' ಎನ್ನುತ್ತ ಹೊರಬಾಗಿಲ ಬಳಿಗೆ ಬಂದು, ಮುಂದಿನ ಕೈಸಾಲೆಯ ದೀಪವನ್ನು 'ಸ್ವಿಚ್ ಆನ್' ಮಾಡಿ ಅಗಳಿಯನ್ನು ಸಡಿಲಿಸಿ ಎಳೆದು, ತೆರೆದ ಕದದ ಹಿಂದೆ ಅರ್ಧಮರೆಯಾಗುವಂತೆ ನಿಂತು 'ಯಾರು?' ಎಂದಳು.

ಕೈಸಾಲೆಯ ದೀಪದ ಪ್ರಕಾಶದಲ್ಲಿ, ಬಾಗಿಲನ್ನು ಅಷ್ಟು ಹೊತ್ತು ತಟ್ಟುತ್ತಿದ್ದವರನ್ನು ಅನಸೂಯೆ ನೋಡಿದಳು. ಆಕೆಗೆ ಗುಕ್ಕು ಹಿಡಿದಂತಾಯಿತು. ಮೆಲುದನಿಯಲ್ಲಿ ಮಂದಹಾಸದಿಂದ 'ನಾನು' ಎಂದಳು ಕಿಶೋರಿ.

'ನೀನೇ! ಅನಸೂಯೆ! ಇಷ್ಟು ಹೊತ್ತೂ ಬಾಗಿಲು ತಟ್ಟುತ್ತಿದ್ದವಳು?'

'ಹೌದು. ತಟ್ಟುತ್ತಲೇ ಇದ್ದೆ....ಬಾಗಿಲು ತೆರೆಯಿರೆಂದು...ನೀವು ಒಳಗೆ ಇದ್ದೀರೆಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ನನ್ನನ್ನು ನೋಡಿ ಈಗ ನಿಮಗೆ ಸಂತೋಷವಾಗುವುದಿಲ್ಲವೆ?'

ಅನಸೂಯೆಗೆ ಏನೆನ್ನುವುದಕ್ಕೂ ಆಗಲಿಲ್ಲ. ಹುಡುಗಿ ತೊಟ್ಟಿದ್ದ ಉಡುಗೆ ಇಂದು ಬೇರೆ ಆಗಿತ್ತು. ತಲೆಯ ಎರಡು ಜಡೆಗಳೂ ಇರ್ಕಡೆಗಳಲ್ಲಿ ಸುರುಳಿ ಸುತ್ತಿಕೊಂಡು ಅಂದವಾಗಿ ಕುಳಿತಿದ್ದವು. ಬೈತಲೆ ನೆಟ್ಟಗಿತ್ತು. ಮೈಮೇಲೆ ಹಿಂದಿನ ವೆಲ್ವೆಟೀನ್ ಕೋಟೇ ಇದ್ದಿತಾದರೂ, ಕುತ್ತಿಗೆಯ ಸುತ್ತ ಒಂದು ಬಿಳಿಯ ಉಣ್ಣೆಯ ಮಫ್ಲರ್ ಇತ್ತು.

'ಇಷ್ಟು ಹೊತ್ತೂ ಹೊರಗೆ ಈ ಛಳಿಯಲ್ಲೇ ನಿಂತಿದ್ದೆ. ನನ್ನನ್ನು ಒಳಕ್ಕೆ ಕರೆದುಕೊಳ್ಳುವುದಿಲ್ಲವೆ!'

'ಇಷ್ಟು ರಾತ್ರಿಯಲ್ಲಿ!'

'ಅದರೇನಾಯ್ತು? ನನಗೆ ನಿಮ್ಮನ್ನು ಕಾಣಬೇಕೆಂಬ ಆಶೆ ಆಯ್ತು, ಮೂರುನಾಲ್ಕು ದಿನ ಮಳೆಬಿಡಲೇ ಇಲ್ಲವಲ್ಲ. ನನ್ನನ್ನು ಒಳಕ್ಕೆ 'ಬಾ' ಎನ್ನಿರಿ. ಇಲ್ಲಿ ಛಳಿಯಿಂದ ಸೆಟೆದುಹೋಗುತ್ತಿದ್ದೇನೆ. ನಾನು ತೊಟ್ಟಿರುವ ಬಟ್ಟೆ ಎಲ್ಲ ನೂಲಿನದು....ಬರೀ ನೂಲು'–

ನಿನಗೆ ಏನು ಬೇಕು, ಅನಸೂಯೆ? ಇಷ್ಟು ಹೊತ್ತಿನಲ್ಲಿ ಬಂದೆಯಲ್ಲಾ?' ತಾನು ನಿಂತಿದ್ದ ಸ್ಥಳದಿಂದಲೆ ಬೆಪ್ಪಾಗಿ ಎಲ್ಲವನ್ನೂ ನೋಡುತ್ತಿದ್ದ ಅನಸೂಯೆ ಕೇಳಿದಳು.

'ಕುಳಿತುಕೊಳ್ಳಿ' ನೀವು ನಿಂತೇ ಕೇಳುತ್ತಿರುವುದನ್ನು ನೋಡಿದರೆ, ನನ್ನನ್ನು ಈ ಛಳಿಯಲ್ಲಿ ಈಗಲೆ ಹೊರಗೆ ಅಟ್ಟುವಿರೆಂದು ಭಯವಾಗುತ್ತಿದೆ.'

ಅನಸೂಯೆ ವಿಧಿಯಿಲ್ಲದೆ ಒಂದು ಬೆತ್ತದ ಕುರ್ಚಿಯಲ್ಲಿ ಕುಳಿತುಕೊಂಡು, ಮತ್ತೆ ಚಿಕ್ಕವಳನ್ನು ಕೇಳಿದಳು : 'ನಿನಗೆ ಏನಾದರೂ ಬೇಕೇನು?'

'ನಾನು ನಿಮ್ಮನ್ನು ಕಾಣಲು ಬಂದದ್ದು ನಿಮಗೆ ಏನೂ ಉತ್ಸಾಹವಿಲ್ಲವೆಂದೇ ಕಾಣುತ್ತಿದೆ.'

ಹುಡುಗಿ ಮತ್ತೆ ಕೇಳಿದ ಈ ಪ್ರಶ್ನೆಗೆ ಅನಸೂಯೆ ಉತ್ತರವೀಯಲು ಆಗಲಿಲ್ಲ. ಮನಸ್ಸಿನಲ್ಲಿ ಒಂದು ಇರುತ್ತ, ಬಾಯಲ್ಲಿ ಬೇರೊಂದನ್ನು ಹೇಳಲು ಅವಳಿಗೆ ಸಾಧ್ಯವಾಗಲಿಲ್ಲ. ಅವಳ ಕೈಯೇನೊ ಒಂದು ಮೂಕ ಅಭಿನಯವನ್ನು ತೋರಿತು. ಚಿಕ್ಕವಳು ಅದನ್ನು ಕಂಡು 'ಕಿಲಕಿಲ' ನಕ್ಕು, ಸೋಫಾದ ಬೆನ್ನಿಗೆ ಚೆನ್ನಾಗಿ ಒರಗಿ ಕುಳಿತಳು. ಆಗ ಸೂರಿನಿಂದ ತೂಗುಬಿಟ್ಟಿದ್ದ ಪ್ರಕಾಶವಾದ ಎಲೆಕ್ಟ್ರಿಕ್ ದೀಪದ ಬೆಳಕು ಚಿಕ್ಕವಳ ಮುಖದ ಮೇಲೆ ಚೆನ್ನಾಗಿ ಪ್ರಸರಿಸಿತು. ಹಿಂದೆ ಸಿನಿಮಾದ ದಿನ ಅನಸೂಯೆ ಚಿಕ್ಕವಳ ಮುಖದಲ್ಲಿ ಕಂಡಿದ್ದ ರಕ್ತಹೀನತೆ ಈಗ ಇರಲಿಲ್ಲ. ಈಗ ಮುಖ ತುಂಬಿತ್ತು. ಕಾಂತಿಯಿಂದಿತ್ತು. ಹಿರಿಯ ಅನಸೂಯೆ ಕೇಳಿದಳು :

'ನಾನಿರುವ ಮನೆಯನ್ನು ನೀನು ಹೇಗೆ ಪತ್ತೆ ಮಾಡಿದೆ?'

'ಪ್ರಶ್ನೆಯ ಅವಶ್ಯಕತೆಯೇ ಇಲ್ಲ. ನನ್ನ ಹೆಸರನ್ನು ನಾನೇ ಮರೆಯುವುದು ಸಾಧ್ಯವಿಲ್ಲ. ಬೇರೆಯಾಗಿದ್ದರೆ ಮರೆತುಬಿಡುತ್ತಿದ್ದೆನೊ!'

'ಒಳ್ಳೇ ಚೂಟಿ ಹುಡುಗಿ ನೀನು! ನಿಮ್ಮಮ್ಮ ನಿನ್ನನ್ನು ಈ ಅವೇಳೆಯಲ್ಲಿ ಬೀದಿ ಅಲೆಯಲು ಬಿಟ್ಟಳೆ? ಈ ಛಳಿಯಲ್ಲಿ ಈ ಸೊಳ್ಳೆಪರದೆ ಬಟ್ಟೆಗಳನ್ನು ನಿನಗೆ ಉಡಿಸಿ ಕಳಿಸಿರಬೇಕಾದರೆ, ಆಕೆಗೆ ತಲೆ ಕೆಟ್ಟಿರಬೇಕು?'

ಚಿಕ್ಕವಳು ಎದ್ದು, ಒಂದು ಕಡೆ ತೂಗುಹಾಕಿದ್ದ ಗಿಳಿಯ ಪಂಜರದ ಕೆಳಕ್ಕೆ ನಡೆದು, ಕತ್ತೆತ್ತಿ ನೋಡಿ, 'ಓ! ಗಿಳಿ! ಪಂಚವರ್ಣದ ಗಿಳಿ ನಿದ್ದೆ ಮಾಡುತ್ತಿದೆ. ನಾನದನ್ನು ಎಬ್ಬಿಸಿದರೆ ನೀವೇನಾದರೂ ಅಂದುಕೊಳ್ಳುತ್ತೀರಾ? ಅದು ಮಾತನಾಡುತ್ತದೆಯೇ?' ಎಂದು ಕೇಳಿದಳು.

'ರಾಮನನ್ನು ನಿದ್ದೆ ಮಾಡಲು ಬಿಡು. ಸುಮ್ಮನಿರು. ನೀನೀಗ ಅದನ್ನು ಎಚ್ಚರಗೊಳಿಸಲು ಪ್ರಯತ್ನಿಸಬೇಡ.' ಹಸಿದಿದ್ದೇನೆ; ತಿನ್ನುವುದಕ್ಕೆ ಏನಾದರೂ ಕೊಡಿ. ಕಡೆಗೆ ಒಂದು ಬಾಳೆಯ ಹಣ್ಣು, ಒಂದು ಬಟ್ಟಲು ಹಾಲು ಇದ್ದರೂ ಸಾಕು.'

'ಏನಿದೆಯೋ ನೋಡುತ್ತೇನೆ. ಹಾಲಂತೂ ಕೊಡುತ್ತೇನೆ. ಕುಡಿದು ಬಿಟ್ಟು ಜಾಣೆಯಂತೆ ಮನೆಗೆ ಹೋಗುತ್ತೀಯಲ್ಲವೆ? ನೋಡು, ನಡುರಾತ್ರಿಯಾಗುತ್ತ ಬಂತು?'

'ಹೊರಗೆ ತುಂಬ ಕತ್ತಲು, ಬಲು ಛಳಿ.'

'ಇಷ್ಟು ಅವೇಳೆಯಲ್ಲಿ ನೀನಿಲ್ಲಿಗೆ ಬರಲೇಬಾರದಿತ್ತು.' ಹೀಗೆಂದಾಗ ಅನಸೂಯೆಗೆ ಗುಕ್ಕು ಹಿಡಿದಂತಾಯಿತು. 'ಹೊರಗೆ ಛಳಿಯಾದರೆ ನಾನೇನು ಮಾಡಲಿ? ನೆಟ್ಟಗೆ ಮನೆಗೆ ಓಡಿಬಿಡು. ನೀನೆಲ್ಲಿಗೆ ಹೋದೆಯೆಂದು ನಿನ್ನ ತಾಯಿ ನಿನಗಾಗಿ ಊರೆಲ್ಲ ಹುಡುಕುತ್ತಿರುವರೋ ಏನೊ! ತಿನ್ನುವುದಕ್ಕೆ ಕೊಟ್ಟರೆ ಖಂಡಿತ ಹೊರಟುಹೋಗುತ್ತೇನೆಂದು ಹೇಳು.'–

ಚಿಕ್ಕವಳಿಗೆ ಇದಕ್ಕೇನು ಉತ್ತರ ಕೊಡಬೇಕೆಂದು ಹೊಳೆಯಲಿಲ್ಲ. ಒಂದರ್ಧನಿಮಿಷ ತಲೆಯ ಹಿಂಭಾಗವನ್ನು ಆಲೋಚನೆಗಾಗಿ ಕೆರೆದುಕೊಂಡಳು. ಹೊಳೆಯಲಿಲ್ಲ. ಅನಂತರ ಮುಖವನ್ನು ಗಿಳಿಯ ಪಂಜರದ ಕಡೆಗೆ ತಿರುಗಿಸಿಕೊಂಡು 'ಹೂಂ' ಎಂದಳು.

'ಅನಸೂಯೆ, ರಾಮನನ್ನು ಎಬ್ಬಿಸಬೇಡವೆಂದು ನಿನಗೆ ಹೇಳಿದ್ದೆ...ಆದರೂ ನೀನು...'–

ಉತ್ತರ ಬರಲಿಲ್ಲ. ಹಿರಿಯ ಅನಸೂಯೆ ಇನ್ನೊಂದು ಸಲ ಹೇಳಿದ್ದನ್ನೆ ಕೂಗಿ ಹೇಳಿದಳು. ಅದಕ್ಕೂ ಉತ್ತರ ಬರಲಿಲ್ಲ....ಪಿಂಗಾಣಿ ತಟ್ಟೆಯೊಂದರಲ್ಲಿ ಎರಡು ಕೋಡುಬಳೆ, ಒಂದು ರಸಬಾಳೆಹಣ್ಣು, ಒಂದು ಗ್ಲಾಸಿನಲ್ಲಿ ಹಾಲು ಹಿಡಿದು ತಂದು ಅದನ್ನು ಕೋಣೆಯ ಚಿಕ್ಕ ಮೇಜೊಂದರ ಮೇಲಿಟ್ಟಳು.

ಕೋಣೆಯಲ್ಲಿ ಚಿಕ್ಕವಳು ಇರಲಿಲ್ಲ. ರಾಮನ ಪಂಜರದ ನವುರು ಬುರುಕಿ ಮೇಲಕ್ಕೆತ್ತಲ್ಪಟ್ಟಿತ್ತು. ರಾಮ ಮತ್ತೆ ಅಂದಿತು! 'ಓ ಬೆಳಗಾಯಿತು.... ಬೆಳಗಾಯಿತು... ರಾಮ... ರಾಮ.'

ಇಷ್ಟರಲ್ಲಿ ಚಿಕ್ಕವಳು ಎಲ್ಲಿಗೆ ಹೋದಳೆಂದು ಅನಸೂಯೆಗೆ ಆಶ್ಚರ್ಯವಾಯಿತು. ಪಕ್ಕದ ಕೋಣೆಯನ್ನು ಹೊಕ್ಕು ನೋಡಿದಳು. ಆ ಕೋಣೆಯಲ್ಲಿ ಹಿರಿಯ ಅನಸೂಯೆ ಅನೇಕ ಸುಂದರ ಆಕರ್ಷಣೀಯ ವಸ್ತುಗಳನ್ನು ಅಲಂಕಾರವಾಗಿ ಜೋಡಿಸಿಟ್ಟಿದ್ದಳು. ಒಂದು ದೊಡ್ಡ ಗಾಜಿನ ಬೀರುವಿನಲ್ಲಿ ಪುಸ್ತಕಗಳಿದ್ದುವು. ಪಕ್ಕದಲ್ಲಿ ಓದುವುದಕ್ಕೆ, ಬರೆಯುವುದಕ್ಕೆ ಅಂದವಾದ ಮೇಜು. ಮೇಲೊಂದು ವಿದ್ಯುತ್ ದೀಪದ ಸ್ಟ್ಯಾಂಡ್. ಒಂದು ಮೂಲೆಯಲ್ಲಿ ಅಂತಸ್ತುಗಳಿದ್ದ ಮೇಜು. ಒಂದೊಂದು ಅಂತಸ್ತಿನಲ್ಲಿಯೂ ಚಿಕ್ಕ ಚಿಕ್ಕ, ಬೆಳ್ಳಿಯ ಮತ್ತು ಮಣ್ಣಿನ ಬಣ್ಣದ ಗೊಂಬೆಗಳು. ಮೇಲಿನ ಅಂತಸ್ತಿನಲ್ಲಿ, ಸಣ್ಣ ಮಗುವಿನ ನಿಜ ಆಕಾರದಷ್ಟೆ ಗಾತ್ರದ ಒಂದು ಸೆಲುಲಾಯ್ಡ್‌ನಲ್ಲಿ ಎರಕ ಹುಯ್ದಿದ್ದ ಮುದ್ದಾದ ಒಂದು ಹೆಣ್ಣು ಗೊಂಬೆ. ಅದಕ್ಕೆ ಸುಂದರವಾದ ರೇಷ್ಮೆಯ ಫ್ರಾಕ್ ಹಾಕಿತ್ತು. ತಲೆಗೆ ಒಂದು ಬಣ್ಣದ ರಿಬ್ಬನ್ ಇತ್ತು. ಅದರ ಕೊರಳಲ್ಲಿ ಚಿನ್ನದ ರೇಖಿನ ಪದಕದ ಸರ 'ಫಳಫಳನೆ' ಹೊಳೆಯುತ್ತಿತ್ತು.

ಚಿಕ್ಕವಳು ಆ ಕೋಣೆಯಲ್ಲಿ ನಿಂತು ಬೊಂಬೆಯನ್ನೇ ನೋಡುತ್ತಿದ್ದಳು.

'ಇಲ್ಲಿ ಏನು ಮಾಡುತ್ತಿದ್ದೀಯೆ ನೀನು!'

ಚಿಕ್ಕವಳು ಕತ್ತೆತ್ತಿ ಅನಸೂಯೆಯನ್ನು ನೋಡಿದಳು. ಅವಳ ಕಣ್ಣುಗಳಲ್ಲಿ ಪುನಃ ಅದೇ ಆಳವಾದ ನಿಗೂಢ ದೃಷ್ಟಿ ಇತ್ತು.

'ಏನನ್ನೂ ಮಾಡುತ್ತಿಲ್ಲ. ಸುಮ್ಮನೆ ನೋಡುತ್ತಿದ್ದೆ. ಎಲ್ಲವೂ ಚೆನ್ನಾಗಿದೆ. ಕಾಗದದ ಹೂವಿನಂತೆಯೆ....ಅದು ಒಂದು ಗೊಂಬೆ...ಅದರ ಕತ್ತಿನಲ್ಲಿರುವ ಸರ ಬಲು ಚೆನ್ನಾಗಿದೆ' ಎನ್ನುತ್ತ ಆ ಸರವನ್ನು ತನ್ನ ಕೈಗೆ ಎತ್ತಿಕೊಂಡಳು.

ಅನಸೂಯೆಗೆ ಗುಕ್ಕು ಹಿಡಿದಂತಾಯಿತು. ತಲೆ ಸುತ್ತು ಬಂದಂತೆ ಆಯಿತು. ಎದೆ ಡವಡವ ಬಡಿದುಕೊಳ್ಳಲಾರಂಭಿಸಿತು. ಆಸರೆಗಾಗಿ ಗೋಡೆಗೆ ಒರಗಿ ನಿಂತುಕೊಂಡರು– 'ಆ ಸರವನ್ನು ಅಲ್ಲಿಯೆ ಇಟ್ಟುಬಿಡು, ಮಗು. ಅದು ನನ್ನ ಯಜಮಾನರು ನನಗೆ ಕೊಟ್ಟಿದ್ದು...ನೆನಪಿನ ವಸ್ತುವದು' ಎಂದು ಕಂಪಿಸುತ್ತಿದ್ದ ಧ್ವನಿಯಲ್ಲಿ ಅಂದಳು.

'ಇದು ತುಂಬ ಚೆನ್ನಾಗಿದೆ. ನೀವು ನನಗೆ ಕೊಡಿ. ನಾನು ಹಾಕಿಕೊಳ್ಳುತ್ತೇನೆ.'

ಅನಸೂಯೆಗೆ ಅದು ಅಭಿಜ್ಞಾನಾಭರಣ. ಅದನ್ನು ಚಿಕ್ಕವಳ ಕೈಯಿಂದ ರಕ್ಷಿಸಿಕೊಳ್ಳುವ ಬಗೆಯಾಗಲಿ, ಅದಕ್ಕೆ ತಕ್ಕ ಮಾತಿನ ಚಾತುರ್ಯವಾಗಲಿ ಅವಳಿಗೆ ಹೊಳೆಯಲಿಲ್ಲ. ಇದನ್ನು ಯಾರೊಡನೆ ಹೇಳಿಕೊಳ್ಳುವುದು? ಕೇಳುವವರ್ಯಾರು? ಅಲ್ಲಿ, ಅಂತಹ ತುಂಬುಪಟ್ಟಣದಲ್ಲಿ, ಅಕಸ್ಮಾತ್ ಒದಗಬಹುದಾದ ಇಂತಹ ಸಂದರ್ಭಗಳಲ್ಲಿ ನಾನು ಒಬ್ಬೊಂಟಿಗಳೂ ನಿಸ್ಸಹಾಯಕಳೂ ಆಗಿರುವೆನೆಂದು ಅಷ್ಟು ವರ್ಷಗಳ ನಂತರ ಆಕೆಗೆ ಥಟ್ಟನೆ ಎಚ್ಚರಿಸಿದಂತಾಯಿತು.

***

ಚಿಕ್ಕವಳು ದೊಡ್ಡ ಕೋಣೆಗೆ ಸಂತೋಷದಿಂದ ಹಿಂದಿರುಗಿ, ಸೋಫದಲ್ಲಿ ಕುಳಿತು, ಕೋಡುಬಳೆ, ಬಾಳೆಹಣ್ಣುಗಳನ್ನು ತಿಂದಳು. ಹಾಲನ್ನು ಕುಡಿದಳು. ಈಗ ಅವಳ ಕುತ್ತಿಗೆಯಲ್ಲಿ ಆ ಪದಕ ಸರ, ಗೊಂಬೆಯ ಎದೆಯ ಮೇಲಿದ್ದಂತೆ ನಿಶ್ಚಲವಾಗಿರದೆ ಜೀವದಿಂದ ಕೂಡಿ ನಲಿನಲಿದು ನಿಗಿನಿಗಿ ಹೊಳೆಯುತ್ತಿತ್ತು. 'ಕೋಡುಬಳೆ ಚೆನ್ನಾಗಿದೆ, ಹಾಲಿಗೆ ಒಂದು ಚಿಟಿಕೆ ಸಕ್ಕರೆ ಇದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ಏಕೆ, ಮನೆಯಲ್ಲಿ ಏನೂ ಸಿಹಿತಿಂಡಿ ಇಲ್ಲವೆ? ನನಗೆ ಸಿಹಿ ಇಷ್ಟ' ಎಂದಳು.

ಅನಸೂಯೆ ಬೆಪ್ಪು ಹಿಡಿದವಳಂತೆ ಕುಳಿತುಕೊಂಡು, ಚಿಕ್ಕವಳು ತಿನ್ನುತ್ತಿದ್ದುದನ್ನೇ ನೋಡುತ್ತಿದ್ದಳು....ಮಾತನಾಡಲಿಲ್ಲ. ಮಾತನಾಡುವುದಕ್ಕೆ ಆಗಲಿಲ್ಲ.

'ಸಿಹಿ ಏನೂ ಇಲ್ಲವೆ ಮನೆಯಲ್ಲಿ?' ಇನ್ನೊಮ್ಮೆ ಕೇಳಿದಳು ಚಿಕ್ಕವಳು.

ಅನಸೂಯೆಗೆ ಈಗ ನೆಲಕ್ಕೆ ಕುಸಿದಂತಾಯಿತು. ಒಂದು ಬಗೆಯಲ್ಲ, ನಾನಾ ಬಗೆಯ ಯೋಚನೆಗಳೂ ಸಂಕಟಗಳೂ ಏಕಕಾಲದಲ್ಲಿ ಆಕೆಯ ಎದೆಯಲ್ಲಿ ತಳಮಳಿಸತೊಡಗಿದ್ದವು. ಆಕೆ ತನಗಿದ್ದ ಚೈತನ್ಯವನ್ನೆಲ್ಲ ಹೇಗೋ ಒಟ್ಟುಗೂಡಿಸಿಕೊಂಡು– 'ತಿನ್ನಲು ಕೊಟ್ಟರೆ ಹೋಗುತ್ತೇನೆಂದು ಮಾತು ಕೊಟ್ಟಿದ್ದೆಯಲ್ಲವೆ ನೀನು....ಈಗ ತಿಂದು ಆಯಿತಲ್ಲ' – ಎಂದು ಕೇಳಿಯೇಬಿಟ್ಟಳು.

'ಹೌದೆ...ಹಾಗೆಂದೆನೆ!'

'ಹೌದು. ಆ ಭರವಸೆಯ ಮಾತಿನ ಮೇಲೆಯೆ ನಿನಗೆ ತಿನ್ನಲು ಕೊಟ್ಟೆ....ಹಾಲು ಕಾಯಿಸಿಕೊಟ್ಟೆ. ನನಗೆ ಯಾಕೋ ಈಗ ಬಲು ಆಯಾಸವಾಗುತ್ತಿದೆ. ನಾನು ನಿದ್ದೆ ಮಾಡಬೇಕು. ನೀನು ಬೇಗ ಮನೆಗೆ ಹೋಗು, ಜಾಣೆ.'

'ಸಿಡಿಮಿಡಿಗೊಳ್ಳಬಾರದು. ನಾನು ಕಾಡಿಸಿದೆನೆಂದೇ ಎಣಿಕೆಯಾಗುತ್ತದೆ.'

ಚಿಕ್ಕವಳು ಎದ್ದು ನಿಂತು ತನ್ನ ಕೋಟನ್ನು ತೊಟ್ಟುಕೊಂಡಳು. ಮಫ್ಲರನ್ನು ಕುತ್ತಿಗೆಗೆ ಎರಡು ಸುತ್ತು ಸುತ್ತಿ ಎರಡು ಕೊನೆಗಳನ್ನೂ ಸಮನಾಗಿ ಜೋತುಬಿಟ್ಟಳು. ಕನ್ನಡಿಯ ಮುಂದೆ ನಿಂತು, ಕೆದರಿದ್ದ ತಲೆಕೂದಲನ್ನು ನೇವರಿಸಿ ಅಣಗಿಸಿದಳು. ಅನಸೂಯೆಯ ಮುಂದೆ ಬಂದು ನಿಂತು 'ನನ್ನನ್ನು ಒಂದು ಸಲ ಮುತ್ತಿಟ್ಟುಕೊಳ್ಳುವುದಿಲ್ಲವೆ?' ಎಂದು ಕೇಳಿದಳು.

'ಇಲ್ಲ. ಈಗ ನನ್ನ ಮೈಗೆ, ಮನಸ್ಸಿಗೆ ಯಾವುದಕ್ಕೂ ನೆಮ್ಮದಿಯಿಲ್ಲ.'

ಚಿಕ್ಕವಳು ನಿರಾಶಾಭಾವದಿಂದ ದೊಡ್ಡವರು ಮಾಡುವ ತೆರದಲ್ಲಿ ತನ್ನೆರಡು ಭುಜಗಳನ್ನು ಒಟ್ಟಿಗೆ ಮೇಲಕ್ಕೆತ್ತಿ ಇಳಿಸಿ ಮುಖವನ್ನು ಸಪ್ಪಗೆ ಮಾಡಿಕೊಂಡು 'ನಿಮ್ಮ ಇಷ್ಟ' ಎಂದಳು. ಕಾಗದದ ಹೂಗಳಿದ್ದ ಹೂದಾನಿಯ ಬಳಿಗೆ ನಡೆದು ಅದನ್ನು ತನ್ನ ಕೈಗಳಲ್ಲೆತ್ತಿಕೊಂಡು– 'ಇಂಥವುಗಳೇ ಆತ್ಮವಂಚನೆಗೆ ಕಾರಣಗಳು' ಎನ್ನುತ್ತ, ತೆರೆದಿದ್ದ ಕಿಟಕಿಯ ಬಳಿಗೆ ನಡೆದು ಕಿಟಕಿಯಿಂದ ಹೊರಗೆ ತಲೆಹಾಕಿ ಕೆಳಗೆ ನೋಡಿ, ಏನೊಂದೂ ಅಡ್ಡಿ ಇಲ್ಲವೆಂಬುದನ್ನು ನಿರ್ಧರಿಸಿ ಆ ಹೂದಾನಿಯನ್ನು ಹೂಗಳೊಂದಿಗೆ ಕಿಟಕಿಯಿಂದ ಹೊರಕ್ಕೆ ಎಸೆದಳು. ಅದು ಕೆಳಗೆ ನೆಲದ ಮೇಲೆ ಬಿದ್ದು ನುಚ್ಚುನೂರಾಯಿತು. ಕುಳಿತು ಆವಾಕ್ಕಾಗಿ ಬಿಚ್ಚುಗಣ್ಣಿನಿಂದ ನೋಡುತ್ತಿದ್ದ ಅನಸೂಯೆ ಆ ಶಬ್ದಕ್ಕೆ ಪುಟಿಚೆಂಡಿನಂತೆ ಎಗರಿ ಕುಳಿತಳು.

ಅನಂತರ ಚಿಕ್ಕವಳು ಹೊರಬಾಗಿಲ ಕಡೆಗೆ ನಡೆದಳು. ಯಂತ್ರಚಾಲಿತ ಪ್ರತಿಮೆಯಂತೆ ಅನಸೂಯೆ ಬಾಗಿಲು ಮುಚ್ಚಿಕೊಳ್ಳಲು ಹಿಂದೆಯೆ ನಡೆದಳು. ಹೊರಕ್ಕೆ ಹೋಗಿ ತಾನಾಗಿ ಬಾಗಿಲನ್ನು ಎಳೆದು ಮುಚ್ಚಿಕೊಳ್ಳುತ್ತ ಒಂದು ಸಲ ಕತ್ತೆತ್ತಿ ಅನಸೂಯೆಯ ಮುಖವನ್ನು ನೋಡಿದಳು. ಅನಸೂಯೆಯ ಕಣ್ಣುಗಳಲ್ಲಿ ಮಹಾಭಯ ಮೂಡಿದಂತೆ ಇತ್ತು ; ಆದರೆ ಚಿಕ್ಕವಳ ಕಣ್ಣುಗಳಲ್ಲಿ ನಿಷ್ಕಪಟತೆ ಇತ್ತು, ಹಾಸವಿತ್ತು.

ಅಂತೂ ಆ ರಾತ್ರಿ ಅನಸೂಯೆಗೆ ನೆಮ್ಮದಿಯ ನಿದ್ರೆ ದೊರೆಯಲಿಲ್ಲ. ಬೆಳಿಗ್ಗೆ ಎಚ್ಚರವಾದಾಗ ಜ್ವರವೇನೂ ಇರಲಿಲ್ಲ. ಹಾಲಿನವನು ಬಂದು ಹೊರಬಾಗಿಲನ್ನು ತಟ್ಟಿ ಕರೆದಾಗ, ಹೋಗಿ ಬಾಗಿಲನ್ನು ತೆರೆದು ಹಾಲು ತೆಗೆದಿರಿಸಿಕೊಂಡು ಮತ್ತೆ ಬಾಗಿಲನ್ನು ಮುಚ್ಚಿಕೊಂಡಳು. ಪ್ರಾತರ್ವಿಧಿಗಳನ್ನು ಪೂರೈಸಿಕೊಂಡಾದ ಮೇಲೆ, ರಾಮನ ಪಂಜರದ ಬುರಕಿಯನ್ನು ಮೇಲಕ್ಕೆತ್ತಿ ಸರಿಸಿದಳು. ರಾಮ ಅಂದಿತು : 'ಓ ಬೆಳಗಾಯಿತು...ಬೆಳಗಾಯಿತು....ರಾಮ...ರಾಮ.'

ಅನಸೂಯೆ ರಾಮನಿಗೆ ಹಾಲು, ರೊಟ್ಟಿ, ಬಾಳೆಯಹಣ್ಣು ಕೊಟ್ಟು ತಾನೂ ಕಾಫಿ ಮಾಡಿಕೊಂಡು ಕುಡಿದು ಪುನಃ ಹಾಸಿಗೆಯಲ್ಲಿ ಬಿದ್ದುಕೊಂಡಳು. ಎದ್ದು ಓಡಾಡಿ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಅಂದು ಆಕೆಗೆ ಚೈತನ್ಯವೇ ಇರಲಿಲ್ಲ. ಮಧ್ಯಾಹ್ನವಾದ ನಂತರ ಎದ್ದು ಸ್ನಾನ ಮಾಡಿದ ಮೇಲೆ ದೇಹ ಸ್ವಲ್ಪ ಲಘು ಕಂಡಿತು. ಮತ್ತೆ ಹಾಸಿಗೆ ಬಿಡಿಸಿ ಮಲಗಿದವಳು ಪುನಃ ಎದ್ದದ್ದು ಮಾರನೆಯ ಪ್ರಾತಃಕಾಲವೆ. ಹಾಲಿನವನು ಬಂದು ಕೂಗಿ ಬಾಗಿಲು ತಟ್ಟಿದಾಗಲೆ. ರಾಮನಿಗೂ ದಿನವೆಲ್ಲ ಪಂಜರವಾಸ. ಅಂದು ಅದಕ್ಕೆ ಯಾವಾಗ ಬೆಳಗಾಯಿತೆಂಬುದೂ ತಿಳಿಯಲಿಲ್ಲ. ಪಂಜರಕ್ಕೆ ಬುರುಕಿ ಹಾಕಿದಾಗ ಅದಕ್ಕೆ ರಾತ್ರಿ, ಬುರುಕಿ ತೆಗೆದಾಗ ಅದಕ್ಕೆ ಬೆಳಗು ಆಗುತ್ತಿತ್ತು.

ಅನಸೂಯೆ ಪಟ್ಟಿಯನ್ನು ಕೊಟ್ಟಳು. ಅಂಗಡಿಯವನು ಲೆಕ್ಕಮಾಡಿ ಮೊತ್ತವನ್ನು ಹೇಳಿದ. ಅನಸೂಯೆ ದುಡ್ಡು ಕೊಟ್ಟಾದ ಮೇಲೆ, 'ಏನೋ ಮರೆತೆನಲ್ಲ!' ಎಂದು ಜ್ಞಾಪಿಸಿಕೊಳ್ಳುತ್ತ ರಸ್ತೆಗೆ ಬಂದಳು. ಮನೆಯಿಂದ ಹೊರಡುವಾಗ್ಗೆ ಇನ್ನೂ ಏನೇನನ್ನೋ ಕೊಳ್ಳಬೇಕೆಂದು ಬಂದಿದ್ದಳು. ಇಷ್ಟರಲ್ಲೆ ಮರೆತಿದ್ದಳು. ರಸ್ತೆಯಲ್ಲಿ ನಾಲ್ಕಾರು ಹೆಜ್ಜೆ ಮುಂದೆ ನಡೆದಾಗ, ಯಾರೋ ತನ್ನ ಬೆನ್ನ ಹಿಂದೆ ನಡೆದು ಬರುತ್ತಿದ್ದಂತೆ ಆಕೆಗೆ ಭಾಸವಾಯಿತು. ಸಂಕಲ್ಪಾಧೀನವಲ್ಲದ ನಿರಿಚ್ಛಾಪ್ರತಿಕ್ರಿಯೆಗೆ ಒಳಗಾಗಿ ಆಕೆ ಯಾರೆಂದು ತಿರುಗಿ ನೋಡಿದಳು. ವೃದ್ಧ ವೈದಿಕನೊಬ್ಬ ಹಸನ್ಮುಖಿಯಾಗಿ ಕೈಜೋಡಿಸಿ ಸ್ವಲ್ಪ ಹೆಚ್ಚಾದ ರೀತಿಯಲ್ಲೆ ತಲೆಬಾಗಿದ. ಗಾಢವಾಗಿ ಯೋಚಿಸುತ್ತಿದ್ದ ಅನಸೂಯೆ ಅಷ್ಟೇ ಪ್ರತಿಕ್ರಿಯೆಗೆ ಒಳಗಾದಳು. ಮುಂದೆ ನಡೆದಳು. ಎಂಟು ಹತ್ತು ಹೆಜ್ಜೆ ನಡೆದ ಮೇಲೆ ಆಕೆಗೆ ಅನಿಸಿತು : 'ಎಲಾ! ಯಾರು ಈತ! ನನಗೆ ಪರಿಚಿತ ಮನುಷ್ಯನಲ್ಲ. ನಾನೇಕೆ ಈತನಿಗೆ ಸೂತ್ರದ ಗೊಂಬೆಯಂತೆ ನಮಸ್ಕರಿಸಿದೆ! ಪ್ರತಿನಮನ ಔಚಿತ್ಯವೇನೋ ಹೌದು. ಆತ ಏಕೆ ಚಿರಪರಿಚಿತನಂತೆ ನನ್ನ ಮುಖ ನೋಡಿ ನಸುನಕ್ಕ? ಆ ವೃದ್ಧನ ವ್ಯಕ್ತಿಪರಿಚಯ ನನಗಿಲ್ಲ! ಆದರೂ ಆತನ ಮುಖವನ್ನು ಎಲ್ಲಿಯೋ ಯಾವಾಗಲೋ ಕಂಡಂತೆ ಇದೆಯಲ್ಲ! ಆತ ಈ ಊರಿನವನೆ ಇರಬೇಕು. ಆಗೊಮ್ಮೆ ಈಗೊಮ್ಮೆ ರಸ್ತೆಯಲ್ಲೋ ಗುಡಿಯಲ್ಲೋ ದೇವರ ಉತ್ಸವದಲ್ಲಿಯೋ ನೋಡಿದುದರ ಮಬ್ಬು!...ಆತ ನಾನು ದಿನಸಿ ಅಂಗಡಿಯಲ್ಲಿ ನಿಂತಿದ್ದಾಗಲೂ ನನ್ನ ಹಿಂದೆಯೇ ದೂರದಲ್ಲಿ ನಿಂತಿದ್ದ. ಎಲಾ! ಈಗಲೂ ಹಿಂದೆಯೆ ನಡೆದುಬರುತ್ತಿದ್ದನೆ! ಇವನೇನು ಯಾಚಕನೆ? ಯಾಚಕರಿಗೆ ಬಲು ಧೈರ್ಯ! ಎದುರಿಗೇ ಬಂದು ನಿಲ್ಲಿಸಿ ಯಾಚಿಸುತ್ತಾರೆ....ಪೀಡಿಸುತ್ತಾರೆ' ಎಂದು ನಾನಾ ಬಗೆಯ ತರ್ಕಕ್ಕೆ ಒಳಗಾಯಿತು. ಭಯಕ್ಕೆ ಒಳಗಾಯಿತು ಆಕೆಯ ಮನಸ್ಸು.

ಅನಸೂಯೆ ಈಗ ಬೇಗ ಬೇಗ ನಡೆದಳು. ಅಷ್ಟೇ ವೇಗದಂದ ಆತನ ಹೆಜ್ಜೆಗಳೂ ಆಕೆಯನ್ನು ಹಿಂಬಾಲಿಸಿದವು. ಈಗ ಆಕೆಯ ಧೈರ್ಯ ತೀರ ಕುಗ್ಗಿತು. ರಸ್ತೆಯ ಪಕ್ಕದಲ್ಲಿ ಒಂದು ಬಟ್ಟೆಯ ಅಂಗಡಿಯನ್ನು ಕಂಡಳು. ಆಕೆ ಸರ್‍ರನೆ ಆ ಅಂಗಡಿಯೊಳಕ್ಕೆ ಹೋಗಿ ಆಶ್ರಯ ಕಲ್ಪಿಸಿಕೊಂಡು, ತಿರುಗಿ ರಸ್ತೆಯನ್ನು ನೋಡುತ್ತ ನಿಂತಳು. ಆಗ ಅದೇ ವೃದ್ಧ, ಅನಸೂಯೆಯನ್ನು ನೋಡದೆ, ಅಲ್ಲಿ ಆಕೆಯ ಎದುರಿನಲ್ಲಿ ಒಂದು ಹೆಜ್ಜೆ ನಿಂತು, ಮುಖ ತಿರುಗಿ ನೋಡದೆ ಮತ್ತೊಮ್ಮೆ ಬಾಗಿ ನಮಿಸಿ ಮುಂದಕ್ಕೆ ಹೊರಟು ಹೋದ. ಅವನು ಮರೆಯಾಗುವವರೆಗೂ ಅನಸೂಯೆ ಆ ವೃದ್ಧನನ್ನೇ ನೋಡುತ್ತಿದ್ದಳು.

ಇಷ್ಟು ವರ್ಷಗಳ ಪಟ್ಟಣವಾಸದಲ್ಲಿ ಅನಸೂಯೆ ಹಿಂದೆಂದೂ ಇಂದಿನಂತಹ ಭಯದ ಅನುಭವವನ್ನು ಕಂಡಿರಲಿಲ್ಲ.

ಮನೆಯನ್ನು ಸೇರಿದಾಗ ಮಧ್ಯಾಹ್ನವಾಗಿತ್ತು. ರಾಮನನ್ನು ಪಂಜರದೊಳಕ್ಕೆ ಸೇರಿಸಿ, ತಿನ್ನುವುದಕ್ಕೆ ಇಟ್ಟು, ಬಟ್ಟೆ ಬದಲಾಯಿಸಿ, ಮಡಿಯುಟ್ಟು ಅಡುಗೆ ಮಾಡಿ, ಊಟ ಮುಗಿಸಿ, ಅಂದುಕೊಂಡು ತಂದಿದ್ದ ಸಾಮಾನುಗಳನ್ನು ಒಪ್ಪವಾಗಿಡಲು ತೊಡಗಿದಳು.

ಹೂದಾನಿ ಇಡುತ್ತಿದ್ದ ಮೇಜಿಗೆ ಹೊಸ ಟೇಬಲ್ ಕ್ಲಾತನ್ನು ಹಾಸಿ, ಹೂದಾನಿಯಲ್ಲಿ ಅರ್ಧಕ್ಕೆ ಮೇಲೆ ಸೀನೀರು ತುಂಬಿ, ಅದರಲ್ಲಿ ಒಂದು ಚಿಟಿಕೆಯಷ್ಟು ಉಪ್ಪನ್ನು ಬೆರೆಸಿ ಕಾಣುವಂತೆ ಜೋಡಿಸಿಟ್ಟಳು. ಪಿಂಗಾಣಿ ತಟ್ಟೆಯೊಂದರಲ್ಲಿ ಒಂದೆರಡು ಬಗೆಯ ಹಣ್ಣುಗಳನ್ನೂ 'ಬಟರ್‌ಬೀನ್ ಅಲ್ಮಂಡ್' ಕೇಕ್‌ಗಳನ್ನೂ ಜೋಡಿಸಿಟ್ಟಳು. ಒಳಗಣ್ಣಿನಿಂದ ಸೆಲ್ಯುಲಾಯ್ಡ್ ಗೊಂಬೆಯನ್ನು ತಂದು, ಅದಕ್ಕಾಗಿಯೆ ಹೊಲಿಸಿಟ್ಟುಕೊಂಡಿದ್ದ ಪಿಂಕ್ ಫ್ರಾಕನ್ನೂ ಬರಿದಾಗಿದ್ದ ಕುತ್ತಿಗೆಗೆ ಒಂದು ಬಣ್ಣ ಬಣ್ಣಗಳ ಮಣಿಸರವನ್ನೂ ಉಡಿಸಿ ತೊಡಿಸಿ ಎತ್ತರದ ಮೇಜೊಂದರ ಮೇಲೆ ಕೂಡಿಸಿ ಅದರ ಮುಂದೆ ಹಣ್ಣು ಮಿಠಾಯಿಗಳ ತಟ್ಟೆಯನ್ನಿಟ್ಟಳು. ಒಂದು ಸಲ ಅಭಿಮಾನದಿಂದ, ಎಲ್ಲವನ್ನೂ ಚೆನ್ನಾಗಿ ಮಾಡಿದೆನೆಂಬ ಹಿಗ್ಗಿನಿಂದ ನೋಡಿ ತೃಪ್ತಿಪಡೆದಳು.

ರಾಮನನ್ನು 'ಆಡಿಕೊಂಡಿರು' ಎಂದು ಪಂಜರದಿಂದ ಹೊರಕ್ಕೆ ಬಿಟ್ಟು ಅದಕ್ಕೊಂದು ಸಿಹಿ ಬಿಸ್ಕತ್ತನ್ನು ಕೊಟ್ಟು, ಇನ್ನೇನೂ ಮುಟ್ಟಬಾರದೆಂದು ಅದಕ್ಕೆ ಎಚ್ಚರಿಸಿ, ಯಾವುದೊ ಒಂದು 'ಮ್ಯಾಗಸೈನನ್ನು' ಓದುತ್ತ ಹಾಗೆಯೇ ನಿದ್ದೆ ಮಾಡಿದಳು. ಇನ್ನೂ ನಿದ್ದೆ ಮಾಡುತ್ತಿದ್ದಳೇನೋ! ಆದರೆ ಯಾರೋ ಬಾಗಿಲನ್ನು ತಟ್ಟಿ ಆಕೆಗೆ ನಿದ್ರಾಭಂಗ ಮಾಡಿದರು. ರಾಮ ಹಾರಿಹೋಗಿ ತನ್ನ ಪಂಜರದೊಳಗೆ ಅಡಗಿ ಕುಳಿತುಕೊಂಡಿತು.

ಬಾಗಿಲನ್ನು ತಟ್ಟಿದವರು ಕೂಗಿ ಕರೆಯಲಿಲ್ಲ. ಮತ್ತೆ ಮತ್ತೆ ಬಾಗಿಲನ್ನು ತಟ್ಟಿದರು. 'ಪುನಃ ಆ ಹುಡುಗಿಯೆ ಇರಬೇಕು' ಎಂದುಕೊಂಡಳು ಅನಸೂಯೆ.

ಹಿರಿಯ ಅನಸೂಯೆ ಕೂಗಿ ಕೇಳಿದಳು : 'ಯಾರು ಅನಸೂಯೆಯೆ?'

'ನಾನೇ....ಬೇರೆ ಯಾರೂ ಅಲ್ಲ. ಬಾಗಿಲು ತೆಗೆಯಿರಿ.'

'ಹೋಗು. ಮನೆಗೆ ಹೋಗು.'

'ದಯವಿಟ್ಟು ತೆಗೆಯಿರಿ. ಕೈಯಲ್ಲಿ ಭಾರವಾದ ಹೊರೆಯೊಂದನ್ನು ಹೊತ್ತಿದ್ದೇನೆ.'

'ಹೊರಟು ಹೋಗು.'

ಅನಸೂಯೆಗೆ ಸಿಟ್ಟು ಬಂದು ಹಾಸಿಗೆಯಲ್ಲಿ ಎದ್ದು ಕುಳಿತಳು.

'ಹೊರಟುಹೋಗು. ಬಾಗಿಲು ತೆರೆಯುವುದಿಲ್ಲ. ನಿನ್ನನ್ನು ಒಳಕ್ಕೆ ಬಿಡುವುದಿಲ್ಲ.'

ಮತ್ತೊಮ್ಮೆ ಬಾಗಿಲು ತಟ್ಟಿದ ಶಬ್ದ. ಅನಸೂಯೆಗೆ ಸಿಟ್ಟು ಹೆಚ್ಚಿತು. 'ತಟ್ಟಲಿ...ತಟ್ಟಲಿ....ಎಷ್ಟು ಬೇಕಾದರೂ ತಟ್ಟಲಿ. ನಾನು ಅವಳಿಗೆ ಬಾಗಿಲು ತೆಗೆಯುವುದಿಲ್ಲ' ಎಂದು ನಿರ್ಧರಿಸಿ ಹಾಸಿಗೆಯಲ್ಲೆ ಕುಳಿತಳು. ಸ್ವಲ್ಪ ಹೊತ್ತಾದ ಮೇಲೆ ತಟ್ಟುವ ಶಬ್ದ ನಿಂತಿತು. ಅನಸೂಯೆಗೆ ನಂಬಿಕೆ ಬರಲಿಲ್ಲ. ಮೂರು ನಿಮಿಷಗಳು ಕಳೆದುವು... ಆರು ...ಎಂಟು...ಹತ್ತು ನಿಮಿಷಗಳು ಕಳೆದುವು. ಮತ್ತೆ ಬಾಗಿಲು ತಟ್ಟಿದ ಶಬ್ದವಾಗಲಿಲ್ಲ. 'ಹೋಯಿತು ಪೋರಿ' ಎಂದು ನಿರ್ಧರಿಸಿಕೊಂಡ ಮೇಲೆ ಅನಸೂಯೆ ಎದ್ದು ಹೋಗಿ ಬಾಗಿಲನ್ನು ತೆರೆದಳು.

ಆ ಹುಡುಗಿ ಅಲ್ಲಿಯೆ ಇದ್ದಳು. ಮೆಟ್ಟಿಲುಗಳ ಮೇಲೆ ದಪ್ಪನೆ ರಟ್ಟಿನ ಪೆಟ್ಟಿಗೆಯೊಂದನ್ನು ಇಟ್ಟು, ಅದರ ಮೇಲೆ ಕುಳಿತುಕೊಂಡು, ತಲೆಗೆ ಬಾಗಿಲ ಚೌಕಟ್ಟಿನ ಪಕ್ಕದ ಗೋಡೆಯನ್ನು ಆಸರೆ ಕೊಟ್ಟುಕೊಂಡು ನಿದ್ದೆ ಮಾಡಿದ್ದಳು. ಬಾಗಿಲು ತೆರೆದ ಶಬ್ದಕ್ಕೆ ಹುಡುಗಿಗೆ ಎಚ್ಚರವಾಯಿತು.

'ನೀವು ಬಾಗಿಲು ತೆರೆಯುತ್ತೀರಿ ಎಂದೇ ಇಲ್ಲಿ ಕಾದು ಕುಳಿತೆ. ಇದನ್ನು ಸ್ವಲ್ಪ ಕೈಗೆ ತೆಗೆದುಕೊಳ್ಳಿರಿ. ನನಗೆ ಭಾರವಾಗಿದೆ' ಎನ್ನುತ್ತ ಆ ದಪ್ಪ ರಟ್ಟಿನ ಪೆಟ್ಟಿಗೆಯನ್ನು ಅನಸೂಯೆಗೆ ಕೈಗೆ ಎತ್ತಿಕೊಟ್ಟಳು. ಮಂತ್ರಮುಗ್ಧೆಯಂತೆ ಅನಸೂಯೆ ಅದನ್ನು ಇಸುಕೊಂಡಳು. ಚಿಕ್ಕವಳು ತಾನಾಗಿಯೆ ಒಳಕ್ಕೆ ನಡೆದು, ಅಚ್ಚುಕಟ್ಟಾಗಿ ಯಥಾಪ್ರಕಾರ ಸೋಫದಲ್ಲಿ ಕುಳಿತುಕೊಂಡಳು.

ಅನಸೂಯೆ ರಟ್ಟಿನ ಪೆಟ್ಟಿಗೆಯನ್ನು ಸೋಫದ ಪಕ್ಕದಲ್ಲಿ ಇಟ್ಟು, ಕಾಲುಗಳಲ್ಲಿ ನಡುಕ ಬಂದಂತಾಗಿ ಅಲ್ಮೈರದ ಆಸರೆ ಪಡೆದು ಒರಗಿ ನಿಂತಳು. ಕೃತ್ರಿಮ ಮನೋಭಾವವಿಲ್ಲದ ಕಣ್ಣುಗಳಿಂದ ಚಿಕ್ಕವಳು ಅನಸೂಯೆಯನ್ನು ನೋಡಿ, 'ಪೆಟ್ಟಿಗೆಯಲ್ಲಿ ನಿಮಗಾಗಿ ಒಂದು ವಸ್ತುವನ್ನು ತಂದಿದ್ದೇನೆ' ಎಂದಳು.

ಅನಸೂಯೆ ಕಷ್ಟದಿಂದ ಆಸರೆಯನ್ನುಳಿದು ಬಂದು ಮೊಣಕಾಲ್ಗಳ ಮೇಲೆ ಕುಳಿತುಕೊಂಡು, ರಟ್ಟಿನ ಪೆಟ್ಟಿಗೆಯ ಮೇಲ್ಮುಚ್ಚಳವನ್ನು ಬಿಚ್ಚಿ, ಒಳಗಡೆ ಹರಳುಗಿಡದ ಎಲೆಗಳಲ್ಲಿ ಸುತ್ತಿದ್ದ ವಸ್ತುವನ್ನು ಕೈಗೆ ತೆಗೆದುಕೊಂಡಳು. ಒಳಗೆ ಆರು ಬಿಳಿಯ ರೋಜಾ ಹೂಗಳೂ, ಹನ್ನೆರಡು ಸುಗಂಧರಾಜ ಹೂವಿನ ಉದ್ದನೆಯ ಕಾಂಡಗಳೂ ಇದ್ದುವು. ಅನಸೂಯೆ ಅಂದು ಪೂರ್ವಾಹ್ನ ಹೂವಿನ ಅಂಗಡಿಯಿಂದ ತಂದೂವೂ ಅವೇ. ಸಂಖ್ಯೆಯೂ ಅಷ್ಟೇ. 'ಇದು ಅತಿ ಆಶ್ಚರ್ಯ' ಎಂದು ಅನಸೂಯೆಯ ಮನಸ್ಸು ಅನ್ನುತ್ತಿರುವಾಗಲೇ ಅವಳ ಕೈಗಳಲ್ಲಿ ನಡುಕ ಕಾಣಿಸಿಕೊಂಡಿತು. ಅನಸೂಯೆ ಹೂಗಳನ್ನು ಪಕ್ಕದ ಟೀಪಾಯ್ ಮೇಲಿಟ್ಟು, ಮತ್ತೆ ಪೆಟ್ಟಿಗೆಯೊಳಗೆ–ಆವಾಗಿರಬೇಕಾದರೆ–ಏನಿದೆಯೆಂದು ತಡವಿ ನೋಡಿದಳು, ಅಲ್ಲಿದ್ದುದು ಎಲ್ಲಾ ತೊಡುವ ಬಟ್ಟೆಗಳೇ!

'ಇವು ಏಕೆ?– ಎಂದು ಕೇಳಿದಳು ಹಿರಿಯ ಅನಸೂಯೆ.

ಅನಸೂಯೆಗೆ ಈಗ ಇನ್ನೂ ಭಯವಾಯಿತು. ಸಿಟ್ಟೂ ಹೆಚ್ಚಿತು. ಮನಸ್ಸಿನಲ್ಲಿ ಆಗುತ್ತಿದ್ದ ವೇದನೆಗಳೆಲ್ಲವೂ ಆಕೆಯ ಮುಖದಲ್ಲಿ ಪ್ರತಿಬಿಂಬಿಸಿದವು. ಅಳು ಬಂದಿತು. ಆಕೆ ಅತ್ತೇ ಎಷ್ಟೋ ವರ್ಷಗಳಾಗಿ ಹೋಗಿದ್ದವು. ಆಕೆ ಹಿಂದು ಹಿಂದಕ್ಕೆ ಸರಿಯುತ್ತ ಹೊರಬಾಗಿಲಿಗೆ ಓಡಿ ಮೆಟ್ಟಿಲುಗಳನ್ನು ದಡದಡನೆ ಇಳಿದು, ಕೆಳಗೆ ಮಾಲೀಕರ ಮನೆಯ ಬಾಗಿಲಿಗೆ ಬಂದ, ಕದವನ್ನು ಬಲವಾಗಿ ತಟ್ಟುತ್ತ, 'ಲ್ರೀ..... ಭಾಗೀರಥಮ್ಮ... ಲ್ರೀ....ಭಾಗೀರಥಮ್ಮಾ....ಬಾಗಿಲು ತೆಗೀರಿ...ಬಾಗಿಲು" ಎಂದು ಕೂಗಿಕೊಂಡರು.

ಒಳಗೆ ಕೆಲಸದಲ್ಲಿದ್ದ ಮನೆಯ ಒಡತಿ, ಕೂಗುತ್ತಿದ್ದವರ ಧ್ವನಿಯನ್ನು ಗುರುತಿಸಿ, ಇದೇನಾಯಿತೆಂದು ಗಾಬರಿಪಟ್ಟು...'ಬಂದೆ ಬಂದೆ' ಎಂದು ಕೂಗುತ್ತ ಓಡಿ ಬಂದು ಬಾಗಿಲು ತೆರೆದರು. ಅನಸೂಯೆ ಭಯದಿಂದ ವಿವರ್ಣಳಾಗಿ, ಉಸಿರೆಳೆದುಕೊಳ್ಳುತ್ತ ನಿಂತಿರುವುದನ್ನು ಕಂಡು ಅನುಕಂಪದಿಂದ 'ಯಾಕ್ರೀ ಅನಸೂಯಮ್ಮ? ಏನಾಯಿತಿರಿ? ಇಷ್ಟೊಂದು ಗಾಬರಿಪಟ್ಟಿದ್ದೀರ! ಹೇಳಿ....ಹೇಳಿ' ಎಂದು ಕೇಳಿದಳು.

ಅನಸೂಯೆಯ ಮೈ ನಡುಗುತ್ತಿತ್ತು. ಧ್ವನಿಯೂ ನಡುಗುತ್ತಿತ್ತು. ಆಕೆ ತನ್ನೆರಡು ಕೈಗಳಿಂದ ಮುಖ ಮುಚ್ಚಿಕೊಂಡು, ಬಿಕ್ಕುತ್ತ... "ಅಲ್ಲಿ ಮೇಲೆ....ಮಹಡಿಯಲ್ಲಿ ಹುಡುಗಿಯೊಬ್ಬಳು ಬಂದಿದ್ದಾಳೆ, ಕೆಟ್ಟವಳು....ನನಗೆ ಬಲು ಭಯವಾಗಿದೆ....ಹೋಗೆಂದರೆ ಹೋಗುವುದಿಲ್ಲ, ಏನೋ ದುರುದ್ದೇಶದಿಂದ ಬಂದಿದ್ದಾಳೆ. ನಾಲ್ಕು ದಿನಗಳ ಹಿಂದೆ ಒಮ್ಮೆ ಬಂದಿದ್ದಳು, ಬೊಂಬೆಯ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ನಾನು ಕೊಡುವುದಿಲ್ಲವೆಂದರೂ ಕಿತ್ತುಕೊಂಡು ಹೋದಳು. ಈಗ ಇನ್ನೇನನ್ನಾದರೂ ತೆಗೆದುಕೊಂಡು ಹೋಗುವುದಕ್ಕೆ ಬಂದಿದ್ದಾಳೆ.... 'ಹೊರಟು ಹೋಗು' ಎಂದು ಹೇಳಿದರೆ, 'ನಾನು ಇಲ್ಲಿಯೆ ಇರುವುದಕ್ಕೆ ಬಂದಿದ್ದೇನೆ' ಎನ್ನುತ್ತಾಳೆ. ಅಯ್ಯೊ! ಇನ್ನೇನು ಮಾಡುತ್ತಾಳೆ ಕಾಣೆನಲ್ಲ."... ಎಂದು ಮೊರೆಯಿಟ್ಟಳು.

'ಅಯ್ಯೊ ಇನ್ನೇನು ಗತಿ! ನಮ್ಮ ಮನೆಯವರೂ ಇಲ್ಲವಲ್ಲ!..... ತಾಳಿ... ಬಟ್ಟೆಯೊಗೆಯುತ್ತಿದ್ದಾನೆ ಆಳು ಮಾದ. ಕರೆಯುತ್ತೇನೆ.... ಮಾದಾ.... ಲೋ ಮಾದಾ,,,,ಬೇಗ ಬಾರೋ' ಎಂದು ಕೂಗಿದರು ಭಾಗಿರಥಮ್ಮ.

ಕಟ್ಟುಮಸ್ತಾದ ಆಳು ಮಾದ 'ಯಾಕ್ರಮ್ಮಾ!' ಎನ್ನುತ್ತ ಬಂದ.

'ಲೋ ಹೋಗಿ ನೋಡೊ, ಮಹಡಿ ಮೇಲೆ ಅನಸೂಯಮ್ಮನವರ ಮನೆಗೆ ಯಾವುದೋ ಕೆಟ್ಟ ಹುಡುಗಿ ನುಗ್ಗಿ ಏನೇನೊ ಕದೀತಾ ಇದ್ದಾಳಂತೆ. ಬೇಗ...ಒಂದು ಕೋಲು ತಗೊಂಡ್ಹೋಗು, ಹಿಡ್ಕೊಂಡ್ಹೋಗಿ ಪೋಲೀಸಿಗೆ ಕೊಟ್ಟು ಬಾ... ಒಳ್ಳೆಯ ಮಾತಿನಲ್ಲಿ ಹೇಳು.... ಕೇಳದಿದ್ರೆ ಕೂದಲು ಹಿಡಿದುಕೊಂಡು ಎಳಕೊಂಡು ಬಾ ಇಲ್ಲಿಗೆ. ನಾಲ್ಕು ಜನ ನೋಡಿ 'ಥೂ' ಅಂತ ಉಗುಳಲಿ ಮುಖಕ್ಕೆ. ಪೊಲೀಸ್ಗೂ ಕೊಟ್ಟಿಡು ಬೇವಾರ್ಸಿನ' ಎಂದಳು ಭಾಗೀರಥಮ್ಮ.

ಮಾದ ಕೈಗೆ ಸಿಕ್ಕಿದ ಒಂದು ಕಟ್ಟಿಗೆಯ ತುಂಡನ್ನು ತೆಗೆದುಕೊಂಡು 'ಮ್ಯಾಗಡೆ ಬಾಕ್ಲು ಆಚ್ಚೈತಾ?' ಎಂದು ಕೇಳಿದ.

‘ಇಲ್ಲ, ಮುಚ್ಚಿಕೊಂಡು ಬರಲಿಲ್ಲ. ತೆರದೇ ಬಂದಿದ್ದೇನೆ.’

‘ಅಯ್ಯೋ! ಅಚ್ಕೊಂಡ್ಬಂದಿದ್ರೆ ಸಂದಾಗಿತ್ತೆ. ಓಗಿ ಒಳ್ಗಿದ್ರೆ ಎಳ್ಕೊಂಡ್ಬತ್ತೀನಿ ಅವಳ್ನ.’

ಮಾದ ಮೆಟ್ಟಿಲುಗಳನ್ನು ಹತ್ತಿಹೋದ.

ಅನಸೂಯೆ ಬಾಗಿಲ ಚೌಕಟ್ಟನ್ನು ದಾಟಿ ಮಾದನ ಬರುವಿಕೆಯನ್ನು ಕಾಯುತ್ತ ಅಲ್ಲಿಯೆ ಇದ್ದ ಒಂದು ಬೆಂಚಿನ ಮೇಲೆ ಕುಳಿತುಕೊಂಡಳು. ಭಾಗೀರಥಮ್ಮ ಬಿಸಿ ಕಾಫಿ ತಂದುಕೊಟ್ಟರು. ಅನಸೂಯೆ ಕುಡಿದು ಎರಡು ನಿಮಿಷ ಸುಧಾರಿಸಿಕೊಂಡ ನಂತರ, ಭಾಗೀರಥಮ್ಮ ‘ಏನ್ರೀ, ನಾವೂ ಮಹಡಿಗೆ ಹೋಗಿ ನೋಡೋಣವೇನ್ರಿ?’ ಎಂದು ಕೇಳಿದಳು.

‘ನಾನು ಪುನಃ ಅವಳನ್ನು ನೋಡುವುದಿಲ್ಲ. ಮಾದ ಅವಳನ್ನು ಹಾಗೇ ಎಳೆದುಕೊಂಡು ಹೋಗಿ ಪೋಲೀಸಿಗೆ ಒಪ್ಪಿಸಿ ಬರಲಿ. ನೀವಾದರೂ ಆ ಕೆಟ್ಟವಳನ್ನು ಏಕೆ ನೋಡಬೇಕು? ಅದು ಬೀದಿಯ ರಂಪ ಏಕಾಗಬೇಕು?’

ಮಹಡಿಗೆ ಹೋಗಿದ್ದ ಮಾದ ಬರಿಗೈಯಲ್ಲಿ ಹಿಂದಿರುಗಿದ. “ಅಲ್ಲಿ ಯಾರೂ ಇಲ್ಲ! ಮೂಲೆಮೂಲೆನೂ ಉಡಕಿ ಬಂದೆ. ಬಾಕಿಲುಗಳ ಇಂದೆ, ಕುರ್ಚಿ ಮೇಜುಗಳ ಕೆಳಗೆ, ಮ್ಯಾಗೆ, ಒಂದು ಬಿಲಾನೂ ಬಿಡ್ದೆ ಉಡ್ಕಿ ಬಿಟ್ಟೆ. ಪಂಜರದಾಗ ಗಿಣಿಯೊಂದು ಬಿಟ್ರೆ ಬೇರೆ ಯಾವ್ದೂ ಜೀವ ಇಲ್ಲ ಅಲ್ಲಿ. ಬೋಶಾ, ನೀವು ಇಲ್ಲಿಗೆ ಇಳ್ದು ಓಡಿ ಬಂದ್ರಲ್ಲಾ ಆಗ್ಲೆ ಅವ್ಳೂ ನಿಮ್ಮಿಂದೇನೆ ಇಳ್ದು ಓಡೋಗಿರ್ಬೇಕು” ಎಂದ ವಾದ.

‘ಲೊ, ಅನಸೂಯಮ್ನೋರೂ, ನಾನೂ ಇದೇ ಬೆಂಚಿನ ಮೇಲೆ ಕುಳಿತು ಬಾಗಿಲು ಕಡೆನೇ ನೋಡ್ತಾ ಇದ್ದೆವಲ್ಲೋ. ಅವಳು ಇಳಿದು ಹೋಗಿದ್ರೆ ನನ್ನ ಕಣ್ಣನ್ನ ಹೇಗೆ ತಪ್ಪಿಸಿಕೊಳ್ತ ಇದ್ದಳೊ?’

‘ನಾನು ಒಂದಂಗ್ಲ ಜಾಗಾನೂ ಬಿಡ್ದೆ ಸೋದ್ಸಿ ನೋಡಿ ಬಂದಿದ್ದೀನಿ ಈಗ. ವರಾಂಡ. ಎಳ್ಡುಕೋಣೆ, ಅಡಿಗೆಮನೆ, ಬಚ್ಚಲಮನೆ, ಕಡೆಗೆ ಕಕ್ಸಾನೂ ಎಳ್ಡೆಲ್ಡು ಸಲ ಉಡ್ಕಿ ಬಂದಿದ್ದೀನಿ. ಅವು ಅಲ್ಲಿಂದ ಅಂಗೇ ಮಂಗಮಾಯ ಆಗೋಗ್ಬಿಟ್ಲಾ! ನಾ ಬರೋವಾಗ ಬಾಕ್ಲು ಅಚ್ಕೊಂಡು ಬಂದಿದೀನಿ. ಬರ್ರಿ ಮ್ಯಾಕೆ ನೀವಿಬ್ರೂನೂವೆ. ನೀವೇ ನೋಡ್ಬಿಟ್ಟು ನನ್ಮಾತು ಸುಳ್ಳೋ ನಿಜ್ವೋ ಪೈಸಲ್ ಮಾಡಿಬುಡ.’

‘ಮುಂದಿನ ದೊಡ್ಡ ಕೋಣೆಯಲ್ಲಿ ಕೂತುಕೊಳ್ಳುವ ಸೋಫದ ಪಕ್ಕದಲ್ಲಿ ಒಂದು ದಪ್ಪ ರಟ್ಟಿನ ಪೆಟ್ಟಿಗೆ ಇರಲಿಲ್ವೇನೊ ಮಾದ?’ ಕೇಳಿದಳು ಅನಸೂಯೆ.

‘ಉಹೂಂರವ್ವಾ. ನೆಲದ ಮ್ಯಾಕೆ ಯಾವ್ದೂ ರಟ್ಟಿನ ಪೆಟ್ಗೆ ಇರಲಿಲ್ಲ. ಎಲ್ಲ ಸಾಮಾನ್ಗೋಳೂ ನಾಜೂಕಾಗಿ ಇಟ್ಟಂಗೇ ಇತ್ತು. ಏನೂ ಚೆಲ್ಲಾಪಿಲ್ಲಿ ಆಗಿಲ್ಲ. ನೋಡಿ ಅವ್ವಾ, ಉಡ್ಗಿ ಬಂದಿರಬೈದು. ಇಲ್ಲದಿದ್ರೆ ನೀವ್ಯಾಕ್ತಾನೆ ಇಲ್ಲಿಗೆ ಬರ್ತಿದ್ರಿ ಇಂಗ್ಹೆದರ್ಕೊಂಡು! ನಿಮ್ಜೊತೇಲೆ ಅವಳೂ ಇಳ್ದು ಬಂದು, ನೀವಿಲ್ಲಿ ಬಾಕ್ಲತಟ್ಟಿ ಗದ್ಲ ಮಾಡ್ತಿದ್ದಾಗ ನಿಮ್ಮ ಬೆನ್ನು ಇಂದೇನೇ ಓಡೋಗಿರ್ಬೇಕು. ಅದು ತಿರ್ಗಿ ಬಂದ್ರೆ ಗಾಶಾರ ಬಿಡ್ಸಿಬಿಡೋಣ ಅದ್ಕೆ.’

‘ಮಾದಾ, ನೀನು ನನ್ನೊಡನೆ ಬಾ ಮೇಲಕ್ಕೆ. ನಾನೂ ನೀನೂ ಇನ್ನೊಂದು ಸಲ ಚೆನ್ನಾಗಿ ನೋಡಿಬಿಡೋಣ...ಅಲ್ಲಾ! ಹೇಗೆ ಇಳಿದು ಓಡಿಹೋದ್ಲು ಅವಳ ರಟ್ಟಿನ ಪೆಟ್ಗೇನೂ ಹೊತ್ಕೊಂಡು! ಒಂದು ವೇಳೆ ನೀನು ಹೇಳೋ ಹಾಗೇ ನಾನಿಲ್ಲಿ ಬಾಗಿಲು ತಟ್ಟುತ್ತಾ ಭಾಗೀರಥಮ್ಮನವರನ್ನ ಕೂಗುತ್ತ ಇದ್ದಾಗ ಓಡಿಬಿಟ್ಟಳೋ ಏನೊ!’

ಅನಸೂಯೆಯೊಡನೆ ಆಳು ಮಾದ ಇನ್ನೊಮ್ಮೆ ಮಹಡಿಗೆ ಹತ್ತಿಹೋಗಿ ಎಲ್ಲವನ್ನೂ ಪರಿಷ್ಕಾರವಾಗಿ ಶೋಧಿಸಿಬಿಟ್ಟ. ಈಗ ಅನಸೂಯೆಗೆ ದೃಢವಾಯಿತು, ಅವಳೂ ತನ್ನ ಹಿಂದೆಯೇ ಇಳಿದು ತಾನು ಕೆಳಗಿನ ಮನೆಯ ಕದ ತಟ್ಟಿ ಕೂಗುತ್ತಿರುವಾಗಲೆ ಓಡಿ ಹೋಗಿರಬೇಕೆಂದು.

‘ಕದ ಅಚ್ಕೊಳ್ಳಿ, ತಾಯಿ, ಇನ್ಮೇಗೆ ಯಾರು ಬಾಕಲ್ತಟ್ಟಿದ್ರೂ ಎಸ್ರು ಕೇಳಿ, ಅಮ್ಯಾಕೆ ಬಾಕಲ್ತೆಗೀರ.’

‘ಆಗ್ಲಪ್ಪ, ಸದ್ಯ ಈಗ ನೀನು ಮನೇಲಿದ್ದಿದ್ದು ನನ್ನ ಪುಣ್ಯ.’

ಮಾದ ಕೆಳಗಿಳಿದು ಹೋದ ನಂತರ, ಅನಸೂಯೆ ಬಾಗಿಲು ಮುಚ್ಚಿಕೊಂಡು ಒಳಕ್ಕೆ ಬಂದು ದೀಪಗಳನ್ನು ಹೊತ್ತಿಸಿ, ಮಾದ ಕದಲಿಸಿಹೋಗಿದ್ದ ಸಾಮಾನುಗಳನ್ನು ಹಿಂದಿನ ಕ್ರಮದಲ್ಲೇ ಇಟ್ಟು, ಒಮ್ಮೆ ಆ ಕೋಣೆಯನ್ನು ತಾನು ಹಿಂದೆಂದೂ ನೋಡದ ರೀತಿಯಲ್ಲಿ, ಹೊಸತಾಗಿ ಮನೆಗೆ ಬಂದವರು ನೋಡುವ ರೀತಿಯಲ್ಲಿ ನೋಡತೊಡಗಿದಳು. ಇತ್ತೀಚೆಗೆ, ಅವಳಿಗಾಗಿದ್ದ ಅನುಭವಗಳ ಭಯ, ದುಃಖ, ದಿಕ್ಕಿಲ್ಲದೆ ತಾನು ಒಬ್ಬಳೇ ಇರುವ ಸ್ಥಿತಿ, ಎಲ್ಲವೂ ಸೇರಿ ಆಕೆಯ ಮನಸ್ಸಿನಲ್ಲಿ

ದಾರುಣವಾದ ವ್ಯಸನವನ್ನು ತಂದೊಡ್ಡಿದ್ದುವು. ಅಷ್ಟು ವರ್ಷ ಒಂಟಿ ಜೀವನವನ್ನು ಭಯವಿಲ್ಲದೆ, ಬೇಸರವಿಲ್ಲದೆ ನಡೆಸಿದ್ದ ಆಕೆಗೆ 'ಇನ್ನು ಇಂತಹ ಜೀವನವು ಸಾಧ್ಯವೆ?' ಎಂಬ ಶಂಕೆ ತಲೆದೋರಿತ್ತು.

ಈಗ ಕೋಣೆಯ ಸಾಮಾನುಗಳೆಲ್ಲ, ವಸ್ತಗಳೆಲ್ಲ ಅವುಗಳ ಸ್ಥಾನದಲ್ಲೆ ಇದ್ದುವಾದರೂ, ಅಲ್ಲಿ ಯಾವುದೋ ಒಂದು ಬಗೆಯ ಶೂನ್ಯತೆ ಹೊಸತಾಗಿ ಎದ್ದು ಹರಡಿ ನಿಂತಿತ್ತು. ಅದು ಈಗ ಮಹಡಿಯೆಲ್ಲವನ್ನೂ ಆಕ್ರಮಿಸಿತ್ತು. ಮನೆಯಲ್ಲಿ ತುಂಬು ಗದ್ದಲಮಾಡುತ್ತ, ನಗುತ್ತ, ಅಳುತ್ತ, ಆಡುತ್ತ ನಲಿಯುತ್ತಿದ್ದ ಮಗು ಒಂದು ಅಳಿದು ಹೋದಾಗ ಮನೆಯಲ್ಲಿ ಉಂಟಾಗುವ ಶೂನ್ಯಸ್ಥಿತಿ ಅಲ್ಲಿ ಈಗ ತುಂಬಿತ್ತು. ಅರ್ಧಗಂಟೆಯ ಹಿಂದೆ ಅಲ್ಲಿದ್ದ ಸೋಫಾದ ಮೇಲೆ ವಯ್ಯಾರದಿಂದ ಕುಳಿತು 'ನಿಮ್ಮೊಡನೆ ಇರುವುದಕ್ಕೇ ಬಂದಿದ್ದೇನೆ' ಎಂದುಸಿರಿದ ಚಿಕ್ಕವಳು ಈಗ ಅಲ್ಲಿ ಇಲ್ಲ. ಬರಿಯ ಸೋಫ ಮಾತ್ರವಿದೆ. ತಾನು ತಂದಿದ್ದ ಹೂಗಳನ್ನು ಮುಟ್ಟಿ ಮೂಸುವವರು ಇರಲಿಲ್ಲ. ತಂದಿದ್ದ ಮಿಠಾಯಿಗಳನ್ನು ಆನಂದದಿಂದ ಮೆಲುಕು ಮಾಡುವವರು ಇರಲಿಲ್ಲ. ಆ ಚಿಕ್ಕವಳು ಅಷ್ಟು ಕಾಲವೂ ಅಲ್ಲಿದ್ದ ಶಾಂತಿ, ತುಷ್ಟಿಗಳನ್ನು ತನ್ನೊಡನೆಯೆ ಕೊಂಡುಹೋಗಿಬಿಟ್ಟಿದ್ದಳು. ತಾನೇಕೆ ಅಷ್ಟು ಹುಚ್ಚೆದ್ದಿ ಆತುರಪಟ್ಟೆನೆಂಬ ಪಶ್ಚಾತ್ತಾಪ ಈಗ ಅನಸೂಯೆಯ ಮನವನ್ನು ಬಲು ಯಾತನೆಗೆ ಗರಿ ಪಡಿಸಿತ್ತು.

ಮಂಕು ಕವಿದಂತಾಗಿ ಅನಸೂಯೆ ಅಲ್ಲಿದ್ದ ಕುರ್ಚಿಯೊಂದರಲ್ಲಿ ನಾಲ್ಕೈದು ನಿಮಿಷ ಸ್ತಬ್ಧಳಾಗಿ ಕುಳಿತುಬಿಟ್ಟಳು. ನಿಶ್ಯಬ್ಧತೆಯ ಘೋರ, ನಿಮಿಷ ನಿಮಿಷಕ್ಕೂ ಹೆಚ್ಚುತ್ತಲೇ ಇತ್ತು.

ಈ ನಡುವೆ ಅಲ್ಲಿದ್ದ ದೊಡ್ಡ ಆಲ್ಮೈರದ ಬಾಗಿಲು ಮೆಲ್ಲನೆ ತೆರೆದ ಶಬ್ದವಾಯಿತು. ಅನಸೂಯೆ ಅದೇನೆಂದು ತಲೆಯೆತ್ತಿ ಅತ್ತ ನೋಡಿದಳು. ಒಳಗಣಿಂದ "ಅಮ್ಮಾ, ನನ್ನನ್ನು ಇಳಿಸಿಕೊ" ಎಂದ ಧ್ವನಿ ಕೇಳಿಸಿತು. ಅನಸೂಯೆಗೆ ಈಗ ಎದೆಯುಬ್ಬಿ ಬಿಗಿಯಿತು. ಆನಂದ ಪುಳಕಾಂಕಿತಳಾಗಿ, 'ಅಯ್ಯೊ ನನ್ನ ಕಂದಾ' ಎನ್ನುತ್ತ ಚಿಕ್ಕವಳನ್ನು ಬಾಚಿ ಎದೆಗೆ ಅಪ್ಪಿಕೊಂಡಳು. ಮುತ್ತಿಟ್ಟಳು. ಹೆತ್ತ ತಾಯಿ ಮಾತ್ರ ಸವಿಯಬಹುದಾದ ಮಹದಾನಂದವನ್ನು ಸವಿದಳು.

**ಕತೆಗಾರರ ಪರಿಚಯ:** ಕೆ.ವಿ.ಅಯ್ಯರ್ (ಕೋಲಾರ ವೆಂಕಟೇಶ ಅಯ್ಯರ್) (೧೮೯೪) ಕತೆಗಾರ ಮತ್ತು ಕಾದಂಬರಿಕಾರ. ರೂಪದರ್ಶಿ, ಶಾಂತಲ, ಲೀನಾ, ಸಮುದ್ಯತಾ ಇವರ ಪ್ರಮುಖ ಕೃತಿಗಳು.

**ಪ್ರಶ್ನೆಗಳು:**

೧. ಅನಸೂಯೆಯ ಜೀವನ ಹೇಗಿತ್ತು?
೨. ಕಿರಿಯ ಅನಸೂಯೆಯನ್ನು ಕಂಡಿದ್ದೆಲ್ಲಿ?
೩. ಕಿರಿಯ ಅನಸೂಯೆ ಮನೆಗೆ ಬಂದಾಗ ಕಥಾನಾಯಕಿ ಹೇಗೆ ಸ್ಪಂದಿಸಿದಳು?

# ೩. ಪದ್ಯ ಒಂದರ ಕುರಿತು

**–ಜಿ. ರಾಜಶೇಖರ**

**ಆಶಯ:** ಲೇಖನದ ಶೀರ್ಷಿಕೆ ಸೂಚಿಸುವಂತೆ ಪ್ರತಿಯೊಬ್ಬರೂ ಭಿನ್ನ ಮತಗಳಿಂದ ಅಭಿಪ್ರಾಯಗಳಿಂದ ಕೂಡಿರುತ್ತಾರೆ. ಯಾವುದೇ ವ್ಯಕ್ತಿಯ ಮನಸ್ಸಿನ ಸ್ಥಿತಿ, ಕಾಲಘಟ್ಟ, ಸಂದರ್ಭಗಳು ಭಿನ್ನತೆಯ ರೂವಾರಿಗಳಾಗುತ್ತವೆ.

ಈ ಶೀರ್ಷಿಕೆ ಓದಿಯೇ ಹಲವರ ಹುಬ್ಬು ಮೇಲೆ ಹೋಗಬಹುದು. "ಪದ್ಯದ ಕುರಿತು ಭಿನ್ನಮತವೆ? ಪದ್ಯ ಕೇವಲ ಪದ್ಯವೇ ಹೊರತು ಹೇಳಿಕೆಯಲ್ಲ, ಪ್ರತಿಪಾದನೆಯೂ ಅಲ್ಲ ಅದರ ಕುರಿತು ಭಿನ್ನಮತ ಹೇಗಾದರೂ ಸಾಧ್ಯ ಎಂದು ಯೋಚಿಸುವವರ ಪ್ರಕಾರ ಪದ್ಯ ಏನೂ ಆಗಿರುವುದಿಲ್ಲ. ಅದು ಕೇವಲ ಇರುತ್ತದೆ ಮತ್ತು ಅದನ್ನು ಸರಿಯಾಗಿ ಓದುವ ಕ್ರಮವೆಂದರೆ ಅದು ಇರುವ ಹಾಗೆಯೇ ಸ್ವೀಕರಿಸುವುದು. ಈ ನಿಲುವು ಪ್ರಶ್ನಾರ್ಹವಾದ ಅನೇಕ ತೀರ್ಮಾನಗಳನ್ನು ಒಳಗೊಂಡಿದೆ. ಪದ್ಯವೊಂದು ಕೇವಲ ಇದೆ" ಎಂದಾದರೆ, ಅದು ಪೂರ್ಣಗೊಂಡ ಒಂದು ರಚನೆ. ಹಲವು ಓದುಗರು ಅದನ್ನು ಹಲವು ರೀತಿಗಳಲ್ಲಿ ಓದಬಹುದು. ಎಂಬುದನ್ನಾಗಲೀ, ಒಬ್ಬನೇ ಓದುಗ ತನ್ನ ಹಲವು ಓದುಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಕಂಡುಕೊಳ್ಳಬಹುದು ಎಂಬುದನ್ನಾಗಲೀ, ಈ ಧೋರಣೆ ಅಲ್ಲಗಳೆಯುತ್ತದೆ.

ಪದ್ಯದಲ್ಲಿ ಅರ್ಥ ಹುಡುಕಬಾರದು ಎಂದರೆ ಅದು ಒಂದು ಪ್ರಶ್ನಾತೀತವಾದ ವಸ್ತುಸ್ಥಿತಿಯಾಗಿ ಬಿಡುತ್ತದೆ. ಬೆಟ್ಟ, ಬಂಡೆ, ನದಿ ಅಥವಾ ಹೂವು ಹೇಗೆ ಪ್ರಶ್ನಾತೀತವೋ ಹಾಗೆ. ಅವುಗಳನ್ನು ನಾವು ನೋಡುವ ಹಾಗೆಯೆ ಕವಿತೆಯನ್ನು ಓದಬೇಕು ಅಂದರೆ ಕವಿತೆಯೂ ಸಂವಾದಕ್ಕೆ ಹೊರತಾದದ್ದಾಗುತ್ತದೆ. ನಿರ್ದಿಷ್ಟ ಕವಿತೆಗಳನ್ನೇ ಉದಾಹರಿಸಿ ಹೇಳುವುದಾದರೆ, ಅಡಿಗರ "ಭೂತ" ಮತ್ತು "ರಾಮನವಮಿಯ ದಿವಸದಂತ ಪದ್ಯಗಳು ಅರ್ಥದ ಗೊಡವೆ ಬಿಟ್ಟುಕೊಟ್ಟ ರಚನೆಗಳೊ ಚರಿತ್ರೆ ಮತ್ತು ಸಂಸ್ಕೃತಿಗಳ ಕುರಿತು ಆ ಕವಿತೆಗಳ ಧೋರಣೆ ಚರ್ಚಾತೀತವೊ ಅಥವಾ ಅಂತಹ ಯಾವ ಧೋರಣೆಯೂ ಆ ಕವಿತೆಗಳಲ್ಲಿ ಇಲ್ಲವೇ ಇಲ್ಲವೋ ಪದ್ಯವನ್ನು ಕೇವಲ ಪದ್ಯವಾಗಿ ಸ್ವೀಕರಿಸಬೇಕು. ಅದರಲ್ಲಿ ಅರ್ಥ ಇತ್ಯಾದಿ ಹುಡುಕಬಾರದು ಎನ್ನುವವರ ನಿಜವಾದ ಉದ್ದೇಶ, ಇಂತ ಚರ್ಚೆಯನ್ನು ಹತ್ತಿಕ್ಕುವುದು. ಅವರ ಪ್ರಕಾರ ಯಾವುದೇ ಪದ್ಯಕ್ಕೆ ಇರುವುದು ಒಂದೇ ಪಾಠ ಆದ್ದರಿಂದ ಅದರ ಓದು ಕೂಡ ಒಂದೇ ಬಗೆಯದ್ದು. ಒಬ್ಬನೇ ದೇವರು, ಒಂದೇ ಜನ್ಮಸ್ಥಾನ, ಒಂದೇ ಪವಿತ್ರ ಗ್ರಂಥ ಎಂದು ಹಠ ಸಾಧಿಸುವ ಮತೀಯ ಮೂಲಭೂತವಾದದ ತರಹವೆ ಇರುವ ವಿಮರ್ಶೆಯ ಮೂಲಭೂತವಾದ ಇದು. ಪದ್ಯದ ಅರ್ಥದ ಬಗ್ಗೆ ಜಗಳ ತೆಗೆಯುವವರಿಗೆ ಅದರ ಸ್ವರೂಪದ ಗೊಡವೆ ಇಲ್ಲ ಎಂಬುದು ಈ ಮೂಲಭೂತವಾದಿಗಳ ಮೂಢನಂಬಿಕೆ, ಪದ್ಯದ ಅರ್ಥವೇನು? ಧೋರಣೆ ಏನು ಎಂದು ಕೇಳುವುದು ಕೂಡ ಪದ್ಯದ ಸ್ವರೂಪದ ಬಗ್ಗೆ ಕೇಳುವ ಪ್ರಶ್ನೆಯೇ. ಈ ಪ್ರಶ್ನೆಯನ್ನು ಯಾವ ಹಂತದಲ್ಲಿ ಎತ್ತಬೇಕು ಪದ್ಯದ ಸ್ವರೂಪವೆ ಅದರ ಧೋರಣೆಯನ್ನು ನಿರ್ಧರಿಸುತ್ತದೊ ಅಥವಾ ಪದ್ಯದ ಧೋರಣೆಯಿಂದ ಅದಕ್ಕೊಂದು ರೂಪ ಪ್ರಾಪ್ತವಾಗುತ್ತದೆ ಈ ಕುರಿತು ಚರ್ಚೆ ಸಾಧ್ಯ. ಆದರೆ ಪ್ರಶ್ನೆಯನ್ನೇ ಎತ್ತಬಾರದು ಎಂದರೆ ಹೇಗೆ?

ಅನಂತಮೂರ್ತಿಯವರ ಕಾಗದ ಓದಿ (ಅಜ್ಜನ ಹೆಗಲ ಸುಕ್ಕುಗಳು, ಮೈಸೂರು, ೧೯೮೯, ಪು. ೩೧). ಈ ಕವಿತೆಯಿಂದ ನನಗೆ ಆದ ಕಸಿವಿಸಿಯನ್ನು ಹೇಳಲು ಇಷ್ಟು ಪೀಠಿಕೆ ಅಗತ್ಯವಾಯಿತು. ಅನಂತಮೂರ್ತಿ ತನ್ನ ಕೃತಿಗಳಲ್ಲಿ ಮನುಷ್ಯ ಸ್ವಾತಂತ್ರ್ಯದ ಪ್ರಶ್ನೆಯನ್ನು ಶೋಧಿಸಿದವರು. ಮನುಷ್ಯನ ಮಿತಿ ಮತ್ತು ಸಾಧ್ಯತೆ ಅವರು ಸದಾ ಯೋಚಿಸುವ ವಿಷಯ. ಈ ಕವಿತೆಯೂ ಅಂತ ಒಂದು ಪ್ರಯತ್ನ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಇದರ ಸ್ವಾತಂತ್ರ್ಯ ಮತ್ತು ಸಫಲತೆಗಳ ಕಲ್ಪನೆಗಳು ಪ್ರಶ್ನಾರ್ಹವಾಗಿವೆ.

ಕವಿತೆಗಿಂತ ಮೊದಲು ಕವಿತೆಯ ನಾಯಕನ ಬಗ್ಗೆ ಕೆಲವು ಮಾತು ಹೇಳಬೇಕು. ವರವರರಾವ್ ಆಂಧ್ರದ ಕವಿ. ಆಂಗ್ಲ ಸಾಹಿತ್ಯದ ಪ್ರಾಧ್ಯಾಪಕರಾಗಿದ್ದ ಅವರು ಕಾವ್ಯದಲ್ಲಿ ಉಗ್ರವಾದಿ. ಅವರಿಗೆ ಆಂಧ್ರದ ಚಳುವಳಿಯ ಬಗ್ಗೆಯೂ ಸಹಾನುಭೂತಿ ಇತ್ತು. ವರವರರಾವ್ ಮೇಲೆ ಮೊಕದ್ದಮೆ ಹಾಕಿ ಜೈಲಿಗೆ ಸೇರಿಸಲು ಆಂಧ್ರದ ಪೋಲೀಸರಿಗೆ ಅಷ್ಟೇ ಪುರಾವೆ ಸಾಕಾಯಿತು. ಈಗಿನ್ನೂ ೪೦ರ ಹರೆಯದಲ್ಲಿರುವ ಅವರು ತಮ್ಮ ಯೌವನದ ಬಹುಭಾಗವನ್ನು ನರಕದಂತ ಜೈಲುಗಳಲ್ಲಿ ಕಳೆದಿದ್ದಾರೆ. ಈ ಸುದೀರ್ಘ ಜೈಲುವಾಸದಲ್ಲಿ ಅವರ ಆರೋಗ್ಯ ಪೂರ್ಣ ಹದಗೆಟ್ಟಿದ್ದು ಜೀವಮಾನವಿಡೀ ವಾಸಿಯಾಗದ ಅತಿಸಾರದ ಕಾಯಿಲೆಯೂ ಅವರಿಗೆ ಅಂಟಿಕೊಂಡಿದೆ. ಆದರೆ ಸರಕಾರ ಬದಲಾದರೂ ಆ ರಾಜ್ಯದ ಪೋಲೀಸರು, ಭೂಮಾಲೀಕರು, ಲೇವಾದೇವಿ ಯವರು, ಸಾರಾಯಿಗುತ್ತೇದಾರರು ಮತ್ತು ಫಾರೆಸ್ಟು ಕಾಂಟ್ರಾಕ್ಟರುಗಳು ಬದಲಾಗಲಿಲ್ಲವಾಗಿ, ವರವರರಾವ್ ಅವರ ಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಒಮ್ಮೆ ನ್ಯಾಯಾಲಯ, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ಪ್ರಸ್ತಾಪ ಮಾಡಿತು. ಆಗ ಅವರು ಆರ್ತರಾಗಿ, "ಘನತೆವೆತ್ತ ನ್ಯಾಯಾಲಯ ಹಾಗೆ ಮಾಡಬಾರದು ನಾನು ಜೈಲಿನಿಂದ ಹೊರಬಂದರೆ ಆಂಧ್ರದ ಪೋಲೀಸರು ನನ್ನನ್ನು ರಸ್ತೆಗಳಲ್ಲಿ ಬೇಟೆಯಾಡಿ ಕೊಲ್ಲುತ್ತಾರೆ ನನ್ನ ಪ್ರಾಣ, ಜೈಲಿನೊಳಗೇ ಹೆಚ್ಚು ಸುರಕ್ಷಿತ" ಎಂದು ಮನವಿ ಮಾಡಿಕೊಂಡಿದ್ದರು. ಸರಿಸುಮಾರು ಈ ಅವಧಿಯಲ್ಲಿಯೇ, ಅವರು

ಜೈಲಿನಿಂದ ಬರೆದ ಕೆಲವು ಪತ್ರಗಳು ಪ್ರಕಟವಾದವು. ಆ ಪತ್ರಗಳಲ್ಲಿ ವರವರರಾವ್ ಹಲವು ಸಂಗತಿಗಳ ಬಗ್ಗೆ ಹೇಳುತ್ತಾರೆ. ನಮ್ಮ ದೇಶದ ಪ್ರಭುತ್ವದ ಸ್ವರೂಪ, ಆಂಧ್ರದ ಅಸಮಾನ ವ್ಯವಸ್ಥೆ, ಎಡಪಂಥದ ಚಳುವಳಿ, ತನ್ನ ಮೇಲೆ ಇರುವ ಪೋಲೀಸು ಕೇಸುಗಳು, ಜೈಲಿನ ಪರಿಸ್ಥಿತಿ, ಹಾಗೆಯೇ ಜೈಲಿನ ಕಿಟಕಿಯಿಂದಲೆ ಅವರು ಕಂಡ ಋತುಗಳ ಬದಲಾವಣೆ ಮತ್ತು ಕೇಳಿಸಿಕೊಂಡ ಹಕ್ಕಿಗಳು ಕೂಗು–ಹೀಗೆ ಅನೇಕ ವಿಷಯಗಳು ಅವರ ಪತ್ರಗಳಲ್ಲಿ ಇವೆ. ಇವುಗಳ ಪೈಕಿ ಒಂದೆರಡು ವಿವರಗಳನ್ನು ಆಯ್ದುಕೊಂಡು ಅನಂತಮೂರ್ತಿ ತಮ್ಮ ಪದ್ಯವನ್ನು ಕಟ್ಟಿದ್ದಾರೆ. ಪದ್ಯ ಹೀಗಿದೆ:

ಹಲವು ಹೋರಾಟಗಳ ಕಲಿ ಮತ್ತೆ ಕಲಿಯುತ್ತಿರುವಿ
ವಿಫಲ ವಿಪ್ಲವದ ಜೈಲೆ ನಿನ್ನ ಪಾಲಿಗೆ ಸಸ್ಯಕಾಶಿಯಾಗಿ
ಮರಗಿಡ ಬಳ್ಳಿಗಳ, ಚಿಟ್ಟೆಗಳ, ಹಕ್ಕಿಗಳ
ಸತ್ಸಂಗದಲ್ಲಿ ನಿಸ್ಸಂಗಿಯಾಗುವುದನ್ನು,
ನಿಸ್ಸಂಗಿಯಾಗಿದ್ದ ಚಿಗುರುವ ಒಣಗುವ ವನಸ್ಪತಿ
ಜೀವಚಕ್ರ ಕಾಣುತ್ತ ನಿರ್ಮೋಹಿಯಾಗುವುದನ್ನು,
ನಿರ್ಮೋಹದಲ್ಲಿ ನೀರೆರೆದು ಕಣ್ಣಿಟ್ಟು ಕಾಪಾಡಿ
ಜೀವ ವರ್ತುಲದ ಚಲನಶೀಲ ಸಾತತ್ಯ ಧ್ಯಾನಿಸಿ
ನಿಶ್ಚಲ ತತ್ತಿಯಾಗುವುದನ್ನು,
ಸ್ಲೋಗನ್ ಕೂಗಿ ಕೂಗಿ ಒಡೆದ ಗಂಟಲಲ್ಲಿ ಸುಸ್ವನದ ಸತ್ಯ
ನುಡಿಯುವುದನ್ನು
ಸಹಿಷ್ಣು ಮೌನದಲ್ಲಿ ಮಾಗುತ್ತ
ನಿತ್ಯ ಆಗುವುದನ್ನು
ಒದ್ದೆ ಕಟ್ಟಿಗೆಯ ಹೊಗೆ ಕವಿದ ಒಲೆಯಲ್ಲಿ
ಉರಿಯತಕ್ಕದ್ದನ್ನು ಉರಿಸಲೇಬೇಕೆಂಬ ಒಣ ಹಠದ
ತರ್ಕಶೀಲ ಮನುಷ್ಯ ಚರಿತ್ರೆಯ ಕ್ರಾಂತಿ ದಿವ್ಯಕ್ಕೆ
ಊದುಗೊಳವೆಯೆಂದುಕೊಂಡಿದ್ದ ನೀನು
ಈಗ ಬಿಸಿಲಿಗೆ, ಇಬ್ಬನಿಗೆ
ಶಾಶ್ವತಿಯ ಸತತ ಋತುಕ್ರಾಂತಿಗೆ
ಹಠ ಮಾಡದೆ
ಬೀಜ
ಬಿದ್ದಿರುವಿ

ಪದ್ಯದ ಎರಡನೆ ಸಾಲಿನ ಕುವೆಂಪು ಭಾಷೆಯನ್ನು ನೆನಪಿಸುವ ಸಸ್ಯಕಾಶಿಯ ನುಡಿಗಟ್ಟಿನಿಂದಲೆ, ಪದ್ಯದ ಬಗೆಗಿನ ನನ್ನ ಅಸಮಾಧಾನ ಶುರುವಾಯಿತು. ಪದ್ಯದ ಮೊದಲಿಗೇ ಹಲವು ಹೋರಾಟಗಳ ಕಲಿ (ವೀರ) ಮತ್ತೆ ಕಲಿಯುವ ಪ್ರಸ್ತಾಪವಿರುವುದರಿಂದ, ಇಲ್ಲಿ ಕಾಶಿ ಎಂದರೆ ಕಲಿಕೆಯ ಕೇಂದ್ರ ಎನ್ನುವುದು ಸ್ಪಷ್ಟವಾಗಿದೆ. ಆದರೆ ಸಸ್ಯಕಾಶಿ ಎನ್ನುವುದು ನಮ್ಮ ಯೂನಿರ್ಸಿಟಿ ಕ್ಯಾಂಪಸ್ಸುಗಳ ಹೆಸರುಗಳಾದ ಮಾನಸಗಂಗೋತ್ರಿ, ಜ್ಞಾನಗಂಗೋತ್ರಿ, ಮಂಗಳಗಂಗೋತ್ರಿಗಳ ಹಾಗೆಯೇ ಒಂದು ಸೋಗಲಾಡಿ ನುಡಿಗಟ್ಟು, ಕಾಶಿ ಈ ದೇಶದ ಎಲ್ಲರಿಗೂ ಪವಿತ್ರವಾದ ಸ್ಥಳವೇನೂ ಅಲ್ಲ. ಅದು ಒಂದು ಕಲಿಕೆಯ ಕೇಂದ್ರ ಎಂದೇ ಇಟ್ಟುಕೊಂಡರೂ, ಅದರ ಕಲಿಕೆಯ ಪರಂಪರೆ ಎಂತದ್ದು ಎಂಬುದು ಕೇಳಲೇಬೇಕಾದ ಪ್ರಶ್ನೆ, ಎರಡು ಶಬ್ದಗಳ ಒಂದು ನುಡಿಗಟ್ಟು ಕೂಡ ಹೀಗೆ ಒಬ್ಬೊಬ್ಬರಿಗೆ ಒಂದೊಂದು ಅರ್ಥವನ್ನು ಹೊಮ್ಮಿಸುವಾಗ, ಇಡೀ ಪದ್ಯವನ್ನು "ಅದು ಇರುವ ಹಾಗೆ" ಹೇಗೆ ಗ್ರಹಿಸುವುದು "ಇರುವ ಹಾಗೆ" ಎಂದರೆ ಯಾರ ಪ್ರಕಾರ "ಇರುವ ಹಾಗೆ?"

ವರವರರಾವ್ ಅವರ ಬದುಕಿನಲ್ಲಿ ಕೆಲವು ಎಳೆಗಳನ್ನು ಹೆಕ್ಕಿ ತೆಗೆದು, ಅವುಗಳಲ್ಲಿಯೂ ಮತ್ತೆ ಕೆಲವನ್ನು ಪ್ರತ್ಯೇಕವಾಗಿ ಎತ್ತಿ ತೋರಿಸುವ ಪದ್ಯದ ಉಳಿದ ಸಾಲುಗಳೂ, ಈ "ಸಸ್ಯಕಾಶಿಯ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುವ ವರವರರಾವ್, ಈಗ ಬದಲಾದ ಮನುಷ್ಯ. ಮೊದಲಿನ ಕ್ರಾಂತಿಕಾರಿ ವರವರರಾವ್‌ಗೆ ಸದಾ ಜನಜಂಗುಳಿಯ ನಡುವೆ ಕಿವಿ ಕಣ್ಣುಗಳು ಮುಚ್ಚಿಕೊಂಡಿದ್ದವು. ಸ್ಲೋಗನ್ ಕೂಗಿ ಕೂಗಿ ಅವರ ಗಂಟಲು ಕೂಡ ಕೆಟ್ಟಿತ್ತು. ಈಗ ಅವರ ಇಂದ್ರಿಯಗಳು ಜಾಗೃತವಾಗಿವೆ ಅವರ ಮನಸ್ಸು ಸಹಿಷ್ಣು ಮೌನದಲ್ಲಿ ಮಾಗಿದೆ. ನಮ್ಮ ಪರಿಸರದಲ್ಲಿ ಸಹಿಷ್ಣು ಮೌನ, ಮಾಗುವಿಕೆ, ಹಠ ಮಾಡದೆ ಇರುವುದು ಇವೆಲ್ಲ ಸಂವೇದನೆ ಜಡವಾಗುವುದರ ಲಕ್ಷಣ ಎಂದು ನಾನು ತಿಳಿದಿದ್ದೆ. ಆದರೆ ಅನಂತಮೂರ್ತಿಯವರ ಪದ್ಯದಲ್ಲಿ ಅದೇ ಗುಣ, ಎಚ್ಚರವಾಗಿರುವುದರ ಲಕ್ಷಣ! ಅದರ ಪ್ರಕಾರ ವರವರರಾವ್ ಕ್ರಾಂತಿಕಾರೀ ಸ್ಲೋಗನ್‌ಗಳನ್ನು ಕೂಗುತ್ತಿದ್ದ ಕಾಲದಲ್ಲಿ ಸಂವೇದನ ಶೂನ್ಯರಾಗಿದ್ದರು. ಕಡೆಯಪಕ್ಷ ಪದ್ಯದಲ್ಲಿ ಹೇಳಲಾದ ಸಂಗತಿಗಳತ್ತ ಸಂವೇದನ ಶೂನ್ಯರಾಗಿದ್ದರು. ವರವರರಾವ್ ಬದುಕಿನ ಬಗ್ಗೆ ಕವಿ ಈ ತೀರ್ಮಾನಗಳಿಗೆ ಬರಲು ಯಾವ ಆಧಾರಗಳಿವೆಯೋ ನನಗಂತೂ ತಿಳಿಯದು. ಇಷ್ಟಕ್ಕೂ ಅವರ ಬದುಕು ಮುಗಿದ ಕಥೆ ಏನೂ ಅಲ್ಲ. ಕ್ರಾಂತಿಕಾರಿಗಳೆಲ್ಲ

ಹಠದಲ್ಲಿ ಸೆಟೆದು ಕಲ್ಲಾದವರು ಎಂದು ನಾವು ಭಾವಿಸುವುದಾದರೆ ಲೆನಿನ್, ಟ್ರಾಟೆಸ್ಕಿ, ಕ್ಯಾಸ್ಟ್ರೊ, ಚೆಗವಾರ, ಹೊಚಮಿನ್, ಗ್ರಾಮ್‌ಶಿ – ಎಲ್ಲರೂ ಕಲ್ಲಿನಂತಹ ವ್ಯಕ್ತಿತ್ವ ಪಡೆದವರು.

ಅನಂತಮೂರ್ತಿಯವರ ಸೂಕ್ಷ್ಮಜ್ಞತೆಯ ಕಲ್ಪನೆಯೇ ತಮಾಷೆಯಾಗಿದೆ. ಒಂದು ಹೂವು ನೋಡಿ ಆನಂದಿಸಲು, ಸಂಗೀತ ಕೇಳಿ ಸುಖ ಪಡೆಯಲು, ಕವಿತೆಯ ಸಾಲನ್ನು ಮೆಚ್ಚಿಕೊಳ್ಳಲು, ಅಷ್ಟೆಲ್ಲ ಯಾಕೆ, ರುಚಿಕಟ್ಟಾದ ಊಟ ಉಣ್ಣಲು ಕೂಡ ಸೂಕ್ಷ್ಮಜ್ಞತೆ ಬೇಕು. ಹಸಿವೆ, ಕಾಮ ಮತ್ತು ಯುದ್ಧದ ರಾಜಕೀಯವೇನು ಎಂದು ಚಿಂತಿಸುವುದಕ್ಕೆ ಸೂಕ್ಷ್ಮಜ್ಞತೆ ಬೇಡವೋ? ಹೂವು, ಕವಿತೆ, ಸಂಗೀತ ಇತ್ಯಾದಿಗಳನ್ನು ಮೆಚ್ಚುವುದಕ್ಕೆ ಅಭಿರುಚಿ ಇದ್ದರೆ ಸಾಕು. ನೈತಿಕ ಪ್ರಜ್ಞೆ ಇಲ್ಲದಿದ್ದರೂ ನಡೆಯುತ್ತದೆ. ಲೆನಿನ್, ಕ್ಯಾಸ್ಟ್ರೋರಷ್ಟು ದೂರ ಯಾಕೆ ಹೋಗಬೇಕು? ಗಾಂಧೀಜಿ ಕೂಡ ಆ ವಿಷಯಗಳಲ್ಲಿ ಅಂತ ರಸಿಕರೇನೂ ಅಲ್ಲ. ಇದೇ ನಾನು ಹೇಳಬೇಕು ಎಂದಿರುವ ಮುಖ್ಯ ವಿಷಯ. ವರವರರಾವ್ ವ್ಯಕ್ತಿತ್ವದ ನೈತಿಕ ಆಯಾಮವೇ ಅನಂತಮೂರ್ತಿಯವರ ಕವಿತೆಗೆ ದಕ್ಕದೆ ಹೋಗಿದೆ. ಅದಕ್ಕೆ ಕಾರಣವೆಂದರೆ ಅನಂತಮೂರ್ತಿಯವರಿಗೆ ವರವರರಾವ್, ನಮ್ಮ ಈ ಸಮಾಜದಲ್ಲಿ ನಮ್ಮ ನಡುವೆಯೇ ಬದುಕುತ್ತಿರುವ–ಜೀವಂತ ವ್ಯಕ್ತಿಯಲ್ಲ. ಬದಲು ತಮ್ಮ ತದೇಕ ದೃಷ್ಟಿಗೆ ಬಿದ್ದ ಒಂದು ವಸ್ತು. ಬೆಟ್ಟದ ಮೇಲೆ ಅಕಾರಣವಾಗಿ ಇರುವ ಬಂಡೆಯನ್ನು ಅಥವಾ ಹೂದಾನಿಯ ಹೂವನ್ನು ನೋಡುವ ಹಾಗೆ ಅವರು ವರವರರಾವ್ ವ್ಯಕ್ತಿತ್ವವನ್ನು ನೋಡುವುದು. ಕವಿ ದೂರದಲ್ಲಿ ಎತ್ತರದಲ್ಲಿ ಕೂತು ನೋಡುವವನು ಆತನ ಎದುರು ಈ ಜಗತ್ತಿನ ಜೀವನ ನಾಟಕ ನಡೆಯುತ್ತದೆ. ಅದರಲ್ಲಿ ವರವರರಾವ್ ಅವರದ್ದೂ ಒಂದು ಪಾತ್ರ. ಕವಿ ಇದಕ್ಕೆ ಸಾಕ್ಷಿಪ್ರಜ್ಞೆಯಾಗಿದ್ದಾನೆ. ಜಾಗೃತವಾದ ಕವಿ ಚೇತನಕ್ಕೆ ಕ್ರಾಂತಿಕಾರಿಯ ಬದುಕು ಕೂಡ ಒಂದು ವಸ್ತು. ತಾನು ಬಣ್ಣಿಸುವ ವಸ್ತುವನ್ನು ಸರಿಯಾಗಿ ನೋಡಲು ಕವಿ, ತನ್ನ ವಸ್ತುವಿನಿಂದ ಮಾನಸಿಕ "ದೂರ"ವನ್ನು ಕಲ್ಪಿಸಿಕೊಳ್ಳಬೇಕು ಎಂಬುದನ್ನು ಕೂಡ ಇಂತ ನಿಲುವಿನ ಹಿಂದೆ ಇರುವ ತಿಳುವಳಿಕೆಯಾಗಿದೆ.

ಆದರೆ ಈ ದೂರ, ನೈತಿಕವಾಗಿಯೂ ದೂರವೋ ಎಂದು ಕೇಳಿದರೆ ಮಾತ್ರ ಹೀಗೆ...............

**ಬೋರಲಾಗಿಟ್ಟ ದಿನಚರಿಯ ಪುಸ್ತಕ**
**ಅದರ ಒಳಹೊರಗೆ**
**ಕವಿತೆಯ ಚೂರುಗಳು ಅನೇಕ.**

ಈ ಉಧೃತಕ್ಕೆ ನನ್ನ ವಿವರಣೆಯ ಅಗತ್ಯವಿಲ್ಲ. ಕನಸಿನಲ್ಲಿ ಚೆ ಗೆ, ಅವನ ಪ್ರತಿರೂಪಕ್ಕೆ ಕೇಳಿದ ಪ್ರಶ್ನೆಯೇ ಕವಿಗಳನ್ನು ನಾನು ಕೇಳಬಯಸುವ ಪ್ರಶ್ನೆಯೂ ಆಗಿದೆ.

**ಲೇಖಕರ ಪರಿಚಯ:** ಜಿ. ರಾಜಶೇಖರ (೧೯೪೬, ಉಡುಪಿ ಬಳಿಯ ಗುಂಡ್ಮಿ) ವಿಮರ್ಶಕರು. ಅಡಿಗರ ಸುವರ್ಣ ಪುತ್ಥಳಿ ಸಂಕಲನಕ್ಕೆ ಬರೆದ ಮುನ್ನುಡಿ, ಜನ್ನನ ಯಶೋಧರ ಚರಿತೆ ಬಗ್ಗೆ ಬರೆದ ದೀರ್ಘ ಲೇಖನ ಕನ್ನಡ ಸಾಹಿತ್ಯವನ್ನು ಹೊಸ ವಿಧಾನದಲ್ಲಿ ನೋಡುವಂತೆ ಮಾಡಿತು. 'ಬಹುವಚನ ಭಾರತ' ಅವರ ಪ್ರಸಿದ್ಧ ಕೃತಿ.

**ಪ್ರಶ್ನೆಗಳು:**

೧. ಕಾವ್ಯಕ್ಕೂ ಸಂಗೀತಕ್ಕೂ ಇರುವ ಸಾಮ್ಯತೆಗಳೇನು?
೨. ಕವಿತೆಯನ್ನು ಓದುವ ಕ್ರಮ ಹೇಗಿರಬೇಕು?
೩. ವರವರರಾವ್‌ರನ್ನು ಪರಿಚಯಿಸಿ.

## ಘಟಕ : ೨

# ೧. ವಚನಗಳು

**–ಚೆನ್ನಬಸವಣ್ಣ**

**ಆಶಯ:** ವಚನವೆಂದರೆ ಮಾತು, ಪ್ರಮಾಣ, ಹಾಡಿದರೆ ಹಾಡಾಗುವ ಓದಿದರೆ ಗದ್ಯವಾಗುವ ಕನ್ನಡದ ವಿಶಿಷ್ಟ ಕಾವ್ಯ ಪ್ರಕಾರ ಇದು. ವಚನ ಸಾಹಿತ್ಯ ಚಳುವಳಿ ಬದುಕಿನಲ್ಲಿ ಸಾಹಿತ್ಯದಲ್ಲಿ ಹಾಗೂ ಅಧ್ಯಾತ್ಮದಲ್ಲಿ ಅಪೂರ್ವವಾದ ಸಾಧನೆಗಳಿಗೆ, ಎಡೆಮಾಡಿಕೊಟ್ಟಿತು. ಕಾಯಕ–ದಾಸೋಹಗಳ ಪರಿಕಲ್ಪನೆಯಲ್ಲಿ ಬದುಕು ಮತ್ತು ಧರ್ಮವನ್ನು ಸಂಲಗ್ನಗೊಳಿಸಿಕೊಂಡ ಕಾಲಮಾನವದು. ಅಳು–ಅರಸ, ಉಚ್ಚ–ನೀಚ ಎಂಬ ಭೇದಗಳನ್ನು ಕಳಚಿ ಮಾನವತೆಯ ಪ್ರೀತಿಯನ್ನು ಬಿತ್ತಿದ ಕಾಲವದು.

ನಿಷ್ಠೆಯುಳ್ಳಾತಂಗೆ ನಿತ್ಯ ನೇಮದ ಹಂಗೇಕೆ
ಸತ್ಯವುಳ್ಳಾತಂಗೆ ತತ್ವ ವಿಚಾರದ ಹಂಗೇಕೆ
ಅರಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ
ಮನಶುದ್ದವುಳ್ಳವಂಗೆ ಮಂತ್ರದ ಹಂಗೇಕೆ
ಭಾವಶುದ್ದವುಳ್ಳವಂಗೆ ಹೂವಿನ ಹಂಗೇಕೆ
ಕೂಡಲಚೆನ್ನಸಂಗಯ್ಯಾ

ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ
ಕತ್ತೆಯು ಭಕ್ತನಾದರೆ ಏನುಫಲ ಅದು ಹೊಲಸು ತಿನ್ನುವುದನ್ನು ಬಿಟ್ಟಿತೇ?
ಬೆಕ್ಕು ಭಕ್ತನಾದಡೆ ಏನುಫಲ ಅದು ಇಲಿ ತಿನ್ನುವುದನ್ನು ಬಿಟ್ಟಿತೇ? ಹಂದಿ
ಭಕ್ತನಾದರೇನು ಫಲ ಅದು ಕೊಳಚೆ ತಿನ್ನುವುದನ್ನು ಬಿಟ್ಟಿತೇ? ನಾಯಿಯು
ಭಕ್ತನಾದರೆ ಏನು ಫಲ ಅದು ಹಳಸಿದ ಮಾಂಸ ತಿನ್ನುವುದನ್ನು ಬಿಟ್ಟಿತೇ?
ಕೂಡಲ ಚನ್ನಸಂಗಯ್ಯ.

ಅಜಕೋಟಿ ವರುಷ ದೇವರೆಲ್ಲರೂ ಹಿರಿಯರೇ
ಹುತ್ತೇರಿ ಬೆತ್ತಬೆಳೆದ ತಪ್ಪಸ್ವಿಗಳೆಲ್ಲರೂ ಹಿರಿಯರೇ
ಮತಿಗೆಟ್ಟು ಒಂದನಾಡ ಹೋಗಿ ಒಂಬತ್ತನಾಡುವ
ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವರಿದು ಘನವ
ಬೆರೆಸ ಹಿರಿಕಿರಿದೆಂಬ ಬೇಧವ ಮರೆದು ಕೂಡಲಚನ್ನ
ಸಂಗಯ್ಯನಲ್ಲಿ ಬೇರಿಸಿ ಬೇರಿಲ್ಲದಿಪ್ಪ ಹಿರಿತನ
ನಮ್ಮ ಮಹಾದೇವಿಯಕ್ಕಂಗಾಯ್ತು

ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು
ಕ್ಷೀರದೊಳಡಗಿದ ತುಪ್ಪದಂತಿದ್ದಿತು
ಚಿತ್ರದೊಳುಡಗಿದ ಚಿತ್ರದಂತಿದ್ದಿತು
ನುಡಿಯೊಳಡಗಿದ ಅರ್ಥದಂತಿದ್ದಿತು
ಕೂಡ ಚನ್ನಸಂಗಯ್ಯ ನಿಮ್ಮ ನಿಲಿವು.

**ವಚನಕಾರರ ಪರಿಚಯ:** ಚನ್ನಬಸವಣ್ಣ (೧೧೬೦) ಶರಣ ಸಮಾಜದಲ್ಲಿ ಪ್ರಮುಖ ವಚನಕಾರ. ಈತನ ವಚನಗಳ ಭಾಷೆ ನೇರ ಮತ್ತು ನಿಷ್ಠುರ. ಈತ ಬಸವಣ್ಣನ ಸೋದರಳಿಯ.

**ಪ್ರಶ್ನೆಗಳು:**

೧. ಮನಸು ಶುದ್ದಿಯಿರುವ ಭಕ್ತರಿಗೆ ಮಂತ್ರದ ಹಂಗು ಏಕೆ?
೨. ಚೆನ್ನಬಸವಣ್ಣನ ವಚನಗಳ ಆಶಯ ವಿವರಿಸಿ .

# ೨. ಕುಂಡಜ್ಜನ ಪರಸಂಗ

**–ಡಾ. ಕೃಷ್ಣಮೂರ್ತಿ ಹನೂರು**

**ಆಶಯ:** ಬಾಳು ಎಷ್ಟೊಂದು ವರ್ಣಮಯ ಅಂದರೆ ಇಲ್ಲಿ ಎಲ್ಲಾ ಬಗೆಯ ಜನರೂ ಸಿಗುತ್ತಾರೆ. ಸೋತವರು, ಗೆದ್ದವರು, ಸಾಧಕರು, ಎಲ್ಲರಿಗೂ ಒಂದೊಂದು ಹಿನ್ನೆಲೆ ಇದ್ದೇ ಇರುತ್ತದೆ. 'ನೆಮ್ಮದಿ' ಹುಡುಕುತ್ತಾ ಸಾಗುವ ಮನುಷ್ಯ ಅದಕ್ಕಾಗಿ ತೆರುವ 'ಬೆಲೆ' ಕಡಿಮೆಯದೇನೂ ಅಲ್ಲ. ಪ್ರಸ್ತುತ ಕಥೆ ಸಮಾಜದಲ್ಲಿನ ಅಸಹಾಯಕರ ಜೀವನದ ಒಡಲಾಳವನ್ನು ತೆರೆದಿಡುತ್ತದೆ.

ಕುಂಡಜ್ಜ ಹುಟ್ಟಿದ ಕಾಲಕ್ಕೆ ಅವನ ತಂದೆ ತಾಯಿಗಳು ಕೊಂಡಯ್ಯ ಎಂದು ಹೆಸರಿಟ್ಟರಾದರೂ ಹುಡುಗ ಬೆಳೆಯುತ್ತಾ ಊರವರೆಲ್ಲ ಅವನನ್ನು ಕುಂಡಯ್ಯ ಕುಂಡಯ್ಯ ಅಂತಲೇ ಕರೆದರು. ಯಾಕೆಂದರೆ ಹೈದ ಬಲದಿಕ್ಕಿಗೆ ಇರುವವರನ್ನು ಎಡದಿಂದಲೂ, ಎಡದಿಕ್ಕಿಗೆ ಇರುವವರನ್ನು ಬಲದಿಂದಲೂ ನೋಡುತ್ತಿದ್ದನು. ಆದ್ದರಿಂದ ಇವನ ಹೆಸರು ಕೊಂಡಯ್ಯ ಇರಲಾರದು ಕುಂಡಯ್ಯನೇ ಇರಬೇಕೆಂದು ಹಾಗೆ ಕರೆದರು.

ವಯಸ್ಸಾದ ಮೇಲೆ ಯಾರಾದರೂ ತಮಾಷೆಗೆ ಕುಂಡಯ್ಯನನ್ನು 'ಕಣ್ಣು ಯಾಕಯ್ಯ ವಂಡ್ರಗಣ್ಣಾಯ್ತು' ಅಂದು ಕೇಳಿದರೆ ಅದಕ್ಕೆ ಅವನು ಒಂದು ಪರ್ಸಂಗವನ್ನೇ ಹೇಳುತ್ತಿದ್ದ: 'ಸ್ವಾಮಿ, ನಾನು ತುಂಬಿದ ಪ್ರಾಯಸ್ಥನಾಗಿ, ಗಂಟಲದನಿ ಒಡೆದು, ಚಿಗುರು ಮೀಸೆ ಮೂಡುವ ಕಾಲದಲ್ಲಿ ಲಗ್ನ ಆಗಬೇಕು ಅಂತ ರೊಟ್ಟಿ ಬುತ್ತಿ ಕಟ್ಟಿಕೊಂಡು ಊರು, ಕೇರಿ, ಕಾಡು ಮೇಡು ಅನ್ನದೆ ಹೊರಟೆ. ಅಲ್ಲೊಂದು ಪಟ್ಟಣ ಸಿಕ್ಕಿತು. ಆ ಪಟ್ಟಣದಲ್ಲಿ ಒಬ್ಬಳು ಸೂಳೆ. ಅವಳು ಊರ ಮುಂದೆ ಒಂದು ನಗಾರಿ ಮಡಗಿಸಿದ್ದಳು. ಆ ನಗಾರಿಗೆ ಒಂದೇಟು ಹೊಡೆದವನು ಒಂದು ಸಾವಿರ ಕೊಟ್ಟು ಒಂದು ರಾತ್ರಿ ಅವಳನ್ನು ಊಟ ಮಾಡಬಹುದಾಗಿತ್ತು. ಎರಡೇಟು ಹೊಡೆದವನು ಎರಡು ಸಾವಿರ, ಎರಡು ರಾತ್ರಿ ಹೀಗೆ. ಸರಿ, ಲೋಕದ ಮೇಲಿನ ಸಿರಿವಂತರು, ರಾಜನ ಮಕ್ಕಳು, ಮಂತ್ರಿ ಮಕ್ಕಳು ಎಲ್ಲಾ ಅವಳ ತಾವು ಹೋಗುತ್ತಿದ್ದರು. ಆ ಮಾರ್ಗವಾಗಿ ಹೋದಂಥ ನಾನು ಅದು ಸೂಳೆ ನಗಾರಿ ಅಂತ ಗೊತ್ತಿಲ್ಲದೆ ದೊಣ್ಣೆ ತಗಂಡು ಢಮಢಮ ಅಂದು ಬಾರಿಸಿಬಿಟ್ಟೆ. ಅಬ್ಬಬ್ಬ ಇಷ್ಟು ಏಟು ಹೊಡೆದಂಥ ಧನಿಕ ಇನ್ನೆಂಥವನಿರಬಹುದು ಅಂದು ಊರ ಜನವೆಲ್ಲ ಬಂದು ನನ್ನ ನೋಡಿ ನಗಾಡಿದರು. ಅಷ್ಟು ಹೊತ್ತಿಗೆ, ಅಹಾ ಅಷ್ಟು ಏಟು ಹೊಡೆದು ನನ್ನ ಭೋಗ ಮಾಡಕೆ ಬರುತ್ತಾ ಇರವುರ ನಾನೇ ಹೋಗಿ ಆರತಿ ಹಿಡಿದು ಕರಕೊಂಡು ಬರುವುದು ಸರಿ ಅಂದು ಆ ನಾಯಕಸಾನಿ ಬಂದಳು. ಬಂದು ನನ್ನ ನೋಡಿದ್ದೇ ಅವಳಿಗೆ ಎಲ್ಲಿಲ್ಲದ ರುದ್ರಕೋಪ ಬಂತು. ಆ ಕೆನ್ನೆಗೊಂದು ಈ ಕೆನ್ನೆಗೊಂದು ಬಾರಿಸಿದಳು. ಆಗಲೀಗ ಎಡಗಡೆ ಕಣ್ಣು ಬಲಕ್ಕೆ, ಬಲಗಡೆ ಕಣ್ಣು ಎಡಕ್ಕೆ ಬಂತು.....'

ಮೇಲೆ ಹೇಳಿದ ಪರ್ಸಂಗ ನೋಡಿದರೆ ಕುಂಡಜ್ಜ ಒಳ್ಳೆಯ ಕಥೆಗಾರನೇ ಇರಬಹುದು ಎನಿಸುತ್ತದೆ. ಅನ್ನಿಸುವುದೇನು ಬಂತು ಆ ಮಾತು ನಿಜ. ಕುಂಡಯ್ಯ ಹುಟ್ಟುವುದಕ್ಕೆ ಮೊದಲು ಅವನ ತಂದೆ ತಾಯಿಗಳು, ಸ್ವಾಮಿ ಕಾರಯ್ಯನು ತಮಗೆ ಒಂದು ಗಂಡು ಸಂತಾನವನ್ನು ಕರುಣಿಸುವುದಾದರೆ, ಆ ಮುಂದಿನ ಯಾವುದಾದರೂ ಒಂದು ವರ್ಷ ಸ್ವಾಮಿಯ ಗುಡ್ಡಕ್ಕೆ ಯಾತ್ರೆ ಬಂದು ಗಂಡ ಹೆಂಡತಿಯರಿಬ್ಬರೂ ತಲೆಮುಡಿ ಕೊಡಿಸಿ, ಉರುಳು ಸೇವೆ ಮಾಡಿ ಬರುವುದಾಗಿ ಹರಕೆ ಕಟ್ಟಿಕೊಂಡಿದ್ದರು. ಅದರಂತೆ ಕುಂಡಯ್ಯ ಹುಟ್ಟಿದ ಏಳನೇ ವರ್ಷದಲ್ಲಿ ಹರಕೆ ತೀರಿಸಿ ಬರಲು ಹೊರಟರು. ಆ ವರ್ಷ ಕರಯ್ಯನ ಗುಡ್ಡದ ಬುಡದಲ್ಲಿ ಜನಸಮೂಹ ಬಹಳ ಸೇರಿತ್ತು. ಜಾತ್ರೆ ಶ್ರಾವಣದಲ್ಲಾದುದರಿಂದ ಮಳೆಯ ತಾಪತ್ರಯ ಬೇರೆ. ಐದು ದಿನಗಳ ಜಾತ್ರೆಯಲ್ಲಿ ಮೂರು ದಿನ ಮಳೆ ಹೊಡೆಯಿತು. ಜಾತ್ರೆಯ ಮೈದಾನದ ಕೊಳೆ, ಕಸಕಡ್ಡಿ, ಮಲ ಮೂತ್ರ ಎಲ್ಲ ಮಳೆಯ ನೀರಿಗೆ ಕೊಚ್ಚಿ ಬಂದು ಗುಡ್ಡದ ಬುಡದ ಕೆರೆಗೆ ಸೇರಿಕೊಂಡಿತು. ಅದೇ ನೀರು ಬಳಸಿ ಮೈ ಕೈ ತೊಳೆಯಲಾಗಿ, ಬಹಿರ್ದೆಶೆ ಶುದ್ಧಿ ಮಾಡಲಾಗಿ, ಕುಡಿಯಲಾಗಿ ಆಹಾ ಓಹೋ ಅನ್ನುವುದರಲ್ಲಿ ಕಾಲರಾ ಹತ್ತಿಕೊಂಡಿತು. ನೂರಾರು ಜನ ನಿಂತ ನಿಂತಲ್ಲೇ ಕುಂತ ಕುಂತಲ್ಲೇ ವಾಂತಿ ಬೇದಿಯಾಗಿ ಭೂಮಿಗೆ ಕೈಕಾಲು ಚಾಚಿದರು.

ಹೀಗಾಗಿ ಕುಂಡಯ್ಯನ ಅಪ್ಪ ಅವ್ವಂದಿರೂ ಹೋದಲ್ಲೇ ಹೋಗಿ, ಇತ್ತ ಹುಡುಗ ಒಬ್ಬನೇ ಆದ. ಏಳನೇ ವಯಸ್ಸಿನಿಂದ ಹತ್ತು ಹನ್ನೆರಡರವರೆಗೆ ಕುಂಡಯ್ಯ ಅವರಿವರ ಮನೆಯ ಹೊಸ್ತಿಲು, ಕೊಟ್ಟಿಗೆ, ತ್ವಾಟ ತುಡಿಕೆಗಳಲ್ಲಿ ಬೆಳೆದ. ಪ್ರಾಯಕ್ಕೆ ಸಲ್ಲುತ್ತಿದ್ದಂತೆ ಊರವರ ದನಗಳನ್ನು ಮೇಯಿಸುವ ಕಾಯಕ ಹಿಡಿದ. ಆಮೇಲಾಮೇಲೆ ಕುಂಡಯ್ಯ ಊರೊಳಗೆ ಬೆಳೆದುದಕ್ಕಿಂತ ಕಾಡಲ್ಲಿ ಬೆಳದದ್ದೇ ಹೆಚ್ಚು.

ಕಾಡಿನಿಂದ ಹೈದ ಬಂದನೆಂದರೆ ತಾನೇ ಮುದ್ದೆ ತಿರುವಿಕೊಂಡು, ಉಂಡು, ಒಬ್ಬನೇ ಗುಡಿಸಿಲೊಳಗೆ ಮಲಗಲು ಬೇಸರಿಕೆಯಾಗಿ ಅವರಿವರ ಜಗುಲಿ ಸೇರುತ್ತಿದ್ದ. ಅಲ್ಲಿ ನಿದ್ದೆ ಬರದೆ ಮುದುಕರು, ಮೋಟರೊಂದಿಗೆ ಮಲಗಿ ರಾತ್ರಿಯೆಲ್ಲ ಪರ್ಸಂಗ ಕೇಳುವುದು, ಒಡಪು ಒಡಚುವುದು ಮಾಡುತ್ತಿದ್ದ. ಕೊನೆಗೆ ಅವನೊಬ್ಬನೇ ಆದಾಗ ತನಗೆ ತಾನೇ ಮಾತಾಡಿಕೊಳ್ಳುವುದೂ ರೂಢಿಯಾಗಿ ಬಿಟ್ಟಿತ್ತು. ಹೀಗೆ ಬೆಳೆದ ಕುಂಡಯ್ಯನಿಗೆ ಲಗ್ನ ಮಾಡುವವರೂ ಕಾಣದೆ, ಅವನಂತೆಯೇ ದಿಕ್ಕಿಲ್ಲದೆ ನಿಂತಿದ್ದ ಕಾಡಮ್ಮನನ್ನು ಅವನು ಕೂಡಿದಾಗ ವಯಸ್ಸು ನಲವತ್ತು ದಾಟುತ್ತಿತ್ತು.

ಈಚೀಚೆಗೆ ಕುಂಡಜ್ಜನಿಗೆ ಕಿವಿ ಕೇಳದೆ, ಕಣ್ಣು ಕಾಣದೆ, ಕೈಕಾಲೂ ಸಹ ಬಿದ್ದು ಹೋಗಿ, ಊರವರ ಕೆಲಸಗಿಲಸ ಆಗಲಿ ದನ ಮೇಯಿಸುವುದೇ ಆಗಲಿ ಬಿಟ್ಟು ದಿನವೆಲ್ಲ ಅವನು ಗುಡಿಸಲ ಮುಂದೆಯೇ ಕೂರುವಂತಾಗಿದೆ. ಇಷ್ಟಾದರೂ ಕುಂಡಜ್ಜನಿಗೆ ಹೇಳುವವರು ಕೇಳುವವರೂ ಯಾರೂ ಇಲ್ಲವೆಂತಲ್ಲ. ತಿಪ್ಪಮ್ಮನೆಂಬ ಮಗಳೂ ಅವಳಿಗೆ ಹುಟ್ಟಿದ ಸಿವಮಲ್ಲು, ಸಣ್ಣನಿಂಗು ಎಂಬಿಬ್ಬರು ಮೊಮ್ಮಕ್ಕಳೂ ಇರುವರು. ಮಗಳು ಕೂಲಿನಾಲಿಗೋ, ಸೌದೆ ಸೊಪ್ಪಿಗೋ ಹೋಗಿ ಬಿಟ್ಟರೆ ಮೊಮ್ಮಕ್ಕಳು ಶಾಲೆಗೆ ಹೋಗಿ ಬಿಡುವವು. ಇದರಿಂದಾಗಿ ಕುಂಡಜ್ಜ ಗುಡಿಸಲ ಮುಂದೆ ಒಬ್ಬನೇ ಆಗಿ, ಹುಟ್ಟಿದ ಸೂರ್ಯ ಪರಮಾತ್ಮನು ಮುಳುಗುತ್ತಲೇ ಇರಲಿಲ್ಲ. ಹೀಗೆ ಹೊತ್ತು ಬಡಪಟ್ಟಿಗೆ ಹೋಗದ ಕಾರಣ ಕುಂಡಜ್ಜ ಶಾಲೆಗೆ ಹೋಗದೆ ಕೇರಿಯಲ್ಲೇ ಆಡುವ ಹೈಕಳ ಕರೆದು ತಾನು ಊರವರ ದನಗಳನ್ನು ಕಾಯಲು ಹೋಗುತ್ತಿದ್ದ ಸಮಯದಲ್ಲಿ ಹುಲಿ ಕಿರುಬಗಳು ಅವುಗಳ ಮೇಲೆ ಬೀಳ ಬಂದಲ್ಲಿ ಮಿಕಗಳ ಬಾಯಿಂದ ಕಾಲ್ನಡೆಗಳನ್ನು ಹೇಗೆ ತಪ್ಪಿಸಿ ತರುತ್ತಿದ್ದೆನೆಂಬ ಸಂಗತಿಗಳನ್ನು ಬಣ್ಣ ಬಣ್ಣವಾಗಿ ಬಣ್ಣಿಸುತ್ತಿದ್ದ. ಮಕ್ಕಳಂತೂ ಕುಂಡಜ್ಜನ ಪರ್ಸಂಗಗಳನ್ನು ಬಿಟ್ಟ ಬಾಯ ಬಿಟ್ಟೇ ಕೇಳುತ್ತಿದ್ದವು.

೨

ಕುಂಡಜ್ಜ ಆವತ್ತೂ ತನ್ನ ಗುಡಿಸಲ ಮುಂದೆ ಕೂತಿದ್ದ. ಮಂಡಿಯ ಮೇಲೆ ರೂಪಾಯಗಲದ ವ್ರಣವಿದ್ದು ಅದರ ಮೇಲೆ ಹತ್ತಾರು ನೊಣಗಳು ಆನಂದದಿಂದ ಮುಲುಗುಟ್ಟುತ್ತಿದ್ದವು. ಮುದುಕನೂ ಸಮಯಕಾಯ್ದು ರಪ್ಪನೆ ಕೈ ತಟ್ಟುತ್ತಿದ್ದ. ಆದರೆ ನೊಣಗಳು ಅವನ ಮಾಮೂಲಿ ಉಪಾಯಕ್ಕೆ ದಕ್ಕದೆ ಗೊಳ್ಳೆಂದು ನಗುತ್ತ ಮೇಲೆದ್ದು ಕುಣಿದಾಡುತ್ತಿದ್ದವು. ಯಾರಾದರೂ ದಾರಿಹೋಕರು ಇದನ್ನೆಲ್ಲ ನೋಡಿ ಸುಮ್ಮಗಾದರೂ, 'ಇದೇನ್ ಕುಂಡಜ್ಜ ಮಂಡಿ ಮ್ಯಾಲೆ?' ಅಂದರೆ, 'ಅಯ್ ರೂಪಾಯಿ ಬುದ್ದಿ. ಜೇಬಿಲ್ಲ, ಜೇಬಿರಾಂಥ ಸರ್ಟಿಲ್ಲ, ಅದರಿಂದ ರೂಪಾಯ್ನ ಮಂಡಿಮ್ಯಾಲೆ ಮಡಿಕಂಡಿವ್ನಿ' ಅನ್ನುತ್ತಿದ್ದ. ಆಗ್ಗೆ ಅದನ್ನು ಕೇಳಿದವರು ನಗದೇ ಮುಂದೆ ಹೋಗುತ್ತಿರಲಿಲ್ಲ.

ಹಾಗೆ ಆವತ್ತು ನೊಣ ಬಡಿದೂ ಬಡಿದೂ, ಕೂತೂ ಕೂತೂ, ತನಗೆ ತಾನೇ ಮಾತಾಡಿಕೊಂಡು ಸಾಕಾಗಿ ಕುಂಡಜ್ಜ ಕೂತೇ ಇದ್ದ. ಹೊತ್ತು ನೆತ್ತಿಯಲ್ಲಿರುವಾಗಲೇ ಮಗಳು ತಿಪ್ಪವ್ವ ರಾತ್ರಿಗೆ ಒಲೆ ಹೊತ್ತಿಸಲು ಒಂದು ಕಡ್ಡಿಯ ಸಿವುಡಿಲ್ಲವೆಂದು ಹೋಗಿದ್ದವಳು, ಹೊತ್ತು ಪಡುವಲಿಗೆ ಬಿದ್ದು ಕಣ್ಣು ಮುಚ್ಚುವುದೇ ಸರಿ ಅನ್ನುತ್ತಿದ್ದರೂ ಬಂದಿರಲಿಲ್ಲ. ಮಾಮೂಲಂತೆ ಕುಂಡಜ್ಜ ಗುಡಿಸಲ ಹಿಂದುಮುಂದಿನ ಮಕ್ಕಳ ಕರೆದ. ಮಣ್ಣೊಳಗೆ ಆಡುತ್ತಿದ್ದವು ಒಂದರ ಮೇಲೊಂದು ಸವಾರಿಯಲ್ಲಿ ಬಂದು 'ಅಜ್ಜೋ, ಅಜ್ಜೋ' ಅಂದು ಕವುಚಿಕೊಂಡವು. ಒಂದು ಹೈದನಂತೂ ಮಂಡಿಯ ಮೇಲೆ ಬಿದ್ದು ಬಿಟ್ಟಿತ್ತಾದ್ದರಿಂದ ಅದರ ಮುಸುಡಿಗೇ ವ್ರಣದ ಶಿಲ್ಕು ಮೆತ್ತಿಕೊಂಡಿತು. ಅಷ್ಟು ಹೊತ್ತಿಗೆ ಮಧ್ಯಾಹ್ನದ ಸ್ಕೂಲು ಮುಗಿಸಿ ಮೊಮ್ಮಕ್ಕಳು ಸಿವಮಲ್ಲು, ಸಣ್ಣನಿಂಗುವೂ ಬಂದವು.

ಮುದುಕನಿಗೆ ರವಸ್ಟು ಬೇಜಾರು ಕಳೆದು, 'ಲೆಯ್ ಅಪ್ಪಯ್‌ಗೊಳಾ ಸುಮ್ ಸುಮ್ನೆ ಕೂತು ಪರ್ಸಂಗ ಊಕಬೇಕು. ಮಧ್ಯ ಸದ್ದುಗಿದ್ದು ಏನಾರ ಮಾಡಿದರೋ ನಾ ಮಾತ್ರ ಸುಮ್ಗಿರವುನಲ್ಲ' ಅಂದು ಆಜ್ಞೆ ಮಾಡಿದನು. ಕುಂಡಜ್ಜನ ಮಾತನ್ನೂ, ಆಜ್ಞೆಗಳನ್ನು ಕೇಳುತ್ತಿದ್ದವರು ಆ ಮಕ್ಕಳು ಮಾತ್ರವೇ ಆಗಿರುತ್ತಿದ್ದುದರಿಂದ ಅಜ್ಜನು ಅವರ ಮುಂದೆ ಜೋರಾಗಿಯೇ ಇರುತ್ತಿದ್ದ. ಯಾವಾಗ ಅಜ್ಜ ಪರ್ಸಂಗ ಹೇಳುತ್ತೇನೆಂದನೋ ಮಕ್ಕಳು ಸುತ್ತ ಒಂದಕ್ಕೊಂದು ತಬ್ಬಿ ಕೂತವು.

ಇದೇ ತರ ಕಾಡಿನೊಳಗೆ ದನಕರು ಮೇಯಿಸುತ್ತಿದ್ದಂಥ ವೇಳೆ. ಒಂದು ಹಸು ಗಬ್ಬ ಹಿಡಿದಿತ್ತು. ಈಯ್ದರೆ ಒಂದು ಬಿಂದಿಗೆ ಹಾಲು ಕರೆಯುವಂಥ ಹಸು. ಅದು ಮೇಯುತ್ತಿರುವಲ್ಲಿ ಹಿಂದಿನಿಂದ ಏಳುಮಟ್ಟಿನ ಪಟ್ಟೆ ಹುಲಿ ವಾಸನೆ ಹಿಡಿದು ಬಂತು. ನಾನು ಯಾವಾಗ ಅದಕಂಡೆನೋ ಹೋದವನೇ ಹುಲಿ ಮುಂದೆ ಕೈಯ್ಯಲ್ಲಿದ್ದ ಬಡಿಗೆಯನ್ನೂರಿ ನಿಂತುಕೊಂಡೆ. ಹುಲಿ ಬಾಯೊಳಗಿನ ಬಾಕಿನಂಥ ಹಲ್ಲು ತೋರಿಸುತ್ತ, ಕಣ್ಣುಗಳಿಂದ ಕೆಂಡ ಉದುರಿಸುತ್ತ ರೌದ್ರಾವತಾರ ಮಾಡಿ ನಿಂತಿತ್ತು. ಮುರ್‍ನಾಕು ಕ್ಷಣ ಹಾಗೆ ನಿಂತುಕೊಂಡಿದ್ದ ಮಿಕ ಇದ್ದಕ್ಕಿದ್ದಂತೆ ಬಾಲವನ್ನು ನೆಲಕ್ಕೆ ಬಡಿದು ಛಂಗನೆ ಹಾರಿತು. ಆಗಲೀಗ ನನಗೂ ಭೂಮಿಗೂ ಋಣ ತೀರಿತು ಅಂದುಕೊಂಡರೆ, ನನ್ನ ಕೈಯ್ಯಲ್ಲಿದ್ದ ಮಾರುದ್ದದ ಬಡಿಗೆ ನೋಡಿ ಹೆದರಿ ಹುಲಿಯೇ

ತಪ್ಪಿಸಿಕೊಂಡಿತ್ತು. ಯಾವಾಗ ಹಸುವನ್ನು ಹುಲಿಯ ಬಾಯಿಂದ ತಪ್ಪಿಸಿ ತಂದೆನೋ ಹಸುವಿನ ಯಜಮಾನರು 'ಕುಂಡಾ ಭೇಷ್' ಅಂದರು. ಹಾಗಂದು ಅವರದೊಂದು ಚಡ್ಡಿ ಇನಾಮು ಕೊಟ್ಟರು.......

ಕುಂಡಜ್ಜ ಈ ಸಾಹಸ ಸಂಗತಿಯ ವರ್ಣಿಸುತ್ತಿರಬೇಕಾದರೆ ಅವನ ಇಬ್ಬರು ಮೊಮ್ಮಕ್ಕಳ ಧ್ಯಾನ ಮಾತ್ರ ಗುಡಿಸಲ ಕಡೆಗೇ ಇತ್ತು. ಯಾಕೆಂದರೆ ತೋರವಾಗಿದ್ದ ಕಂದು ಬಣ್ಣದ ಊರ ನಾಯಿಯೊಂದು ಗುಡಿಸಿಲ ಸುತ್ತ ಗಸ್ತು ಹೊಡೆದು ಒಳಗೆ ನುಗ್ಗುವ ಸಂಚು ಮಾಡುತ್ತಿತ್ತು.

ಕುಂಡಜ್ಜನ ಗುಡಿಸಲೆಂದರೆ ಅದು ಅವನು ಲಗ್ನವಾದ ಕಾಲದಲ್ಲಿ ಕಟ್ಟಿದ ಗುಡಿಸಲಾಗಿತ್ತು. ಉದ್ದಕ್ಕೂ ಊರವರ ದನ ಕಾಯ್ದು ಕಾಡಿನಲ್ಲೇ ಕಾಲ ತಳ್ಳಿದ್ದನಾದ್ದರಿಂದ ಅವನಿಗೆ ಸ್ವಂತ ಕಟ್ಟಡದ ಮೇಲೆ ಕೈಯಾಡಿಸಲು, ರಿಪೇರಿ ಮಾಡಲು ಸಮಯವೇ ಸಿಕ್ಕಿರಲಿಲ್ಲ. ಆದ ಕಾರಣ ಒಂದಂಕಣಕ್ಕೆ ಕಟ್ಟಿದ್ದ ಗುಡಿಸಲ ನಾಲ್ಕು ಗೋಡೆಯಲ್ಲಿ ಒಂದು ಪಾರ್ಶ್ವವು ಬಿದ್ದು ಅಲ್ಲಿಗೆ ತಡಿಕೆ, ಮಟ್ಟಾಳೆ, ಗೋಣಿಚೀಲ ಇತ್ಯಾದಿಗಳನ್ನು ಇಟ್ಟು ಮುಚ್ಚಲಾಗಿತ್ತು. ಹೀಗೆ ಗೋಡೆ ಬಿದ್ದು ತೇಪೆ ಹಾಕಿದ್ದ ಕಡೆ ನಾಯಿ ಕೂತು ಅಲ್ಲಿದ್ದ ಕಂಡಿಯನ್ನೇ ಗುರುಗಾಯಿಸಿ ನೋಡುತ್ತಾ ಇದ್ದಕ್ಕಿದ್ದಂತೆಯೇ ನೆಗೆದು ಒಳಸೇರಿತು.

ಪರ್ಸಂಗ ಕೇಳುತ್ತಿದ್ದ ಸಿವಮಲ್ಲು ಎದ್ದು ಬಂದವನೇ ಕಂಡಿಯಲ್ಲಿ ಕಣ್ಣಿಟ್ಟು ಸಣ್ಣಿಂಗನನ್ನು ಕರೆದ. ಇಬ್ಬರೂ ತಿರುಗಿ ಕಂಡಿಯಲ್ಲಿ ಕಣ್ಣಿಟ್ಟು ನೋಡಿದರು. ಒಳಗಣ ಅಡ್ಡಗೋಡೆಯ ಇತ್ತ ಕಡೆ ಎತ್ತೊಲೆ. ಅದರ ಮೇಲೆ ಮಡಿಕೆ. ನಾಯಿ ಮಡಕೆಯ ಮುಚ್ಚಳ ಉದುರಿಸಿ ರಾಗಿ ಮುದ್ದೆಯನ್ನು ಕೆಡವಿ ಬಾಯಾಡಿಸುತ್ತಿತ್ತು. ಸಣ್ಣನಿಂಗು ಅಲ್ಲೇ ಇದ್ದ ಬಿದಿರ ದೊಣ್ಣೆ ತೆಗೆದು ಕಂಡಿಗೆ ತೂರಿಸಿ ನಾಯಿ ಕುಂಡಿಗೆ ತಿವಿದ. ರಾಗಿ ಮುದ್ದೆ ಸಿಕ್ಕಿದ ಸಂಭ್ರಮದಲ್ಲಿದ್ದ ನಾಯಿ ಕೋಲು ತೋರಿಸುತ್ತಿದ್ದ ಹೈದನ ಕಂಡು ಹಲ್ಲುಗಿಂಜಿ ಕಣ್ಣಲ್ಲೇ ಗುರ್ರೆಂದಿತು. ಹುಡುಗರು ಗಳುವನ್ನು ಇತ್ತ ಆಡಿಸಿದರೆ, ಮುದ್ದೆ ಕಚ್ಚಿದ ನಾಯಿ ಅತ್ತ ಹಾರುವುದು, ಅತ್ತ ಆಡಿಸಿದರೆ ಇತ್ತ ನೆಗೆಯುವುದು ಮಾಡುತ್ತ ಕೊನೆಗೆ ಇದ್ದ ಇನ್ನೊಂದು ಮುದ್ದೆಯ ಕಚ್ಚಿ ಆ ಕಡೆ ಗೋಡೆಯ ಗವಾಕ್ಷದಿಂದ ನೆಗೆದು ಹೊರಬಿದ್ದಿತು. ಮುದ್ದೆ ಕಚ್ಚಿದ ನಾಯಿ ಮುಂದು ಮುಂದು, ದೊಣ್ಣೆ ಹಿಡಿದ ಹೈದರು ಹಿಂದು ಹಿಂದು. ಅಷ್ಟು ದೂರ ಬಂದ ಮೇಲೆ ನಾಯಿ ಊರ ದಾರಿ ಹಿಡಿದು ಅಲ್ಲಿ ನಡುವಿನೆತ್ತರಕ್ಕಿದ್ದ ಬೇಲಿ ನೆಗೆದು ಆಚೆ ಓಡಿತು. ಗಳು ಹಿಡಿದ ಸಣ್ಣನಿಂಗು 'ನೀನು ಪಾತಾಳ ಸೇರದರ ತಾನೆ ಬುಟ್ಟನ' ಅಂದವನು ಓಡಿ ಬಂದ ಬಿರುಸಿನಲ್ಲಿಯೇ ಮುಳ್ಳು ಬೇಲಿ ಹಾರಿದ. ಹಾರಿದವನು ಊರೊಳಗಿನ ದಾರಿಗೆ ಬಿದ್ದನಾದರೂ, ಹಾದಿಯ ಮುಳ್ಳೊಂದು ಕಾಲಿಗೆ ಬಲವಾಗಿ ಎಟ್ಟಿಕೊಂಡಿತು. ಹಿಂದಿನಿಂದ ಬಂದ ಸಿವಮಲ್ಲು ಮುಳ್ಳು ಚುಚ್ಚಿ ಒದ್ದಾಡುತ್ತಿದ್ದವನನ್ನು ದಾರಿಯ ಬದಿಗೆ ಕುಂಡಿರಿಸಿ ಕಾಲ ಮುಳ್ಳು ಬಿಡಿಸತೊಡಗಿದ. ಸಣ್ಣನಿಂಗು ನೋವಿಗೆ 'ಅವ್ವೆ, ಅವ್ವೆ, ಸತ್ನವ್ವೆ' ಅಂದು ಮಿಳ್ಳಾಡತೊಡಗಿದ.

ಇತ್ತ ಹಟ್ಟಿ ಮುಟ್ಟಿದ ತಿಪ್ಪವ್ವ ತಲೆಯ ಮೇಲಿನ ಸೌದೆ ಹೊರೆ ಇಳಿಸಿ 'ವುಸ್ಸೋ' ಎಂದಳು. ಪರ್ಸಂಗ ಹೇಳುತ್ತಿದ್ದ ಮುದುಕನನ್ನೂ, ಕೇಳುತ್ತಿದ್ದ ಹೈಕಳನ್ನೂ ಕಂಡು 'ಅಯ್ ಇವುಕ್ಕ ಏನಾರ ಕೇಮಿದ್ರಲ್ವ ಕೂತ್ಗಂಡಿನ್ನೇನ್ ಮಾಡಿವು' ಅಂದು ನಡುವಿನ ದಾರದ ಎಸಳಲ್ಲಿ ಗುಡಿಸಿಲ ಕದದ ಬೀಗ ಬಿಡಿಸಿದಳು. ತಿಪ್ಪವ್ವ ಎಲ್ಲಿ ಹೋದರೂ ಬಾಕಲಿಗೆ ಬೀಗ ಹಾಕಿಕೊಂಡೇ ಹೋಗುತ್ತಿದ್ದಳು. ಮಕ್ಕಳು ಹ್ಯಾಗೂ ಇಸ್ಕೂಲು ಮುಗಿಸಿಕೊಂಡು ಹೊತ್ತು ತಿರುಗಿದ ಮೇಲೆ ಬರುತ್ತಿದ್ದವು. ಕುಂಡಜ್ಜನಿಗೆ ಕಣ್ಣು ಕಿವಿ ಮಂದವಾಗಿದ್ದುದರಿಂದ ಅವನು ಗುಡಿಸಿಲ ಮುಂದೆ ಇದ್ದರೂ ಪ್ರಯೋಜನವಿರಲಿಲ್ಲ.

೩

ಈ ಹಿಂದೆಯೇ ಹೇಳಿದಂತೆ ಕುಂಡಯ್ಯ ಕಾಡಮ್ಮನನ್ನು ಲಗ್ನವಾಗುವ ಕಾಲಕ್ಕೆ ಅವನ ವಯಸ್ಸು ನಲವತ್ತು ಮುಟ್ಟಿಹೋಗಿತ್ತು. ಇಷ್ಟಾಗಿ ಲಗ್ನವಾದ ಮೇಲೆ ಕುಂಡಯ್ಯನಿಗೆ ಹುಟ್ಟಿದ ಶಿಶುಗಳೆಲ್ಲ ವಾಂತಿ ಬೇಧಿಯಾಗಿ ತೀರಿಕೊಳ್ಳುತ್ತಿದ್ದವು. ಆಗ ಆರನೆಯ ಶಿಶುವನ್ನು ಹಾದಿಬೀದಿಯವರು ಅಂದಂತೆ ತಿಪ್ಪೆಗೆ ಇಟ್ಟು ಅಲ್ಲಿಂದ ಎತ್ತಿಕೊಂಡರು. ಇದು ತಮಗೆ ಹುಟ್ಟಿದ್ದಲ್ಲ, ತಿಪ್ಪೆಯಲ್ಲಿ ಸಿಕ್ಕಿದ್ದು ಎಂದುಕೊಂಡದ್ದರಿಂದಲೋ ಆಕಸ್ಮಾತ್ತಾಗಿಯೋ ಆ ಮಗುವು ಬದುಕಿಕೊಂಡಿತು. ಹೀಗಾಗಿ ತಿಪ್ಪವ್ವನೆಂದೇ ಕರೆದ ಶಿಶುವು ಬೆಳೆದು ಆಡುತ್ತಿದ್ದ ನಡುವಣ ಸಮಯದಲ್ಲಿಯೇ, ಕಾಡಮ್ಮನಿಗೆ ಮತ್ತೆರಡು ಮಕ್ಕಳಾಗಿ ಅವುಗಳೊಡನೆ ಅವಳೂ ರೇಷ್ಮೆ ಕಾಯಿಲೆಗೆ ತುತ್ತಾಗಿ ತೀರಿಕೊಂಡಳು.

ಆ ಮುಂದೆ ತಿಪ್ಪಮ್ಮ ಒಬ್ಬಳೇ ತಂದೆಯೊಡನೆ ಬೆಳೆದು ದೊಡ್ಡದಾದ ದಿನಗಳಲ್ಲಿ ಕುಂಡಜ್ಜ ಅದೇ ಕೇರಿಯ ತಮ್ಮಣ್ಣನಿಗೆ ಮಗಳನ್ನು ಕೊಟ್ಟು ಲಗ್ನ ಮಾಡಿದ. ತಮ್ಮಣ್ಣನೂ ಊರವರ ತ್ವಾಟ ತುಡಿಕೆ, ಮನೆಗಿನೆಗಳಲ್ಲಿ ಕೂಲಿ ಮಾಡಿಕೊಂಡಿದ್ದ.

ಹೀಗೊಂದು ದಿನ ಊರೊಳಗೆ ವ್ಯಾಪಾರಗಾರರಾಗಿದ್ದ ಲಕ್ಷ್ಮೀಪತಿ ಶೆಟ್ಟರು ತಮ್ಮ ಹಳೆಯ ಮನೆಯನ್ನು ಕೆಡುವಿಸಿ ಆ ಜಾಗದಲ್ಲಿ ಕಾಲಕ್ಕೆ ತಕ್ಕಂತ ಹೊಸ ನಮೂನೆಯಾಗಿ ಒಂದು ಮಹಡಿ ಮನೆ ಕಟ್ಟಿಸಬೇಕೆಂದು ಹೊರಟರು. ತಳಪಾಯ

ತೋಡುವ ಕೆಲಸ ನಡೆದು, ಅದು ಐದು ಅಡಿ ಆರು ಅಡಿಯಷ್ಟಾದರೂ ಕೆಳಗೆ ಹೋಗಿತ್ತು. ಶೆಟ್ಟರು ಬಿಸಿಲಿಗೆ ಛತ್ರಿ ಹಿಡಿದು ಆಳುಗಳ ಬೆನ್ನ ಮೇಲೆಯೇ ನಿಂತು ಕೆಲಸ ಮಾಡಿಸುತ್ತಿದ್ದರು. ಹೆಚ್ಚೆಚ್ಚು ಕೆಲಸ ಮಾಡಿದ ಆಳುಗಳಿಗೆಲ್ಲ ಹಳೆಯ ಚಡ್ಡಿ ಷರ್ಟು ಪಂಚೆ ಇನಾಮಾಗಿ ಕೊಡಲಾಗುವುದು ಎಂದು ಉತ್ಸಾಹ ತುಂಬುತ್ತಿದ್ದರು. ತಳಪಾಯ ಇನ್ನೂ ಒಂದು ಅಡಿ ಆಳಕ್ಕೆ ಇಳಿಯುವಾಗ್ಗೆ ಅಲ್ಲೊಂದು ತೂಕದ ಕಲ್ಲು ಸಿಕ್ಕಿತು. ಒಬ್ಬ ಆಳಿದ್ದು ಅದನ್ನು ಒಡೆದು ಮೂರು ಚೂರು ಮಾಡಿ ಮೇಲೆತ್ತಿ ಬಿಸಾಡುವುದು ಅಂದರೆ, ಶೆಟ್ಟರು ಕೆಲಸ ತಡವಾಗುವುದೆಂದು ಬಗೆದು, 'ಲೇ ಹೈಕ್ಳಾ, ಯಾವನು ಆ ಕಲ್ನ ಒಬ್ನೆ ತೂಕಿ ಮ್ಯಾಲೆ ಬಿಸಾಕಿನೊ ಅವುನ್ಗಿವತ್ತು ಉಣ್ಣಕ್ಕೆ ಒಂದು ರಾಗಿಮುದ್ದೆ, ಹಿಡಿಯನ್ನ ಜಾಸ್ತಿ' ಅಂದರು. ಅತ್ತ ಎಲ್ಲೋ ಇದ್ದ ತಮ್ಮಯ್ಯ ಕೈಯ್ಯ ಸಲಿಕೆಯ ಬಿಸಾಡಿ ಬಂದ. ಎರಡೂ ಕೈಹಾಕಿ ಕಲ್ಲುಗುಂಡ ಎತ್ತಹೋದರೆ ಕೆಳಗೆ ಸೇರಿಕೊಂಡಿದ್ದ ಯಮಚೌಳು ಬಾಲದ ಕೊಂಡಿಯ ವಿಷವೆಲ್ಲ ಮೈಗೆ ಏರುವಂತೆ ಅಂಗೈಯನ್ನು ಕಚ್ಚಿತು. ಚೌಳು ಕಚ್ಚಿದ್ದೇ ತಮ್ಮಣ್ಣ ಎತ್ತಿದ್ದ ಕಲ್ಲನ್ನು ಬಿಟ್ಟು ಅದು ಕಾಲ ಮೇಲೆ ಬಿದ್ದು ಪಾದಗಳು ಜಜ್ಜಿ ಹೋದವು.

ಕುಂಡಯ್ಯ ಅಳಿಯನನ್ನು ಹೊತ್ತುಕೊಂಡು ಮಂತ್ರ ಹಾಕುವವರ ಮನೆ, ತೀರ್ಥಕೊಡುವ ಗುಡಿಗುಂಡಾರಗಳಿಗೆಲ್ಲ ತಿರುಗಿದ. ಆದರೂ ತಮ್ಮಣ್ಣನ ಮೈ ನೀಲಿಯಾಗಿ ಒಂದು ದಿನವೆಲ್ಲ ಉರಿಹತ್ತಿ ವದ್ದಾಡಿ ಕೊನೆಗೆ ಮರಗಟ್ಟಿಹೋದ. ಗಂಡ ತೀರಿಕೊಂಡಂದು ತಿಪ್ಪವ್ವ ಅಳಲು ತೊಡಗಿ, ಹಾಗೆಯೇ ಕಾಲ ದಿನನಿತ್ಯ ನೆತ್ತಿಯ ಮೇಲೆ ಹಾಯುತ್ತ, ಅವಳ ಮುಖ ಮೈ ಮತ್ತು ಮಂಡೆ ಕೂದಲೆಲ್ಲ ಬಣ್ಣ ಕಳೆದುಕೊಂಡವು.

ಅಳಿಯ ಸತ್ತದ್ದಕ್ಕೆ ಕುಂಡಜ್ಜನಾದರೋ, 'ಯಲಾ ನಮ್ಮ ಅಳಿಯ ದೇವ್ರು ಸತ್ತಿಲ್ಲ. ಇದೇ ಮೈಸೂರು ಸೀಮೆಯನಾಳುವಂಥ ಮಹಾರಾಜರಿಗೊಬ್ಬಳು ರೂಪುರೇಖ ಶುದ್ಧಸಿಂಗಾರವಾಗಿರುವಂಥ ಮಗಳಿರುವಳು. ಆಯಮ್ಮ ವಾಸಮಾಡುವಂಥ ಅಂತಃಪುರದೊಳಗೆ ಒಂದು ಕೊಳವುಂಟು. ಆ ಕೊಳದಲ್ಲಿ ಪಚ್ಚೆ ತೊಟ್ಟು, ರತ್ನದ ಎಲೆ, ಮುತ್ತಿನದಳ ಬಿಡುವಂಥ ಹೂವಿನ ಗಿಡ ಇರಬೇಕು ಅಂತ ಭ್ರಮಿಸಿರುವಳು. ಮಹಾರಾಜರಾದರೋ ಇರುವಂಥ ಒಬ್ಬಳೇ ಮಗಳ ಮಾತ ನೆರವೇರಿಸಬೇಕಂತ, ಆ ಹೂವಿನಗಿಡ ತರುವ ಶೂರಾದಿ ಶೂರನು ಅಳಿಯ ಆಗುವನು, ರಾಜ್ಯವಾಳುವನು ಅಂತ ಡಂಗೂರ ಹೊಡೆಸಿರುವರು. ನಮ್ಮ ಅಳಿಯ ತಮ್ಮಣ್ಣ ಬೇಡಬೇಡವೆಂದರೂ ಕೇಳದೆ ಅದನ್ನು ತರಲೋಗಿರುವನು, ಇನ್ನೇನು ವಾಪಸು ಬರುವ, ಬರುವ' ಎಂದು ಪರ್ಸಂಗ ಹೇಳುತ್ತಿದ್ದ. ಇದ ಕೇಳಿದ ಜನ ನಕ್ಕು ಕುಂಡಜ್ಜನಿಗೆ ಕಣ್ಣು ಕಿವಿಯೊಂದಿಗೆ ತಲೆಯೂ ಐಬಾಯಿತೆಂದರು. ಒಟ್ಟಿನಲ್ಲಿ ತಮ್ಮಣ್ಣ ಸಾಯುವ ಹೊತ್ತಿಗೆ ತಿಪ್ಪವ್ವನಿಗೆ ಎರಡು ಗಂಡು ಮಕ್ಕಳಿದ್ದವು.

೪

ತಿಪ್ಪವ್ವ ಸೌದೆ ಹೊರೆಯನ್ನು ಹಟ್ಟಿ ಮುಂದೆ ಹಾಕಿ ಬಾಗಿಲ ಬೀಗ ಕಳೆದು ಯಾವಾಗ ಒಳಗಾದಳೋ, ಒಳಗಿಂದ ಅಳುವಿನ ರಾಗ ಈಚೆ ಬಂತು. 'ಅಯ್ಯೋ ಸಿವುನೆ ವತಾರೆದ್ದು ಇದ್ದ ಬದ್ದ ರಾಗಿಕಾಳೆಲ್ಲ ಬೀಸಿ ನಾಲ್ಕು ಮುದ್ದೆ ಕಟ್ಟಿದ್ನಲ್ಲೋ, ಯಾವ ಮಾಯದಲ್ಲಿ ಬಂದು ಎತ್ಕಂಡೋಯ್ತೋ ಬಗವಂತಾ' ಅಂದು ರಾಗಪಾಡತೊಡಗಿದಳು. ಅವಳ ದುಃಖವು ಕ್ರಮೇಣ ಸಿಟ್ಟಾಗಿ ಪರಿವರ್ತಿತವಾಗಲು ಇದ್ದಕ್ಕಿದ್ದಂತೆ ಕೈಯಲ್ಲಿ ಹಿಟ್ಟು ತಿರಿಯುವ ಕೋಲು ಹಿಡಿದು ಕೆಂಡಗಣ್ಣಾಗಿ ಬಂದು, ಗುಡಿಸಿಲಿಂದ ಈ ಕಡೆಗೆ ಹೊಟ್ಟೆಯಡಿ ಮಂಡೆ ತೂರಿಸಿ ಮಲಗಿದ್ದ ನಾಯಿಯ ಮುಸುಡಿಗೆ ಬಲವಾಗಿ ಇಡುಮಿದಳು. ಛಂಗನೆದ್ದ ನಾಯಿ ಆಕಾಶಭೂಮಿಯನ್ನು ಒಂದು ಮಾಡಿ ಗಳ್ಳಾಕುತ್ತ ದಿಕ್ಕು ತಪ್ಪಿ ಓಡಿತು. ವಾಸ್ತವವಾಗಿ ಗುಡಿಸಿಲಿಂದ ಮುದ್ದೆ ಕಚ್ಚಿಕೊಂಡು ಹೋದ ನಾಯಿ ಅದಾಗಿರಲಿಲ್ಲ.

ಇತ್ತ ನಾಯಿ ಓಡಿಸಿಕೊಂಡು ಬೇಲಿಯೊಳಗೆ ಬಿದ್ದು ಬಂದು ಅಜ್ಜನ ಮುಂದೆ ಪರ್ಸಂಗ ಕೇಳುತ್ತಿದ್ದ ಸಿವಮಲ್ಲು 'ಅವ್ವೋ ಅದಲ್ಲಕನವ್ವ, ಅದ್ಯಾವುದೋ ಊರ್‌ನಾಯಿ ಹಿಟ್ನ ಮುದ್ದ ಕಚ್ಕಂಡು ವೋಯ್ತು' ಅಂದ. ಇನ್ನೂ ಸಿಟ್ಟಿನ ಮೇಲಿದ್ದ ತಿಪ್ಪವ್ವ 'ಮುಚ್ಚಲೇ ಬಾಯಿ' ಅಂದು ಅಲ್ಲೇ ಬಿದ್ದು ನೆಲ ಸಾರಿಸಿ, ತನ್ನ ಹುಟ್ಟನ್ನು ಹಳಿದು ಕೊಳ್ಳತೊಡಗಿದಳು. 'ವೋದ ಜಲುಮದಲಿ ನಾನು ಯಾವ್ ಪಾಪ ಮಾಡಿದ್ನವೋ, ಅನ್ನ ಕೇಳ್ದವುರ್ಗೆಲ್ಲ ಸುಣ್ಣ ಕೊಟ್ಟಿದ್ನ ತಾಯಿ, ಗಂಡನ್ನ ತಿಂದ್ಕಂಡು ಮುಂಡ್ಯಾದನಲ್ಲೋ, ಈ ಮಕ್ಕಳುನೂ ಮುದುಕುನ್ನು ಹೆಂಗವೋ ನಾ ಬಾಳುಸ್ಲಿ' ಅನ್ನುವ ಮಾತು ಅವಳ ಅಳುವಿನ ಮಧ್ಯೆ ಕೇಳಿಸಿ ಬಂದವು.

ಸಿವಮಲ್ಲು ಇದ್ದವನು ಅಜ್ಜನ ಕಿವಿಗೆ ಬಾಯಿಕೊಟ್ಟು ಜೋರಾಗಿ, 'ಅಜ್ಜೋ ಅಜ್ಜಾ ಅದೂ ಊರ ನಾಯಿ ಅಟ್ಟಿವಳಗ ನುಗ್ಗಿ ರಾಗಿಮುದ್ದ ಎತ್ಕಂಡು ವಂಟೋಯ್ತು. ಅದ್ಕ ಅವ್ವ ಅಳ್ತಾವ್ಳೆ' ಅಂದ.

ಮುದುಕ ಮಗಳು ಅಳುತ್ತಿದ್ದ ಕಡೆಗೆ ಅಂದಾಜು ಮಾಡಿ ತಲೆ ತಿರುಗಿಸಿ, 'ಕೂಸು ತಿಪ್ಪಿ ಅಳದ್ಯಾಕವ್ವ, ಆ ನಾಯೂ ಒಂದೊತ್ತು ತಿಂದ್ಕಳ್ಳಿ ಬುಡು' ಅಂದ. ಕುಂಡಜ್ಜನ ದಿವ್ಯ ನಿರ್ಲಕ್ಷ್ಯದ ಉತ್ತರದಿಂದಾಗಿ ತಿಪ್ಪವ್ವನಿಗೆ ಕತ್ತು ಕತ್ತರಿಸಿ

ಬಿಸಾಡಿದಂತಾಯಿತು. ಅವಳಿಗೆ ನಾಯಿ, ಹಿಟ್ಟಿನ ಮುದ್ದೆಯನ್ನು ಅಪಹರಿಸಿತು ಎಂದು ತಿಳಿದಾಗ ಆದ ದುಃಖಕ್ಕಿಂತಲೂ ಅಪ್ಪನ ನಿರ್ಲಕ್ಷ್ಯದ ಉತ್ತರ ಹೆಚ್ಚು ದುಃಖವನ್ನುತಂದಿತು. ಅಜ್ಜ ತಪ್ಪಾಯಿತೆಂತಲೋ, ಕಣ್ಣು ಕಾಣದ್ದರಿಂದ ಹಾಗಾಯಿತೆಂತಲೋ, ಇಲ್ಲ ಮೊಮ್ಮಕ್ಕಳು ಗುಡಿಸಲ ಕಡೆ ಸರಿಯಾಗಿ ನೋಡಿಕೊಳ್ಳಲಿಲ್ಲವೆಂದು ಅವರನ್ನು ದಂಡಿಸಿಯೋ ತನ್ನ ಪ್ರತಿಕ್ರಿಯೆ ವ್ಯಕ್ತಪಡಿಸಬಹುದೆಂದು ಬಗೆದಿದ್ದ ತಿಪ್ಪವ್ವನಿಗೆ ಅಗಾಧ ನಿರಾಶೆಯಾಗಿ ತಾನು ಆ ಘಳಿಗೆಯಲ್ಲಿ ಸಾಯುವುದು ಶ್ರೇಯಸ್ಕರವೆಂದು ಕೊಂಡಳು. ಅದಕ್ಕಾಗಿ 'ಈ ಕಣ್ಣಾಗಣದ ಮುದುಕನ್ನೂ, ನನ್ನೂ ಯಾವತ್ತಪ್ಪ ಪರಮಾತ್ಮ ನಿನ್ನ ಪಾದಕ್ಕೆ ಕರ್ಕಂಡಿಯೇ' ಅಂದು ರಾಗ ಎಳೆದಳು.

ಕ್ಷಣ ಹೊತ್ತು ಯಾವುದೋ ಧ್ಯಾನದಲ್ಲಿದ್ದವನಂತೆ ಇದ್ದ ಕುಂಡಜ್ಜ, 'ಮಗಳೇ ಸವುದೆಪುಳ್ಳೆ ಆಯ್ಕಂಡು ಬಂದಿದ್ದಯಲ್ಲ ಊರಾಕೋಗಿ ಅದ ಮಾರ್ಕಂಡು ಬಾ ಮತ್ತೆ ಯಾರಾದರೂ ತಕ್ಕವಲ್ರ ಒಂದು ರೂಪಾಯಿಗ, ಅದಕ್ಕೊಂದು ಬಳ್ಳರಾಗಿ ಬರದ?" ಅನ್ನುವ ಒಂದು ಸಲಹೆ ಕೊಟ್ಟ.

ಒಂದೇ ಉಸುರಿನಲ್ಲಿ ತಿಪ್ಪವ್ವ 'ಬತ್ತದ ಬತ್ತದ ಬಳ್ಳನೂ ಬತ್ತದ, ಕೊಳಗ ರಾಗಿನೂ ಬತ್ತದ. ಸೌದೆ ಮಾರಿ ರಾಗಿ ತಂದ್ರ ವಲೆ ಉರಿಸಕೇನ್ಮಾಡೀಯೆ ಕೈಕಾಲು ಮುರುದಾಕೀಯಾ' ಅಂದು ದಿಮ್ಮಗೆ ಆಕಾಶ ನೋಡುತ್ತ ಕೂತಳು.

ಇಷ್ಟಾದ ಎಷ್ಟೋ ಹೊತ್ತಿನ ಮೇಲೆ ಕೇರಿಯ ಕಡೆಗೆ ಸೂರನಾಯಕರು ಬಂದರು. ಅರವತ್ತು ವಯಸ್ಸು ದಾಟಿದ್ದ ನಾಯಕರು ಊರ ಮುಖಂಡರಲ್ಲಿ ಒಬ್ಬರು. ಇಪ್ಪತ್ತೂರನೆಯ ವಯಸ್ಸಿನಲ್ಲಿ ಅವರಿಗೆ ವಿವಾಹವಾಗಿ ಈಗ ಪ್ರಾಯಸ್ಥ ಮಕ್ಕಳು ಮೊಮ್ಮಕ್ಕಳು ಇರುವರು. ಇಷ್ಟಾಗಿ ಅವರು ವಿವಾಹ ಪೂರ್ವದಲ್ಲಿ ರವಷ್ಟು ಚೇಷ್ಟೆಯ ಮೇಲೆ ಇದ್ದದ್ದರಿಂದ ಬೀದಿಯ ಆ ತುದಿಗೆ ಇನ್ನೊಂದು ಸಂಬಂಧವೂ ಇದ್ದು ಆ ಸಂಬಂಧಕ್ಕೂ ಮಕ್ಕಳು ಮರಿಗಳು ಇದ್ದವು. ಇದರಿಂದ ನಾಯಕರ ರಕ್ತ ಸಂಬಂಧ, ಬಂಧು ಬಳಗ, ದೊಡ್ಡದಿದ್ದು ಅವರಿಗೆ ಯಾವತ್ತು ಮೈಯ್ಯ ಒಂದು ಕೂದಲು ಚುಳ್ಳೆಂದರೂ, ಹೆಂಡತಿಯರು ಮಕ್ಕಳು ಮೊಮ್ಮಕ್ಕಳ ಆರೋಗ್ಯ ತಪ್ಪಿಬಿಡುತ್ತಿತ್ತು. ಈ ಕಾರಣ ವಯಸ್ಸು ಅರುವತ್ತಾಗಿದ್ದರೂ ಅವರ ಅಂಗೋಪಾಂಗಗಳು ಆರೋಗ್ಯದಿಂದ ಇದ್ದವು.

ಊರಾಚೆ ಹೇರಳವಾಗಿದ್ದ ಅವರ ಭೂಮಿಕಾಣಿಯಲ್ಲಿ ರಾಗಿ, ಭತ್ತ, ಕಬ್ಬು ಇತ್ಯಾದಿ ಬೆಳೆ ಬೆಳೆಯುವುದಿದ್ದು ಅಲ್ಲಿ ವರ್ಷವೆಲ್ಲ ಹತ್ತಾರು ಆಳುಕಾಳು ಕೂಲಿಯ ಮೇಲಿರುತ್ತಿತ್ತು. ಅವತ್ತೂ ಆಳು ಕರೆಯಲು ಬೆಳ್ಳಿ ಕಟ್ಟಿನ ಕೋಲು ಊರಿ ನಿಧಾನವಾಗಿ ಕೇರಿಯ ಕಡೆ ಬಂದ ಸೂರನಾಯಕರು ಬೇವಿನ ಮರದಡಿಯಲ್ಲಿ ನಿಂತು 'ಯಾರ್‍ರಲಾ ಅದು ನಾಳೆ ತ್ವಾಟದ ಕೂಲಿಗೆ ಬರವುರು' ಅಂದು ಕರೆದರು.

ನಾಯಕರು ಕೂಲಿಗೆಂದು ಬಾಯಿಬಿಟ್ಟು ಕರೆಯುವುದರ ಮೊದಲೇ ಕೇರಿಯ ಹೆಣ್ಣು ಗಂಡೆಲ್ಲ ಗುಂಪಾಗಿ, ಅಲ್ಲಿ ತಿಪ್ಪವ್ವನೂ ಇದ್ದಳು. ಗಂಡಾಳಿಗೆ ಮೂರರಂತೆ ಹೆಣ್ಣಾಳಿಗೆ ಎರಡರಂತೆ ಮುಂಗಡ ಕೂಲಿ ಬಟವಾಡೆ ಆಯಿತು. ತಿಪ್ಪವ್ವ ದುಡ್ಡನ್ನು ಬಲಗೈಲಿ ಹಿಡಿದು ಹಾಗೆಯೇ ಲಕ್ಷ್ಮೀಪತಿ ಶೆಟ್ಟರ ಅಂಗಡಿಗೆ ಬಂದಳು.

ಇತ್ತ ಕೂಲಿ ಬಟವಾಡೆ ಮಾಡಿದ ನಾಯಕರು, ಅದೇ ಬೀದಿಯನ್ನು ಕೋಲೂರಿ ನಿಧಾನವಾಗಿ ದಾಟಿ ಊರಾಚೆಗಿದ್ದ ತಮ್ಮ ಗದ್ದೆಗೆ ಹೋಗುವುದು ರೂಢಿ. ಅವರು ಕೇರಿಯ ತುದಿಗೆ ಬಂದಾಗ ಕುಂಡಜ್ಜ ರೂಢಿಯಂತೆಯಾ ಮಕ್ಕಳ ಮಧ್ಯೆ ಕೂತಿದ್ದ. ನಾಯಕರೂ ಮಾಮೂಲಾಗಿ, 'ಏನಲೇ ಕುಂಡಾ ಯಾಗಿದ್ದೀಯೆ' ಅಂದರು. ಮುದುಕ ಆ ದನಿ ಊರ ಸಾಹುಕಾರರದೆಂಬುದನ್ನು ಗುರುತು ಮಾಡಿ 'ದಣಿಗೊಳೆ' ಅಂದ. ನಾಯಕರು 'ಏನ್ಸಮಾಚಾರ, ಪರ್ಸಂಗ ಏನಾರು ಉಂಟೋ' ಅಂದು ಗೇಲಿ ಮಾಡಿ ನಕ್ಕರು.

ಕುಂಡಜ್ಜ ಹೇಳಿದ: 'ದಣಿ ನಿನ್ನೆ ರಾತ್ರಿ ನಾನು ಮಲಗಿದ್ದಾಗ ರವಷ್ಟು ನಿದ್ದೆ ಬಂದಿತ್ತು. ಆಗೇನಾಯ್ತು ಮೀಸೆಮ್ಯಾಲೆ ಕೈಮಡಗಿ ಕ್ವಾಣನ ಮೇಲೆ ಬಂದ ರೂಪೊಂದು ಯಲೆ ಮುದುಕಾ ಅಂತು. ನಾನು ಆ ಸ್ವಾಮಿನ ಕಂಡು ಕೈ ಮುಗುದು ಆಹಾ ನನಭಾಗದ ಪರಮಾತ್ಮ ನಿನ್ನ ಲೋಕಕ್ಕೆ ಕರಕಂಡೋಗಕೆ ಈಗಲಾದರು ಬಂದ್ಯಲ್ಲಪ್ಪ ಅಂತಂದೆ. ಆಗ ಸ್ವಾಮಿ ಮೀಸೆ ಕುಣಿಯಂಗೆ ನಕ್ಕು ಅಯ್ಯಾ ಮುದುಕಾ ಈಗ ನೀನಿರದು ಇನ್ಯಾರ ಲೋಕ್ದಲ್ಲಿ ಅಂತು. ಆಮೇಲೆ ನಾನಿದ್ದು ಭಗವಂತಾ ರವಷ್ಟು ಕಣ್ಣುಬುಟ್ಟು ನೋಡು ಅಂತ ಅಡ್ಡಬಿದ್ದೆ. ದೇವ್ರು ಇದ್ದು ಮುದುಕಾ ಇರ್ಲಿ ಇರ್ಲಿ, ನಿಂಗೆ ಇಲ್ಲಿ ಒಬ್ನೇ ಇದ್ದು ಇದ್ದು ಬೇಜಾರು ಬಂದದೆ, ಇಗೋ ನಿನಕೂಡೆ ಕುಂಡಣ್ಣನ್ನೂ ಕಿವುಡಯ್ಯನ್ನೂ, ಗೂನಪ್ಪನ್ನೂ ಬಿಟ್ಟಿವ್ನಿ. ಬೇಕಾದರೆ ಹುಚ್ಚಪ್ಪನ್ನೂ ಸೇರಿಸ್ಕೊ. ಇವರ ಕೂಡೆಲ್ಲ ಆಡ್ಕಂತ ಬೇಜಾರು ಕಳಕಂತ ಇರು ಅಂತ ಕ್ವಾಣನ್ನ ತಿರುಗಿಸೇ ಬಿಡದಾ ದಣಿ......' ಅಂದು ಕುಂಡಜ್ಜ ಕನಸಿನ ಪರ್ಸಂಗ ಹೇಳಿದ.

ಕುಂಡಜ್ಜನ ಮಾತು ಕೇಳಿದ ನಾಯಕರು ಅಷ್ಟು ಹೊತ್ತು ತಡೆದಿದ್ದ ನಗುವನ್ನು ಬಿಟ್ಟೇ ಬಿಟ್ಟರು. ಮೈ ಕುಲುಕುವಂತೆ ನಕ್ಕು ಕೋಲೂರುತ್ತ ತಮ್ಮ ತೋಟದ ಮುಖವಾದರು.

೫

ಅಂಗಡಿಯಿಂದ ಬಳ್ಳ ರಾಗಿ ತಂದ ತಿಪ್ಪವ್ವ ಕಾಸು ಎಟುಕದೆ ಸೀಮೆಎಣ್ಣೆ ತಂದಿರಲಿಲ್ಲ. ಹೀಗಾಗಿ ನೆರುಕೆಯೊಳಗೆ ದೀಪಾಲೆ ಕಂಭದ ಮೇಲೆ ಕೂತಿದ್ದ ಬುಡ್ಡಿದೀವಿಗೆ ಕಣ್ಣು ಬಿಟ್ಟಿರಲಿಲ್ಲ. ಒಲೆಯೊಳಗೆ ಉರಿಯುತ್ತಿದ್ದ ಸೌದೆಯ ಬೆಂಕಿ ಹಟ್ಟಿಯೊಳಗೆಲ್ಲ ಬೆಳಕು ಮಾಡಿತ್ತು. ಬೇವಿನ ಮರದ ಬಳಿಯ ಕಂಭದ ಲೈಟೂ ರವಷ್ಟು ಬೆಳಕು ಕರುಣಿಸಿತ್ತು.

ತಿಪ್ಪವ್ವ 'ಇವತ್ತು ಸಾವ್‌ಕಾರ್‍ರು ಬಂದು ತ್ವಾಟದ ಕೂಲಿಗ ಕರೆದೇ ಹೊಗಿದ್ರ ಉಪಾಸ ಮನಿಕ ಬೇಕಾಗಿತ್ತುಕನಾಕು' ಅಂದು ತನಗೆ ತಾನೇ ಮಾತಾಡಿಕೊಳ್ಳುತ್ತ ಒಲೆಯ ಮೇಲಿನ ಮಡಕೆಯ ಕುದಿನೀರಿಗೆ ರಾಗಿಹಿಟ್ಟು ಸುರಿದು ಕೋಲಿಟ್ಟು ತಿರುವಿ ಮುದ್ದೆ ಕಟ್ಟುತ್ತಿದ್ದಳು. ಇತ್ತ ಅಂಗಳದಲ್ಲಿ ಅಜ್ಜನ ಸುತ್ತ ಇದ್ದ ಮಕ್ಕಳನ್ನು ಅವರವರ ಅವ್ವಂದಿರು ತಂತಮ್ಮ ಗುಡಿಸಿನಿಂದ 'ಯಿಲೇ ಕೂಸೇ ಬಾಪ್ಪಾ ಉಂಡು ಮನಿಕಳವೇ, ವೊತ್ತಾಯ್ತು' ಅಂದು ಕರೆಯಲು, 'ಬಂದ್ನವ್ವೈ, ಬಂದ್ನವ್ವೈ' ಅಂದು ಒಂದೊಂದಾಗಿ ಓಡತೊಡಗಿದವು.

ಸಿವಮಲ್ಲು, ಸಣ್ಣನಿಂಗು ಅಜ್ಜನನ್ನು ಏಳಿಸಿ ಅವನ ಕೈಗೆ ಕೋಲು ಕೊಟ್ಟು ಒಳಗೆ ಕರೆದುಕೊಂಡು ಬಂದವು. ತಿಪ್ಪವ್ವ ಮುದುಕನ ಮುಂದೆ ಅರಿವಾಣ ಮಡಗಿ ಮುದ್ದೆಯಿಟ್ಟು ಅದರೆದುರು ಹುಣಿಸೇಹಣ್ಣು ಮೆಣಸಿನಕಾಯಿ ಕಿವುಚಿದ ನೀರು ಬಿಟ್ಟಳು. ಅರಿವಾಣದಲ್ಲಿ ತೂತಿದ್ದು ಸಾರು ಜಿನುಗತೊಡಗಿತು. ತಿರುಗಿ ತಿಪ್ಪವ್ವ ಸಾರಿದ್ದ ಕಡೆ ಮುದ್ದೆಯನ್ನೂ ಮುದ್ದೆಯಿದ್ದ ಕಡೆ ಸಾರೂ ಬರುವಂತೆ ಮಾಡಿದಳು.

ಇನ್ನೊಂದು ಮುದ್ದೆಯ ಎರಡು ತುಂಡು ಮಾಡಿ ಮಕ್ಕಳಿಗಿಡಲು ಅವೂ ಕೈಯ್ಯಿಬಾಯಿ ಆಡಿಸತೊಡಗಿದವು.

ತುತ್ತನ್ನು ಸಾರಿಗೆ ಅಂಟಿಸುತ್ತಿದ್ದ ಕುಂಡಜ್ಜ 'ಅಪ್ಪಯ್‌ಗೊಳಾ' ಅನ್ನಲು ಮಕ್ಕಳು 'ಏನಜ್ಜೋ' ಅಂದವು.

ಅಜ್ಜ 'ನಾನೊಂದೇಳ್ತಿನಿ' ಅಂದು ಒಂದು ಘಳಿಗೆ ಸುಮ್ಮಗೆ ಕೂತ.

ಸಿವಮಲ್ಲು ಇದ್ದು, 'ಅಯ್ ಅದೇನ ಬ್ಯಾಗನೇಳಜ್ಜೋ, ಹೇಳ್ತಿನಿ ಹೇಳ್ತಿನಿ ಅಂತ ಹೊತ್ಮೂಡ್ಸಿ ಹೊತ್ಮುಳುಗುಸ್ಬುಡ್ತಿದ್ದಯಿ ನೀನು' ಅನ್ನಲು ತಿಪ್ಪವ್ವನಿಗೆ ನಗು ಬಂತು.

ಅಜ್ಜನೂ ನಗುತ್ತ 'ಪೈರಿನ ಮ್ಯಾಲೆ ಹಸುರು ಬಣ್ಣ, ವಾಡೆವಳಗೆ ಕೆಂಪು ಬಣ್ಣ ಬೀಸಿದ ಮ್ಯಾಲೆ ಇನ್ನೇನು, ಬೆಂದು ಕರಿಬಣ್ಣವಾಯ್ತು ಅದೇನೇಳ್ರಿ ಮತೆ' ಅಂದು ಒಡಪು ಹೇಳಿ ಅರಿವಾಣದ ತುತ್ತಿಗೆ ಕೈ ಹಾಕಿದ. ಸಣ್ಣನಿಂಗು ಅರಿವಾಣದ ತುತ್ತನ್ನು ಬಾಯಿಗಿಡುತ್ತ ಒಂದು ಘಳಿಗೆ ಯೋಚಿಸಿದಂತೆ ಮಾಡಿ 'ಕಳ್ಳಪುರಿಕನಜ್ಜ' ಅಂದಿತು.

ಸಿವಮಲ್ಲು ಇದ್ದು 'ಅಯ್ ಕೂತ್ಕ, ಕಳ್ಳಪುರಿಯಂತ ಕಳ್ಳಪುರಿ, ಅಲ್ಲ. ನಾನೇಳ್ತಿನಿ ತಾಳು' ಅಂದು ಒಂದು ಕ್ಷಣ ಘನ ಚಿಂತೆ ಮಾಡುವಂತೆ ಕಣ್ಣು ಮುಚ್ಚಿ ಕೂತಿತು. ತದನಂತರ ಕಣ್ಣು ತೆರೆದು 'ಉಪ್ಪು ಉಣುಸೆಕಾಯಿ' ಅಂದಿತು. ಸಿವಮಲ್ಲು ಹಾಗೆ ಅಂದದ್ದೇ ತಡ ಗುಡಿಸಿಲೊಳಗೆಲ್ಲ ನಗು ತುಂಬಿಕೊಂಡಿತು. ತುಂಬಿಕೊಂಡ ನಗು ಈಚೆಗೂ ಬಂದಿತು.

ಮಲಗಲು ಹವಣಿಸುತ್ತಿದ್ದ ಭೂಮಿ ತಾಯಿಗೆ, ಕತ್ತಲೆದೇವಿ ತಾನು ಬರುವಾಗಲೇ ಕೈಯಲ್ಲಿ ಹಿಡಿದುಕೊಂಡು ಬಂದಿದ್ದ ಕಪ್ಪು ಕಂಬಳಿಯನ್ನು ಹೊದಿಸುತ್ತಿದ್ದಳು. ಉಂಡ ಸಣ್ಣನಿಂಗುವನ್ನು ತಿಪ್ಪವ್ವ ಒಲೆಯ ಮುಂದೆ ತಂದು ಕೂರಿಸಿ ಬಿಸಿನೀರಿಗೆ ಅದ್ದಿದ್ದ ವಸ್ತ್ರವನ್ನು ಉಂಡೆಕಟ್ಟಿ ಅವನ ಮುಳ್ಳು ಚುಚ್ಚಿದ ಕಾಲಿಗ ಒತ್ತತೊಡಗಿದಳು. ಒಲೆಯೊಳಗಿದ್ದ ಕೆಂಡ ಕೂಸಿನ ಕಣ್ಣೊಳಗೆ ಭಗ ಭಗ ಉರಿಯುವಂತೆ ಕಾಣಿಸುತ್ತಿತ್ತು.

**ಕತೆಗಾರರ ಪರಿಚಯ:** ಡಾ.ಕೃಷ್ಣಮೂರ್ತಿ ಹನೂರು (ಚಾಮರಾಜನಗರ–೧೯೫೫) ಕತೆಗಾರ, ಕಾದಂಬರಿಕಾರ, ಜಾನಪದ ತಜ್ಞ, ನಿಕ್ಷೇಪ, ಕೇರಿಗೆ ಬಂದ ಹೋರಿ, ಕರ್ನಾಟಕ ಬುಡಕಟ್ಟುಗಳು ಅವರ ಕೃತಿಗಳು. ಜನಪದ ಕತೆಗಳ ಸಂಗ್ರಹಕ್ಕಾಗಿ ಇವರು ಪ್ರಸಿದ್ಧರು.

**ಪ್ರಶ್ನೆಗಳು:**

೧. ಕುಂಡಜ್ಜನ ಮೂಲ ಹೆಸರೇನು?

೨. 'ಕುಂಡಜ್ಜನ ಪರಸಂಗ'ದ ಸ್ವಾರಸ್ಯವನ್ನು ನಿರೂಪಿಸಿ.

೩. ತಿಪ್ಪವ್ವ, ಸಿವಮಲ್ಲು ಪಾತ್ರಗಳನ್ನು ಪರಿಚಯಿಸಿ.

# ೩. ಬೆಂಗಳೂರು ಅತ್ತೆಮ್ಮನ ಫಳಾರ!

**–ಕೇಶವರೆಡ್ಡಿ ಹಂದ್ರಾಳ**

**ಆಶಯ:** ನೆನೆಪು ಕಳೆದು ಹೋದ ದಿನಗಳನ್ನು ಕಣ್ಮುಂದೆ ತರುತ್ತದೆ. ಆಡಿ ಕೂಡಿ ಉಂಡ ದಿನಗಳು ಸಂಸ್ಕೃತಿಯಿಂದ ಸಂಸ್ಕರಿಸಲ್ಪಡುತ್ತವೆ. ಮೂಲ ಸಂಸ್ಕೃತಿಯೂ ನಯ ನಾಜೂಕಿಗೆ ಸಿಕ್ಕಿ ಕಣ್ಮರೆಯಾಗುತ್ತಿವೆ. ಆಚಾರ, ಆಚರಣೆಗಳು ಬದುಕಿನ ಒಂದು ಭಾಗವೂ ಹೌದು. ಆದರೆ ತೋರಿಕೆಯಾಗಬಾರದು. ನಾವು ಕೈಗೊಳ್ಳುವ ಆಚರಣೆಗಳು ಒಂದು ರೀತಿಯಲ್ಲಿ ನಮ್ಮ ಶುಚಿತ್ವಕ್ಕೂ ಕಾರಣವಾಗಬಹುದು. ಇಲ್ಲಿ ಉಪವಾಸ ನಿಯಮದೊಳಗಿನ ವ್ಯಂಗ್ಯ ಕಥನವಿದೆ.

ನಾನೊಬ್ಬ ಹಳ್ಳಿ ಗಮಾರನೆಂದೂ, ಮ್ಯಾನರ್ಸ್ ಇಲ್ಲದ ಒರಟನೆಂದೂ, ನಾಜೂಕಿಲ್ಲದ ಹಳ್ಳಿ, ಹೆಡ್ಡನೆಂದೂ ಕರೆಯಿಸಿಕೊಳ್ಳುವುದಕ್ಕೆ ನಿಜಕ್ಕೂ ಹೆಮ್ಮೆಯೆನಿಸುತ್ತದೆ. ಆ ಮೂಲಕ ನಮ್ಮ ಮೂಲಭೂತ ಆಶ್ರಯ ಸಂಸ್ಕೃತಿ ನಮ್ಮಲ್ಲಿ ಅಷ್ಟಿಷ್ಟು ಉಸಿರಾಡುತ್ತಿದೆಯೆಂಬ ಸಮಾಧಾನ. ಹಳ್ಳಿಗರಲ್ಲಿರುವಷ್ಟು, ಒರಟರಲ್ಲಿರುವಷ್ಟು ಮಾನವೀಯತೆ, ಅಂತಃಕರಣ, ದೇಶೀಯತೆ ನಿಜವಾಗಿಯೂ ನಗರದ ನಯ–ನಾಜೂಕಿನ ಸಂಸ್ಕೃತಿಯಲ್ಲಿ ಇಲ್ಲವೆಂದು ಎದೆ ತಟ್ಟಿಕೊಂಡು ಯಾರ ಮುಂದೆ ಬೇಕಾದರೂ ಹೇಳುತ್ತೇನೆ. 'ಬಡವರ ಮನೆ ಊಟ ಚಂದ; ಶ್ರೀಮಂತರ ಮನೆ ಮಾತು ಚಂದ' ಎನ್ನುವ ಮಾತು 'ಒರಟು' ಮತ್ತು 'ನಾಜೂಕು' ಸಂಸ್ಕೃತಿಗಳ ಸಾರ್ವಕಾಲಿಕ ಸತ್ಯದ ಪ್ರತೀಕವಾಗಿದೆ.

ಅದಿರಲಿ, ಅಪ್ಪನ ದೊಡ್ಡಪ್ಪ ಅಕ್ಕನನ್ನು ಆಂಧ್ರದ ಧರ್ಮಾವರಕ್ಕೆ ಕೊಟ್ಟಿದ್ದರು. ಅವರು ತುಂಬಾ ದೊಡ್ಡ ಶ್ರೀಮಂತರಾಗಿದ್ದರು. ಬೆಂಗಳೂರಿನಲ್ಲಿ ಅವರದೊಂದು ದೊಡ್ಡ ಜವಳಿ ಅಂಗಡಿಯಿದ್ದ ರಿಂದ ಅತ್ತೆಮ್ಮ ಗಂಡನೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದರು. ಅವರನ್ನು 'ಬೆಂಗಳೂರು ಅತ್ತೆಮ್ಮೆ' ಎಂತಲೇ ಕರೆಯುತ್ತಿದ್ದೆವು. ಬೆಂಗ್ಳೂರ್ ಅತ್ತೆಮ್ಮನನ್ನು ಕಂಡರೆ ಅಪ್ಪನಿಗೆ ಎಲ್ಲಿಲ್ಲದ ಪ್ರೀತಿ. ಅತ್ತೆಮ್ಮ ಆಗಿನ ಕಾಲದಲ್ಲೇ ಎಂಟನೆಯ ಕ್ಲಾಸು ಪಾಸು ಮಾಡಿ ಇಂಗ್ಲಿಷ್ ಕಲಿತಿದ್ದಳು. ಬೆಂಗ್ಳೂರ್ ಅತ್ತೆಮ್ಮನಿಗೆ ಒಂದು ಮೆಳ್ಳೆಗಣ್ಣು ಯಾರನ್ನೊ ನೋಡಿಕೊಂಡು ಇನ್ಯಾರೊಂದಿಗೊ ಮಾತನಾಡುತ್ತಿರುವಂತೆ ಅನ್ನಿಸುತ್ತಿತ್ತು. ಅದರಿಂದಲೇ ಅವರಿಗೆ ಭಾರಿ ಅದೃಷ್ಟ ಒದಗಿರುವುದೆಂದು ಅಮ್ಮ, ದೊಡ್ಡಮ್ಮಂದಿರು ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿದ್ದೆವು. ಅತ್ತೆಮ್ಮನನ್ನು ಕಂಡರೆ ಅಮ್ಮ, ದೊಡ್ಡಮ್ಮರೊಂದಿಗೆ ಮಕ್ಕಳೆಲ್ಲ ದಿಗಿಲುಪಡುತ್ತಿದ್ದವು. ಆದರೆ ದೊಡ್ಡಪ್ಪನಿಗೆ ಮಾತ್ರ ಅತ್ತಮ್ಮನನ್ನು ಕಂಡರೆ ಆಗುತ್ತಿರಲಿಲ್ಲ.

ಅತ್ತೆಮ್ಮ ವರ್ಷದಲ್ಲಿ ಎರಡು ಸಾರಿ ನಮ್ಮ ಊರಿಗೆ ಬಂದು ಹತ್ತು ಹದಿನೈದು ದಿನ ಇದ್ದು ಹೋಗುತ್ತಿದ್ದಳು. ಬರುವುದಕ್ಕೆ ವಾರ ಮೊದಲೆ ಕಾಗದ ಬರೆಯುತ್ತಿದ್ದಳು. ಕಾಗದ ಓದುವುದು ದೊಡ್ಡಪ್ಪನಿಗೆ ಮಾತ್ರವೇ ಬರುತ್ತಿದ್ದುದರಿಂದ ಪುರವರದ ಪೋಸ್ಟ್ ಮ್ಯಾನ್ ಯಾವುದೇ ಕಾಗದ ಬಂದರೂ ದೊಡ್ಡಪ್ಪನ ಕೈಗೆ ಕೊಟ್ಟು ಹೋಗುತ್ತಿದ್ದ ಅತ್ತೆಮ್ಮನ ಕಾಗದ ಬಂದ ದಿನ ದೊಡ್ಡಪ್ಪ ಕಾಗದವನ್ನು ನಮ್ಮ ಕೈಗೆ ಕೊಡುತ್ತಾ ಎಲ್ಲರಿಗೂ ಕೇಳುವಂತೆ, 'ತಗಳ್ರಪ್ಪಕಾಗ ಬಂದೈತೆ. ಮುಂದಿನ ವಾರ ಬೆಂಗ್ಳೂರ್ ಕುಲ್ಡಿ ಬತ್ತಾಳಂತೆ. ಇನ್ ಊರ್ ತುಂಬಾ ಅವುಳ್ದೆ ಮೆರವಣಿಗೆ. ನಿಮ್ಮಪ್ಪ ಬೇಸಾಯ ಬಿಟ್ಟು ಅವುಳ್ ಚಾಕ್ರಿ ಮಾಡ್ಕಂಬ್ತ ಕೂತ್ಕಂಬ್ತಾನೆ...' ಎನ್ನುತ್ತಿದ್ದ. ಅತ್ತೆಮ್ಮ ಬರುವ ದಿನ ಅಪ್ಪ ಕಮಾನು ಗಾಡಿಯನ್ನು ಕಟ್ಟಿಕೊಂಡು ಕಲ್ಯಾಣಿ ಬಸ್ಸು ಬರುವುದಕ್ಕೆ ಒಂದು ಗಂಟೆ ಮುಂಚೆಯೇ ಬ್ಯಾಲ್ಯದ ಬಸ್ಟ್ಯಾಂಡಿನಲ್ಲಿ ಕಾಯುತ್ತಿದ್ದ.

ಅತ್ತೆಮ್ಮ ಬರುವ ಹೊತ್ತಿಗೆ ಮನೆಯ ಧೂಳು ಹೊಡೆದು, ಸಾರಿಸಿ, ಒರೆಸಿ ಒಪ್ಪಮಾಡುವುದರ ಜೊತೆಗೆ ಹುಡುಗರಿಗೂ ಕ್ಷೌರ ಮಾಡಿಸಿ, ನೀರೊಯ್ದು ಕ್ಲೀನ್ ಮಾಡುತ್ತಿದ್ದರು. ಅತ್ತೆಮ್ಮ ಇರುವವರೆಗೂ ಯಾರೂ ಗಲೀಜು ಮಾಡುವಂತಿರಲಿಲ್ಲ ನಮಗೆ, ಹಳ್ಳಿ ಹುಡುಗರಿಗೆ, ನೀರೊಯ್ದುಕೊಳ್ಳುವುದು, ಕ್ಷೌರ ಮಾಡಿಸಿಕೊಳ್ಳುವುದೆಂದರೆ ಯಮಯಾತನೆಯ ಸಂದರ್ಭಗಳಾಗಿರುತ್ತಿದ್ದವು, ಶನಿವಾರ ಮಾರ್ನಿಂಗ್ ಕ್ಲಾಸ್ ಮುಗಿಸಿಕೊಂಡು ಬಂದು ಊಟ ಮಾಡುವುದರೊಳಗೆ ಬಚ್ಚಲಿನ ಒಲೆಯ ಮೇಲಿನ ಬಾನೆಯಲ್ಲಿ ಕೊತ ಕೊತ ಕುದಿಯುತ್ತಿದ್ದ ನೀರು ನಮಗೆ ಕಾಯುತ್ತಿರುತ್ತಿತ್ತು. ಏನಾದರೂ ಮಾಡಿ ನೀರೊಯ್ದುಕೊಳ್ಳುವುದನ್ನು ತಪ್ಪಿಸಲು ನಾವು ಮಾಡುತ್ತಿದ್ದ ಉಪಾಯ ವಿಫಲವಾಗುತ್ತಿತ್ತು. ಪಾತಾಳಲೋಕದಲ್ಲಿ ಅಡಗಿಕೊಂಡಿದ್ದರೂ, ದನಗಳ ಮೂಗುದಾರವನ್ನು ಹಿಡಿದು ಮೈ ತೊಳೆಯಲು ಕೆರೆಗೊ, ಕಾಲುವೆಗೊ ಎಳೆದುಕೊಂಡು ಹೋಗುವಂತೆ ನಮ್ಮ ಜುಟ್ಟುಗಳನ್ನು ಹಿಡಿದು ದರ ದರ ಎಳೆದುಕೊಂಡು ಬಂದು ಬಟ್ಟೆ ಬಿಚ್ಚಿ ಬಚ್ಚಲಿನ ಕಲ್ಲಿನ ಮೇಲೆ ಕುಕ್ಕರ ಬಡಿಸಿ, ಒರಳು ಕಲ್ಲಿನಲ್ಲಿ ರುಬ್ಬಿದ ಸೀಗೆಕಾಯಿಯನ್ನು ತಲೆಗೆ ಹಾಕಿ ಪಟ ಪಟ ಉಜ್ಜಲಾಗುತ್ತಿತ್ತು, ಕಣ್ಣಿಗೆ ಸೀಗೆಕಾಯಿ

ಹೋದರೆ, ಅಳುತ್ತಾ ಮೈ ಬಿಟ್ಟುಕೊಂಡೇ ಬಚ್ಚಲಿನಿಂದ ಹೊರಕ್ಕೆ ಓಡುತ್ತಿದ್ದೆವು. ಆದರೆ ಮತ್ತೆ ಹಿಡಿದುಕೊಂಡು ಬಂದು ನೀರೊಯ್ಯುವ ಘನಕಾರ್ಯವನ್ನು ಮುಂದುವರೆಸಲಾಗುತ್ತಿತ್ತು.

ನನಗೆ ಮಿಡ್ಲಿಸ್ಕೂಲ್ ಮುಗಿಯುವವರೆಗೂ ಕ್ಷೌರ ಮಾಡಿಸಿಕೊಳ್ಳುವುದೆಂದರೆ ಆಗುತ್ತಿರಲಿಲ್ಲ. ಬ್ಯಾಲ್ಯದ ಕ್ಷೌರದ ಪುಟ್ಟಪ್ಪ ತನ್ನ ಹತಾರಗಳೊಂದಿಗೆ ಹಟ್ಟಿಯ ಮುಂದೆ ಕುಳಿತಿರುವುದು ಕಣ್ಣಿಗೆ ಬಿದ್ದಿತಂದರೆ, ಅವೊತ್ತು ನಮ್ಮ ತಲೆಯ ತುಪ್ಪಟ ಉದುರುವುದು ಗ್ಯಾರಂಟಿಯಾಗಿರುತ್ತಿತ್ತು. ನನಗೆ ಕ್ಷೌರ ಮಾಡಿಸಬೇಕಾದರೆ ದೊಡ್ಡಪ್ಪ ಮತ್ತು ಕೆಲಸದ ಮುದ್ದಯ್ಯ ಗಟ್ಟಿಯಾಗಿ ಹಿಡಿದುಕೊಳ್ಳುತ್ತಿದ್ದರು. ಆದರೂ ಪುಟ್ಟಪ್ಪ ಕತ್ತರಿ ಮತ್ತು ಮಿಷನ್ ಆಡಿಸುವಾಗ ಚಕ್ಕಲಗುಲಿಯಾಗಿ ತಲೆಯನ್ನು ಕೊಡವಿದರೆ ದೊಡ್ಡಪ್ಪ ಮತ್ತು ಮುದ್ದಯ್ಯ ಇಬ್ಬರೂ ಪಕ್ಕಕ್ಕೆ ಬೀಳುತ್ತಿದ್ದರು. ದೊಡ್ಡಪ್ಪನಿಗೆ ಕೋಪ ಬಂದು ತಲೆಗೊಂದು ಜೋರಾಗಿ ಬಿಗಿದು 'ಬುಡುಕ್ಕತ್ತ ಹೊಡ್ಯೊ ಪುಟ್ಟ ಈ ನನ್ಮಗನ್ಗೆ' ಎಂದು, ಕೊಯ್ಯುವಾಗ ಕದಲದಂತೆ ಹಂದಿಯನ್ನು ಹಿಡಿದುಕೊಳ್ಳುವಂತೆ, ಗಟ್ಟಿಯಾಗಿ ಬಾಚಿ ಹಿಡಿದುಕೊಳ್ಳುತ್ತಿದ್ದ ಕ್ಷೌರ ಮಾಡುವಾಗಲೇ ಕೆಲವೊಮ್ಮೆ ಹೇನುಗಳು ಪಿತ ಪಿತ ನೆಲಕ್ಕೆ ಉದುರುತ್ತಿದ್ದವು.

ಅತ್ತೆಮ್ಮ ಬಂದರೆ, ನೀರೊಯ್ದುಕೊಳ್ಳುವ, ಕ್ಷೌರ ಮಾಡಿಸಿಕೊಳ್ಳುವ ಕೆಲಸಗಳು ರಿಪೀಟ್ ಆಗುತ್ತಿದ್ದುದರಿಂದ ಮನಸ್ಸಿನಲ್ಲೆ ಅತ್ತೆಮ್ಮನನ್ನು ಬೈದುಕೊಳ್ಳುತ್ತಿದ್ದೆ. ಅತ್ತೆಮ್ಮ ಮಹಾನ್ ದೈವಭಕ್ತೆಯಾದ್ದರಿಂದ ಊರಿನಲ್ಲಿ ಇರುತ್ತಿದ್ದ ಹತ್ತು ದಿನಗಳಲ್ಲಿ ಗಂಗಮ್ಮನ ಪೂಜೆ, ನಾಗರ ಪೂಜೆ, ಬಿಜವಾರದ ಆಂಜನೇಯ ಪೂಜೆ, ಮಧುಗಿರಿ ಮಾರಮ್ಮನ ಪೂಜೆ ಇತ್ಯಾದಿ ಪೂಜೆಗಳನ್ನು ದಿನ ಬಿಟ್ಟು ದಿನ ಇಟ್ಟುಕೊಳ್ಳುತ್ತಿದ್ದಳು. ಹಾಗಾಗಿ ಅತ್ತೆಮ್ಮ ದಿನ ಬಿಟ್ಟು ದಿನ ಉಪವಾಸವಿರುತ್ತಿದ್ದಳು. ನಮಗೆ ಬೆಳಿಗ್ಗೆ ಮೋರೆ ತೊಳೆಯುತ್ತಿದ್ದಂತೆಯೇ ತಂಗಳು ಮುದ್ದೆ– ಮೊಸರು ಇಲ್ಲದಿದ್ದರೆ ಹೊಟ್ಟೆ ಅಬೋ ಎನ್ನುತ್ತಿತ್ತು. ಅಂತಹುದರಲ್ಲಿ ಅತ್ತೆಮ್ಮ ದಿನಪೂರ್ತಿ, ಅದೂ ದಿನ ಬಿಟ್ಟು ದಿನ, ಉಪವಾಸ ಹೇಗಿರುತ್ತಾಳೆಂಬ ಐಸೋಜಿಗಕ್ಕೆ ಬಲು ಬೇಗನೆ ಉತ್ತರ ಸಿಕ್ಕಿತ್ತು. ಉಪವಾಸದ ದಿನಗಳಲ್ಲಿ ಅತ್ತೆಮ್ಮ ಫಳಾರವನ್ನು ಸೇವಿಸುತ್ತಿದ್ದಳು. ಫಳಾರವನ್ನು ಅತ್ತೆಮ್ಮನೇ ಮಾಡಿಡುತ್ತಿದ್ದಳು. ಪೂಜೆಯಿರುತ್ತಿದ್ದ ಪ್ರತಿದಿನದ ಹಿಂದಿನ ಸಂಜೆಯೇ ಅಪ್ಪ ಮಧುಗಿರಿಗೆ ಹೋಗಿ ಒಂದೊಂದು ಕೇಜಿ ಅವಲಕ್ಕಿ, ಎರಡು ಚಿಪ್ಪು ಒಳ್ಳೆ ಬಾಳೇಹಣ್ಣನ್ನು ತರುತ್ತಿದ್ದ, ಅತ್ತಮ್ಮ ಬೇಗನೆ ಎದ್ದು ನೀರೊಯ್ದುಕೊಂಡು ಪೂಜೆಗೆ ಮೊದಲೇ ಫಳಾರವನ್ನು ಮಾಡಿಡುತ್ತಿದ್ದಳು. ಕೇಜಿ ಪೂರಾ ಅವಲಕ್ಕಿಯನ್ನು ನೆನೆಸಿ, ಬೆಲ್ಲವನ್ನು ಕುಟ್ಟಿ ಹಾಕಿ, ತೆಂಗಿನ ಕಾಯಿ ತುರಿದು ಹಾಕಿ ಏಲಕ್ಕಿ ಪುಡಿಯನ್ನು ಉದುರಿಸಿ ಸ್ಟೀಲ್ ಪಾತ್ರೆಯಲ್ಲಿ ಇರಿಸುತ್ತಿದ್ದಳು. ಇನ್ನೊಂದು ಸ್ಟೀಲ್ ಪಾತ್ರೆಯಲ್ಲಿ ಬಾಳೆಹಣ್ಣು ಸುಲಿದು ಸಣ್ಣ ಸಣ್ಣ ತುಂಡು ಮಾಡಿ ಅದಕ್ಕೆ ಬೆಲ್ಲ, ಏಲಕ್ಕಿ ಪುಡಿ, ತೆಂಗಿನಕಾಯಿ ತುರಿ ಬೆರೆಸಿ ರಸಾಯನ ರೆಡಿ ಮಾಡಿಡುತ್ತಿದ್ದಳು. ಅದಕ್ಕೆ ಬೆರೆಸಲು ಅಪ್ಪ ಬ್ಯಾಲದ ಹಣ್ಣನ್ನೂ, ಹಲಸಿನ ಹಣ್ಣನ್ನೂ ಸಂಪಾದನೆ ಮಾಡಿಕೊಂಡು ಬಂದು ಅಮ್ಮನ ಹತ್ತಿರ ಭೇಷೆನಿಸಿಕೊಳ್ಳುತ್ತಿದ್ದ.

ಎಂಟುಗಂಟೆಗೆಲ್ಲ ಪೂಜೆ ಮುಗಿಸುತ್ತಿದ್ದ ಅತ್ತೆಮ್ಮ ಸ್ಟೀಲ್ ತಟ್ಟೆಯ ತುಂಬಾ ಫಳಾರವನ್ನು ಹಾಕಿಕೊಂಡು ನಾವು ಹಿಟ್ಟುಣ್ಣುವ ಮೊದಲೇ ತಿಂದುಬಿಡುತ್ತಿದ್ದಳು. ಮಿಕ್ಕಿದ ಇನ್ನರ್ಧ ಫಳಾರವನ್ನು ಮಧ್ಯಾಹ್ನ ಎರಡು ಗಂಟೆಯ ಆಜುಬಾಜಿಗೆ ತಿನ್ನುತ್ತಿದ್ದಳು. ಅತ್ತೆಮ್ಮ ಫಳಾರವನ್ನು ಸ್ವೀಕರಿಸುವಾಗ ಅಲ್ಲಿ ಮಕ್ಕಳಿಂದ ಹಿಡಿದು ದೊಡ್ಡವರಾದಿಯಾಗಿ ಯಾರೂ ಸುಳಿಯುವಂತಿರಲಿಲ್ಲ. ಆದರೆ ನಾವು ಮಕ್ಕಳು ಫಳಾರದ ಆಸೆಗಾಗಿ ಅಲ್ಲಲ್ಲೆ ಓಡಾಡುತ್ತಿದ್ದೆವು. ದೇವಸ್ಥಾನದಲ್ಲಿ ಸರ್ಪು ಕೊಡುವಂತೆ ಅತ್ತೆಮ್ಮ ಎರಡು ಬೆರಳಲ್ಲಿ ಇಷ್ಟಿಷ್ಟು ಫಳಾರವನ್ನು ಹುಡುಗರ ಕೈಗೆ ಇಕ್ಕುತ್ತಿದ್ದಳು. ಆಗ ದೊಡ್ಡವರು, 'ಏಯ್ ನಡಿರೊ ಆಚೆಗೆ, ಆಯಮ್ಮ ಉಪಾಸಕ್ಕೆ ಫಳಾರ ಮಾಡ್ಕಂಡಿದ್ರೆ.. ಪಾಪ ದೃಷ್ಟಿ–ಗಿಷ್ಟಿ ಆದಾತು...' ಎಂದು ಗದರಿಕೊಂಡು ಓಡಿಸುತ್ತಿದ್ದರು. ಅಪ್ಪ 'ನಮ್ಮಕ್ಕಯ್ಯ ಇವೊತ್ತು ಉಪಾಸ' ಎಂದು ತೆಂಗಿನ ಮರ ಹತ್ತಿ ಸೈಜಾದ ಕೆಂದಳೆನೀರನ್ನು ತರುತ್ತಿದ್ದ ಸೂರ್ಯ ಮುಳುಗುವ ಹೊತ್ತಿಗೆ ಮೂರು ಎಳೆನೀರು ಅತ್ತೆಮ್ಮನ ಹೊಟ್ಟೆ ಸೇರುತ್ತಿದ್ದವು. ರಾತ್ರಿ ಅರ್ಧ ಕೇಜಿ ರವೆಯ ಘಮ ಘಮ ಉಪ್ಪಿಟ್ಟು ತಿನ್ನುವುದರೊಂದಿಗೆ ಅವೊತ್ತಿನ ಅತ್ತೆಮ್ಮನ ಉಪವಾಸ ಮುಗಿಯುತ್ತಿತ್ತು.

ಅತ್ತೆಮ್ಮನ ಪೂಜೆ ಮತ್ತು ಉಪವಾಸ ಇಡೀ ಊರಿಗೆ ಗೊತ್ತಿತ್ತು. ಅಮ್ಮ ಮತ್ತು ದೊಡ್ಡಮ್ಮಂದಿರು ಅತ್ತೆಮ್ಮನ ಎದುರಿಗೆ ಬಂದವರ ಮುಂದೆಯಲ್ಲ, 'ನಮ್ಮತ್ಗೆ ಇವೊತ್ತು ಉಪಾಸ. ತೊಟ್ ನೀರು ಬಾಯಿಗೆ ಬಿಡಲ್ಲ...' ಎಂದು ಹೇಳುತ್ತಿದ್ದರೂ ಅವರವರೇ ಇರುವಾಗ, 'ಅದ್ಯಾವ್ ಸೀಮೆ ಉಪಾಸನಮ್ಮ ಈಯಮ್ಮುಂದು...' ಎಂದು ಮಾತನಾಡಿಕೊಳ್ಳುತ್ತಿದ್ದರು. ಮನೆಯ ಹತ್ತಿರ ಕೆಲಸ ಮಾಡಲು ಬರುತ್ತಿದ್ದ ಸಂಜೀವಮ್ಮ, ಓಬಕ್ಕ, ಗಂಗಮ್ಮ ಮುಂತಾದವರು, 'ಅಕ್ಕಯ್ಯ ದಿನಪೂರ್ತಿ ಉಪಾಸ ಯಂಗಿರ್ತೀಯಮ್ಮ. ನಮ್ಮ ಹಿಟ್ಟುಣ್ಣೋದು ತಡ ಆದ್ರೆ ಹೊಟ್ಟೆ ತುಂಬ ಹುಳ ಓಡಾಡ್ದಂಗಾಗೈತೆ...' ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡು ಬೆಕ್ಕಸ ಬೆರಗಾಗುತ್ತಿದ್ದರು. ಆಗ ಅಲ್ಲೆ ದನಗಳಿಗೆ ಮೇವು ತಿನ್ನಿಸುತ್ತಿದ್ದ ಆಳು ಮುದ್ದಯ್ಯ, 'ಅದ್ಯೆಕಲ್ಲ ನೀತಿ,

ನೇಮ, ಭಕ್ತಿ ಇರ್ಬೇಕು. ಪ್ಯಾಟಿನಾಗೆ ಇರೋರ್ಗೆ ಅದೆಲ್ಲ ಸಿದ್ಸಿರ್ತೈತೆ...' ಎಂದು ಅತ್ತೆಮ್ಮನನ್ನು ಮಧುಗಿರಿ ಬೆಟ್ಟ ಹತ್ತಿಸುತ್ತಿದ್ದ, ಅವರ ಮಾತುಗಳಿಗೆ ಪೋಸು ಕೊಡುತ್ತಾ ಅತ್ತೆಮ್ಮ ಪರ್ಸು ಬಿಚ್ಚಿ ಅಡಿಕೆಲೆ ಬೀಡಿಗಾಗಿ ಅವರವರ ಯೋಗ್ಯತಾನುಸಾರ ಒಂದೊಂದು ಎರಡೆರಡು ರೂಪಾಯಿ ಕೊಡುತ್ತಿದ್ದಳು.

ಆದರೆ ದೊಡ್ಡಪ್ಪನಿಗೆ ಮಾತ್ರ ಅತ್ತೆಮ್ಮನ ಉಪಾಸ ಮತ್ತು ಪೂಜೆಯ ಬಗ್ಗೆ ಗುಮಾನಿ ಇತ್ತು. ದೊಡ್ಡಪ್ಪ, ಅಪ್ಪ ಮತ್ತು ಅತ್ತೆಮ್ಮನೊಂದಿಗೆ ಮುಖ ಕೊಟ್ಟು ಮಾತನಾಡುತ್ತಿರಲಿಲ್ಲ. ಅವರನ್ನ ಬಯ್ಯುವುದಿದ್ದರೂ, ಅವರ ಎದುರಿಗೆ ಬಯ್ಯದೆ ನಮ್ಮ ಹತ್ತಿರ, ಆಳುಗಳ ಹತ್ತಿರ ಬಯ್ಯುತ್ತಿದ್ದ. 'ಪಾಪ ಅತ್ತೆಮ್ಮ ಉಪಾಸ ಇವೊತ್ತು...' ಎಂದು ದೊಡ್ಡಪ್ಪನ ಮುಂದೆ ನಾವೇನಾದರೂ ಅತ್ತೆಮ್ಮನ ಬಗ್ಗೆ ಕನಿಕರ ವ್ಯಕ್ತಪಡಿಸಿದರೆ, ದೊಡ್ಡಪ್ಪ ಆಕಡೆ ಈಕಡೆ ನೋಡಿ ಅತ್ತೆಮ್ಮ ಅಲ್ಲೆಲ್ಲೂ ಕಾಣದಿರುವುದನ್ನು ಖಚಿತಪಡಿಸಿಕೊಂಡು, 'ಹೋಗ್ರೊ... ಹೋಗೊ ಯಡ್ನನ್ಮಕ್ಳ, ಆ ಕುಲ್ಡಿ ನಾಟ್ಕ ಆಡ್ತ ಅವ್ಳೆ. ಹಿಟ್ಟು ಹುಳ್ಳಿ ಕಾಳ್ ಸಾರು ತಿನ್ನಕಾಗ್ದೆ ಯಾಸ ಕಟ್ಟಾ ಅವ್ಳೆ. ಒಂದೊಂದ್ ಕೇಜಿ ಅವಲಕ್ಕಿ ಅರ್ಧ ಡಜನ್ ಬಾಳೆಹಣ್ಣು ತಿಂದು ಇನ್ನಂಥ ಉಪಾಸ ಮಾಡಾಳು. ನಿಮ್ಮಪ್ಪನ್ಗೂ ಅವುಳ್ಗು ಸರಿಯಾಗೈತೆ... ಎನ್ನುತ್ತಿದ್ದ. ಆದರೆ ಅತ್ತೆಮನಿಗೂ ದೊಡ್ಡಪ್ಪನಿಗೂ ಅಷ್ಟಕ್ಕಷ್ಟೆ, ಆದ್ದರಿಂದ ದೊಡ್ಡಪ್ಪ ಅತ್ತೆಮ್ಮನನ್ನು ವಿನಾಕಾರಣ ಬಯ್ಯುತ್ತಾನೆಂದೇ ಎಲ್ಲರೂ ತಿಳಿದುಕೊಂಡಿದ್ದರು. ಮನೆಯ ಅತ್ತೆಮ್ಮನನ್ನು ಕಂಡರೆ ನಾಯಿಗಳೂ ಭಯಪಡುತ್ತಿದ್ದವು. ಅತ್ತೆಮ್ಮ ಇಲ್ಲದ ಟೈಮಿನಲ್ಲಿ ಒಳಗೆಲ್ಲ ರಾಜಾರೋಷವಾಗಿ ಒಳಗೆಲ್ಲ ಓಡಾಡುತ್ತಿದ್ದನಾಯಿಗಳು ಅತ್ತೆಮ್ಮ ಊರಿನಲ್ಲಿರುವಷ್ಟು ದಿನ ಒಳಗೆ ಕಾಲಿಡುತ್ತಿರಲಿಲ್ಲ. ಒಂದು ಸಾರಿ ಅಮ್ಮ ಪೂಜೆ ಮಾಡಿ ಫಳಾರದ ಪಾತ್ರೆಯನ್ನು ನಡುಮನೆಯಲ್ಲಿ ದೇವರ ಫೋಟೋದ ಮುಂದೆ ಇಟ್ಟಿದ್ದಾಗ ಕರಿಯ ನಾಯಿ ತಂಗಳು ಅನ್ನ ಇರಬೇಕೆಂದು ಮೂತಿ ಇಟ್ಟು ಮೂಸಿತ್ತು. ಅದನ್ನು ನೋಡಿದ ಅತ್ತೆಮ್ಮ ಕಿರುಚಿಕೊಂಡು ಫಳಾರದ ಪಾತ್ರೆಯನ್ನು ಹೊರಗೆ ತಂದಿಟ್ಟಿದ್ದಳು. ಮತ್ತೆ ಹೊಸದಾಗಿ ಅವಲಕ್ಕಿಯನ್ನು ಬೇರೆ ಪಾತ್ರೆಯಲ್ಲಿ ನೆನೆ ಹಾಕಿದ್ದಳು. ತನ್ನ ಅಕ್ಕಯ್ಯನ ಫಳಾರಕ್ಕೆ ಬಾಯಿಟ್ಟಿದ್ದಕ್ಕೆ ನಾಯಿ ಮೇಲೆ ಕೋಪಗೊಂಡ ಅಪ್ಪ ಕಲ್ಲು ಬೀಸುತ್ತಾ ನಾಯಿಯನ್ನು ಊರೆಲ್ಲ ಇಟ್ಟಾಡಿಸಿದ್ದ.

ನಾಯಿ ಮುಟ್ಟಿದ ಫಳಾರವನ್ನು ಅತ್ತೆಮ್ಮ ಬಿಸಾಕಲು ಹೇಳಿದರೂ, ಬಿಸಾಕಲು ನಮಗೆ ಮನಸ್ಸಿರಲಿಲ್ಲ. ಬಿಸಾಕಲು ಬಣವೆಯ ಕಡೆ ತೆಗೆದುಕೊಂಡು ಹೋಗುತ್ತಿದ್ದಾಗ, ಬಣವೆಯಲ್ಲಿ ಗಾಡಿ ಮೇಲೆ ಕುಳಿತಿದ್ದ ದೊಡ್ಡಪ್ಪ ವಿಷಯ ತಿಳಿದು, 'ಮೇಲಿಂದ್ ಸ್ವೊಲ್ಪ ತೆಗ್ದಾಕಿ ತಿನ್ರಲೇ' ಎಂದು ತಾನೂ ಕೈ ಹಾಕಿದ್ದ. ಅಂದು ತೃಪ್ತಿಯಾಗುವಷ್ಟು ಫಳಾರವನ್ನು ತಿಂದಿದ್ದವು. ಫಳಾರದ ರುಚಿ ಹತ್ತಿ ನಾವೂ ಉಪಾಸ ಇದ್ರೆ ಚಂದಾಗಿರ್‍ತೈತೆ ಎಂದು ಹುಡುಗರು ಮಾತನಾಡಿಕೊಂಡಿದ್ದೆವು. ಇದಾದ ನಾಲ್ಕನೆಯ ದಿನ ಮಾಮೂಲಿಯಂತೆ ಅತ್ತೆಮ್ಮ ಎಂಟುಗಂಟೆಗೆಲ್ಲ ಪೂಜೆಗೆ ರೆಡಿ ಮಾಡಿ ಫಳಾರವನ್ನು ಫೋಟೋದ ಮುಂದೆ ಇಟ್ಟಿದ್ದಳು. ಹೊಲದ ಹತ್ತಿರದಿಂದ ಬಂದ ನಾನು ಮುಖ ತೊಳೆದು ನಡುಮನೆಗೆ ಕಾಲಿಟ್ಟ ಕೂಡಲೇ ಫಳಾರ ಕಂಡಿತ್ತು. ಅತ್ತೆಮ್ಮ ಅಡುಗೆ ಮನೆಯಲ್ಲಿ ಅಮ್ಮ ಹತ್ತಿರ ಮಾತನಾಡುತ್ತಿದ್ದಳು. ನಾನು ಇದ್ದಕ್ಕಿದ್ದಂತೆ, 'ಅತ್ತೆಮ್ಮ, ಫಳಾರನ ನಾಯಿ ಮುಟ್ಟಿ ಓಡೋಯ್ತು. ಎಂದು ಕೂಗಿಕೊಂಡಿದ್ದೆ. 'ಅಯ್ಯೋ ನನ್ನ ಸವುತಿ ನಾಯಿ....' ಎಂದು ಅತ್ತೆಮ್ಮ ಅಡುಗೆ ಮನೆಯಿಂದ ಹೊರಬಂದಿದ್ದಳು. ಅತ್ತೆಮ್ಮನ ಮಾತುಗಳಿಗೂ ಕಾಯದೆ ಫಳಾರದ ಪಾತ್ರೆಯನ್ನು ಹಿಡಿದು ಬಣವೆಯ ಕಡೆ ಓಡಿದ್ದೆ. ನನ್ನ ಹಿಂದೆ ಹುಡುಗರು ಓಡಿ ಬಂದಿದ್ದರು. ಅಲ್ಲೆ ಇದ್ದ ದೊಡ್ಡಪ್ಪ' ಇವೊತ್ತೂ ನಾಯಿ ಮುಟ್ತೇನೊ....' ಎಂದು ಎದ್ದು ಬಂದಿದ್ದ. ನಿಜ ಹೇಳಬೆಂಕೆಂದರೆ, ಅಲ್ಲಿ ಯಾವ ನಾಯಿಯೂ ಬಂದಿರಲಿಲ್ಲ! ಫಳಾರವನ್ನು ತಿನ್ನುತ್ತಾ ದೊಡ್ಡಪ್ಪ ನನ್ನ ಬುದ್ಧಿವಂತಿಕೆಗೆ ಮೆಚ್ಚಿಕೊಳ್ಳುತ್ತಾ "ಭಲರೇ ನನ್ಮಗ್ನೆ ವಿಶ್ವೇಶ್ವರಯ್ಯನ ತಲೆ ಕಣೊ ನಿಂದು. ಆ ಕುಲ್ಡಿಗೆ ಹಂಗೇ ಮಾಡಿ ನಿಜವಾಗಲ್ಲೂ ಉಪಾಸ ಕಡ್ಗ್‌ಬೇಕು...' ಎಂದು ಶಬ್ಬಾಸ್ ಗಿರಿಯನ್ನು ಕೊಡುತ್ತಿದ್ದಾಗ, ಅತ್ತೆಮ್ಮನಿಗೆ ಏನೋ ಅನುಮಾನ ಬಂದು ಹಿಂದೆಯೇ ಬಂದು ನಮ್ಮ ಮಾತುಗಳನ್ನು ಕೇಳಿಸಿಕೊಂಡಿದ್ದಳು. ಅಂದು ವಿಷಯ ತಿಳಿದು ಅಪ್ಪ ಬಾರುಕೋಲಿನಿಂದ ಸಖತ್ತಾಗಿ ಮಾತನಾಡಿಸಿದ್ದ, ದೊಡ್ಡಪ್ಪ ಅಪ್ಪನನ್ನು ಬಯ್ಯುತ್ತಾ ನನ್ನನ್ನು ಬಿಡಿಸಿಕೊಂಡಿದ್ದ ಅಣ್ಣ ತಮ್ಮಂದಿರಲ್ಲಿ ದೊಡ್ಡ ಜಗಳವಾಗುವ ಸೂಚನೆಗಳು ಕಂಡು ಅತ್ತೆಮ್ಮ ಮಧ್ಯ ಪ್ರವೇಶಿಸಿ, 'ನಿಮ್ ಕೈ ಮುಗಿತಿನಿ ಸಾಕು ಸುಮ್ನಿರ್‍ರಪ್ಪ ಸಾಕು ಸುಮ್ನಿರ್‍ರಪ್ಪ. ಊರ್ ಜನಕ್ಕೆ ಗೊತ್ತಾದ್ರೆ ನಕ್ಕಾರು...' ಎಂದು ಸಂಧಾನ ಮಾಡಿದ್ದಳು. ಇನ್ಯಾವೊತ್ತೂ ಅತ್ತೆಮ್ಮನ ಫಳಾರದ ಸುದ್ದಿಗೆ ಹೋಗಬಾರದೆಂದು ತೀರ್ಮಾನಿಸಿದ್ದೆ ನಾನು. ಅತ್ತೆಮ್ಮ ಸತ್ತು ಹದಿನೈದು ವರ್ಷ ಕಳೆದಿವೆ. ದೊಡ್ಡಪ್ಪ, ಅಪ್ಪ ಕೂಡ ಹಿಂದೆ-ಮುಂದೆ ಅತ್ತೆಮ್ಮನನ್ನು ಸೇರಿಕೊಂಡಿದ್ದಾರೆ. ಈಗಲೂ ಹಬ್ಬಗಳಲ್ಲಿ ಉಪವಾಸ 'ಫಲಾಹಾರ' ಎಂಬ ಮಾತುಗಳು ಕಿವಿಗೆ ಬಿದ್ದರೆ ಹಿಂದಿನ ನೆನಪುಗಳು ಬಿಚ್ಚಿಕೊಂಡು ಕಣ್ಣು ತೇವಗೊಳ್ಳುತ್ತವೆ.

**ಲೇಖಕರ ಪರಿಚಯ:** ಕೇಶವರೆಡ್ಡಿ ಹಂದ್ರಾಳ ಆಧುನಿಕ ಕನ್ನಡ ಸಾಹಿತ್ಯದ ಗಮನಾರ್ಹ ಗದ್ಯ ಬರಹಗಾರ. ಹೊಸ ತಲೆ ಮಾರಿನ ಜಾತ್ಯತೀತವೂ, ಮಾನವೀಯವೂ ಆದ ಹಿನ್ನೆಲೆಯ, ಅನಕ್ಷರಸ್ಥ ಲೋಕದ ಶ್ರಮಜೀವಿಗಳ ಚಿತ್ರವಿಚಿತ್ರ ಅನುಭವಗಳನ್ನು ತಮ್ಮ ಕಥೆ, ಪ್ರಬಂಧಗಳಲ್ಲಿ ವಿವರಿಸಿರುವ ರೀತಿ ಅದ್ಭುತವಾದುದು. ಕೇಶವರೆಡ್ಡಿ ಹಂದ್ರಾಳ ೨೨-೦೭-೧೯೫೮ ರಲ್ಲಿ ಜನಿಸಿದರು. ಅಂತಃಪುರ ಹಂದ್ರಾಳ, ಬರನಾಡಲ್ಲಿ ಬೆಳದಿಂಗಳು, ಜಡೆಗೆ ಗುಲ್ ಮೊಹರ್ ಕೈಗಳು, ಮೋಡ ಕರಗುವ ಮುನ್ನ ಒಂದು ಹಿಡಿ ಮಣ್ಣು ಒಕ್ಕಲ ಒನಪು ಪ್ರಮುಖ ಕೃತಿಗಳು: ೨೦೦೨ ರಲ್ಲಿ ರಾಜ್ಯ ಪ್ರಶಸ್ತಿ ಪಡೆದ ಸಿನಿಮಾ 'ಯುದ್ಧ ಮತ್ತು ಸ್ವಾತಂತ್ರದ' ಕಥೆ, ಸಂಭಾಷಣೆ ಇವರದೇ, 'ಅಗ್ನಿ' ವಾರ ಪತ್ರಿಕೆಯಲ್ಲಿ ಕೃಷಿ ಜಗತ್ತಿನ ವಿಸ್ಮಯಗಳು ಮತ್ತು ಸತ್ಯಗಳು ಎಂಬ ಅಂಕಣಬರಹ ಹೆಚ್ಚು ಜನಪ್ರಿಯವಾಗಿದೆ. ಗ್ರಾಮೀಣ ಬಾಲ್ಯದ ಮುಗ್ಧತೆ ಮತ್ತು ನಗರ ಬದುಕಿನ ವಿಸ್ಮಯ ಅವರ ಬರವಣಿಗೆಯಲ್ಲಿ ಸಮರ್ಥವಾಗಿ ಅಭಿವ್ಯಕ್ತಿಗೊಂಡಿವೆ.

**ಪ್ರಶ್ನೆಗಳು:**

೧. ಗ್ರಾಮ ಸಂಸ್ಕೃತಿಯ ಬಗ್ಗೆ ಲೇಖಕರಿಗೆ ಹೆಮ್ಮೆ ಏಕೆ?

೨ 'ಬಡವರಮನೆ ಊಟ ಚೆಂದ ಶ್ರೀಮಂತರ ಮನೆ ಮಾತು ಚಂದ' ಈ ಗಾದೆ ಮಾತಿನ ಅರ್ಥವೇನು?

೩. ಅತ್ತೆಮ್ಮನ ಬಗ್ಗೆ ಲೇಖಕರ ದೊಡ್ಡಪ್ಪನಿಗಿರುವ ಅಭಿಪ್ರಾಯವೇನು? ವಿವರಿಸಿ.

೪. ಸ್ನಾನ ಮತ್ತು ಕ್ಷೌರದ ಬಗ್ಗೆ ಲೇಖಕರ ಅನುಭವದ ಸ್ವಾರಸ್ಯವನ್ನು ಬರೆಯಿರಿ.

೫. ಅತ್ತೆಮ್ಮನ, ಉಪವಾಸ, ಫಳಾರದ ಬಗ್ಗೆ ವ್ಯಕ್ತವಾಗಿರುವ ಭಿನ್ನ ಭಿನ್ನ ಭಾವನೆಗಳೇನು? ವಿವರಿಸಿ.

೬. ಫಲಾಹಾರದ ಬಗ್ಗೆ ವ್ಯಕ್ತವಾಗಿರುವ ವ್ಯಂಗ್ಯವೇನು? ವಿಶ್ಲೇಷಿಸಿ.

೭. ಅತ್ತೆಮ್ಮನ ಫಲಾಹಾರದ ಸ್ವಾರಸ್ಯವನ್ನು ಬರೆಯಿರಿ

# ಘಟಕ : ೩

# ೧. ಬಿತ್ತನೆ

**–ಕೆ.ಎಸ್. ನಿಸಾರ್ ಅಹಮದ್**

**ಆಶಯ:** ಪ್ರಸ್ತುತ ಸಂದರ್ಭದಲ್ಲಿ ರೈತ ಎದುರಿಸುತ್ತಿರುವ ಸವಾಲುಗಳು ಹಾಗೂ ಅವನ ಸ್ಥಿತಿಯ ನಿರಾಶವಾದಿತನವನ್ನು ಬಿಂಬಿಸುತ್ತದೆ. ಬಿತ್ತಿದಷ್ಟು ಬೆಳೆಯನ್ನು ಕಾಣದೆ ಶ್ರಮಜೀವಿಗಳ ಚಿಗುರೊಡೆಯದ ಕನಸುಗಳ ದೀನಸ್ಥಿತಿ ಇಲ್ಲಿದೆ. ಗಡಿಯಾರ ಲೆಕ್ಕಿಸದೆ 'ಶ್ರಮಯೇವ ಜಯತೆ' ಎಂಬ ಮಂತ್ರ ಪಣವಾಗಿಟ್ಟುಕೊಂಡು ದುಡಿದ ದುಡಿಮೆಯ ಭರವಸೆ ಸುಳ್ಳಾದ ದುರಂತವು ಕವಿತೆಯಲ್ಲಿ ನಿರೂಪಿತವಾಗಿದೆ.

ಬಿತ್ತಿದಂತೆಯೆ ಹೊರತು ಬಯಸಿದಂತಲ್ಲ ಬೆಳೆ;
–ಇದನರಿತೆ ಈ ಹಸುಳೆ ಕಿತ್ತೆಲ್ಲ ಕೂಳೆ, ಕಳೆ
ಹಸನಾಗಿಸದೆ ಹೊಲವ ಕಾಳುಗಳ ಚೆಲ್ಲಿರುವ;
ಮುಂದೆಂದೊ ಈ ನೆಲದ ಕರೆಗೆ ಮುಂಗಾರುಮಳೆ
ಕನಿಕರಿಸಿ ಕೂಡುವುದು; ಚಿಮ್ಮಿ ಬಂಗಾರದೆಳೆ
ಮಿನುಗುವುದು ಎಂಬಾಸೆ ನೇಯುತ್ತಿರುವ;
ಗಡಿಯಾರದವಿರತ ಲೋಲಕದ ಚಟುವಟಿಕೆ
ಯಿಂದ ಎಡಬಿಡದಂತೆ ಗೇಯುತ್ತಿರುವ.
ಸಸಿನೆತ್ತಿ ಎತ್ತರಿಸಿ, ಬೇರುಗಳ ಬಿತ್ತರಿಸಿ
ತೆನೆತೊಡುವ ಗಳಿಗೆಯನೆ ಕಾಯುತ್ತಿರುವ;
ಹೆರಿಗೆಮನೆ ಹೊಸ್ತಿಲಲಿ ಶತಪಥಿಸುವುದ್ವೇಗ
ದಿಂದ ಬಿಸುಸುಯ್ದಿರುವ, ನೋಯುತಿರುವ.
ತಮದ ಪದರಗಳಲ್ಲಿ ತಪಿಸುವಗಣಿತ ಬೀಜ ವೆಲ್ಲ
ಸಫಲಿಸುವಾಸೆ ಸಟೆ; ಕೆಲವು ಹುಳು ಕಣಜ
ಗಳಿಗೆ ಬಲಿ; ಕಲ್ಲಲ್ಲಿ ನುಸುಳಿದವು ತಬ್ಬಲಿ : ಹಲವು ಖೋಜ.
ಮೊಳೆತು, ಸರಿಯಾರೈಕೆಯಿರದೆಷ್ಟೊ ಪಾಪಿ ಶುನ್‌ಶ್ಯೇಪ ;
ಹಲವಕ್ಕೆ ಹುಟ್ಟಿಂದ ಬಂದ ರೋಗ ವಿರೂಪ,
ಜೊತೆಗೆ ತೊನೆಯುವುದೆಷ್ಟೊ ನಕಲಿ ಕಾಳಿನ ಗಷ್ಟು
ಹಕ್ಕಿ ಉಗಿದದ್ದಷ್ಟು ; ಹೊಕ್ಕು ಚೀಲದ ಕೂಡ ಬಂದುದಿಷ್ಟು
ಪಡುಗಾಳಿ ತಂದದ್ದು ; ಈ ಎಲ್ಲ ಅಸಹಜ
ಅನ್ಯಜಾತಿಯ ಬೀಜ ವೃದ್ಧಿಯಾದರು ತ್ಯಾಜ್ಯ. ಅರಗಿ
ಭೂರಸ, ಮಾಗಿ, ಹೊತ್ತು ತುಂಬಿದ ತೆನೆಯ
ತಲುಪುವಗ್ಗಳ ಬೀಜ ಹಲವೆ ಸಾರ್ಥದ ಕೊನೆಯ
ಪೂರ್ಣದೀ ಸಾಧಿತಕೆ ಉಳಿದೆಲ್ಲ ಕಾಳುಗಳ ಪೋಲು, ದುಂದು;
ಶುಕ್ಲಾಣುಕೋಟಿಯಲಿ ಕೋಶಕಂಟುವುದೊಂದೆ ಯೋಗ್ಯಬಿಂದು.
ಇದನರಿತೆ ಈ ಹಸುಳೆ ಕಿತ್ತೆಲ್ಲ ಕಳೆ ಕೊಳೆ
ಕಸನಾಗಿಸೆದೆ ಹೊಲವ ಉತ್ತಿರುವ, ಬಿತ್ತಿರುವ
ಹೆರಿಗೆಮನೆ ಹೊಸ್ತಿಲಲಿ ಶತಪಥಿಸುವುದ್ಗೇಗ
ದಿಂದ ಬಿಸುಸುಯ್ದಿರುವ ಕಾಯುತಿರುವ.

**ಕವಿ ಪರಿಚಯ**: ಕೆ. ಎಸ್. ನಿಸಾರ್ ಅಹಮದ್ (೧೯೩೬–೨೦೨೦) ದೇವನಹಳ್ಳಿಯಲ್ಲಿ ಜನಿಸಿದರು. ಮನಸು ಗಾಂಧಿ ಬಜಾರು, ಸಂಜೆ ಐದರ ಮಳೆ, ನಾನೆಂಬ ಪರಕೀಯ, ನಿತ್ಯೋತ್ಸವ ಮೊದಲಾದ ಕವನ ಸಂಕಲನಗಳು, ಇದು ಬೆಡಗಲ್ಲೊ ಅಣ್ಣ, ಎಂಬ ವಿಮರ್ಶೆ, 'ಮನದೊಂದಿಗೆ ಮಾತುಕತೆ' ಎಂಬ ವಿಚಾರ ಸಾಹಿತ್ಯ ಬರೆದಿದ್ದಾರೆ. ಬಿತ್ತನೆ ಕವಿತೆಯನ್ನು 'ನೆನೆದವರ ಮನದಲ್ಲಿ' ಕವನ ಸಂಕಲನದಿಂದ ಆರಿಸಲಾಗಿದೆ.

**ಪ್ರಶ್ನೆಗಳು:**

೧. ರೈತನ ಶ್ರಮದ ಬದುಕು ಪ್ರಸ್ತುತ ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ?
೨. ಬಿತ್ತಿದಂತೆ ಬೆಳೆಯೇ ಹೊರತು ಬಯಸಿದಂತಲ್ಲ ಎಂಬುವುದು ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ?
೩. ರೈತನ ಶ್ರಮಕ್ಕೆ ಪ್ರತಿಫಲ ಸಿಗದಾದಾಗ ರೈತನ ತಳಮಳ ಎಂತದ್ದು?

# ೨. ತೊಳೆದ ಮುತ್ತು

**–ಕೆರೂರು ವಾಸುದೇವಾಚಾರ್ಯ**

**ಆಶಯ:** ಭಾರತೀಯ ಸಂಸ್ಕೃತಿಯಲ್ಲಿ ವಿವಾಹ ಎಂಬ ಪದ್ಧತಿಗೆ ಪ್ರಮುಖ ಸ್ಥಾನವಿದೆ. ಎರಡು ಮನಸ್ಸುಗಳ ಕೂಡುವಿಕೆಯಿಂದಾಗಿ ಎರಡು ಕುಟುಂಬಗಳು ಇಲ್ಲಿ ಒಂದಾಗುತ್ತವೆ. ಪ್ರೀತಿ, ಕಾಳಜಿ, ನಂಬಿಕೆ ಎಂಬ ಮೌಲ್ಯಗಳು ಕುಟುಂಬಕ್ಕೆ ಆಧಾರವಾಗಿರುತ್ತವೆ. ಯುವ ಜನಾಂಗವು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗುವುದರ ಬದಲು ವಿವಾಹ ಪ್ರಾವಿತ್ರ್ಯವನ್ನು ಉಳಿಸುವ ಕಾರ್ಯಮಾಡಬೇಕಾಗಿದೆ.

ಕರ್ನಾಟಕದಲ್ಲಿ ನಮ್ಮ ಮನೆತನವು ಪ್ರತಿಷ್ಠಿತವಾದದ್ದು. ವರ್ಷಾ ನಮಗೆ ಇನಾಮು ಭೂಮಿಗಳಿಂದ ಎರಡು–ಮೂರು ಸಾವಿರ ರೂಪಾಯಿಗಳ ಉತ್ಪನ್ನ. ನಮ್ಮ ತಂದೆಯವರಾದ ರಾವಬಹಾದ್ದೂರ ಅನಂತರಾಯರು ಡೆಪುಟಿ ಕಲೆಕ್ಟರರಾಗಿ ಪೆನ್‌ಶನ್ನ ತೆಗೆದುಕೊಂಡಿದ್ದರಿಂದ ನಮ್ಮಲ್ಲಿ ಐವತ್ತು, ಅರವತ್ತು ಸಾವಿರ ರೂಪಾಯದ ಗಂಟಿರಬಹುದೆಂದು ಜನರ ತರ್ಕ. ಜನರ ತರ್ಕವಾದರೂ ತಪ್ಪಾದದ್ದಲ್ಲ.

ನಮ್ಮ ತಂದೆತಾಯಿಗಳಿಗೆ ನಾವು ಮೂರು ಮಂದಿ ಮಕ್ಕಳು. ಹಿರಿಯಳಾದ ಸತ್ಯಭಾಮೆಯನ್ನು (ನಾವು ಭಾಮಕ್ಕನೆನ್ನುತ್ತೇವೆ) ಶಹಾಪುರದಲ್ಲಿ ಲಕ್ಷಾಧೀಶರಾದ ತಮ್ಮಣ್ಣನಾಯಕರ ಮಕ್ಕಳಾದ ಶೇಷಗಿರಿನಾಯಕರಿಗೆ ಕೊಟ್ಟಿದೆ. ನಡುವಿನವನು ನಾನು, ದೊಡ್ಡವರ ಮಗನಾದ ನನ್ನ ಮದುವೆಯು ಬೇಗನೆ ಆಯಿತು. “ವೆಂಕಟರಾಯರ ಬುದ್ಧಿ ಬಹಳ ಚುರುಕು; ಈ ಸಾರೆ ಅವರು ಮ್ಯಾಟ್ರಿಕ್ಯೂಲೇಶನ್ನದಲ್ಲಿ ಹೇಗೆ ‘ನಾಪಾಸ’ ಆದರೋ ತಿಳಿಯಲಿಲ್ಲ” ಎಂದು ನನ್ನ ತಂದೆಯವರ ಸುತ್ತಿಪಾಠಕರು ಹಳಹಳಿಸಿದರು. ಈ ಮೊದಲೇಯೇ ನಾನು ಎರಡು ಸಾರೆ ‘ನಾಪಾಸ’ ಆಗಿದ್ದೆನು. “ಏನು ದೊಡ್ಡ ಮಾತು? ಪಾಸಾಗಿದಿದ್ದರೆ ಇಲ್ಲ. ಪರೀಕ್ಷೆ ಪಾಸಾದರೆಯೇ ವೆಂಕಟೇಶನ ಹೊಟ್ಟೆ ತುಂಬುತ್ತದೆ ಅಂತಲ್ಲ!” ಎಂದು ಪುತ್ರವತ್ಸಲರಾದ ನನ್ನ ತಂದೆಯವರು ಹೇಳಿದರು. ತಂದೆತಾಯಿಗಳು ನನ್ನ ಮೇಲೆ ಹೆಚ್ಚಾದ ಮಮತೆ ಮಾಡುತ್ತಿರುವದರಿಂದಲೂ ನಾನು ಗೃಹಸ್ಥಾಶ್ರಮಿಯಾಗಿ ೩–೪ ವರ್ಷಗಳಾಗಿರುದರಿಂದಲೂ ನಾನು ಮೂರು ಸಾರೆ ಮ್ಯಾಟ್ರಿಕ್ಯುಲೇಶನ್‌ದಲ್ಲಿ ನಾಪಾಸ ಆದೆನು. ಮುಂದಿನ ವರ್ಷ ನಾನೂ ನನಗಿಂತ ನಾಲ್ಕು ವರ್ಷ ಚಿಕ್ಕವನಾದ ನನ್ನ ತಮ್ಮ ಮಾಧವನೂ ಕೂಡಿಯೇ ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆವು. ಮಾಧವನು ತೇರ್ಗಡೆ ಹೊಂದಿದವರಲ್ಲಿ ಮೊದಲನೆಯವನು; ಶಂಕರಸೇಟ್ ಸ್ಕಾಲರನೂ ಆದ್ದರಿಂದ ಅವನ ಪ್ರಶಂಸೆಗೆ ಅಳತೆಯಿರಲಿಲ್ಲ. ಆಗಲಿ! ನಿಂದಕರನ್ನು ನೋಡಿರಿ. ಅವರು ಮಾಧವನ ಸ್ತುತಿ ಮಾಡಬೇಕಾದರೆ ನನ್ನನ್ನು ಹಳಿಯಬೇಕೆ? ನಾನಾದರೂ ‘ಪಾಸ್’ ಆದವರಲ್ಲಿ ಒಂಬತ್ತನೆಯವನು.

ಕಾಂತಾ ಸಹವಾಸದ ವ್ಯಾಮೋಹಕ್ಕಾಗಿಯೂ ಸ್ನೇಹಿತರೊಡನೆ ವಿನೋದದ ಹರಟೆ ಕೊಚ್ಚಿದ್ದಕ್ಕಾಗಿಯೂ ನನ್ನ ಅವಸ್ಥೆ ಹೀಗಾಯಿತೆಂಬ ವ್ಯಸನದಿಂದ ನಾನಾದರೂ ಮುಂಬಯಿಯಲ್ಲಿ ನಿಂತು ಒಳ್ಳೇ ಮನಸ್ಸು ಕೊಟ್ಟು ವಕೀಲೀ ಪರೀಕ್ಷೆಯ ಅಭ್ಯಾಸ ಮಾಡಿದ್ದರಿಂದ ವರುಷ ತಿರುಗುವದರೊಳಗಾಗಿಯೇ ನಾನು ವಕೀಲನಾದೆನು.ಕೇಳುವದೇನು! ಮಾಧವನು ಪೀ ಈ ಪರೀಕ್ಷೆಯಲ್ಲಿ ಅಗ್ರಸ್ಥಾನವನ್ನು ಹೊಂದಿದರೂ ಅವನು ವಿದ್ಯಾರ್ಥಿಯೇ! ನಾನು ತಿಂಗಳೊಂದಕ್ಕೆ ನೂರು ನೂರೈವತ್ತು ರೂಪಾಯಿ ಗಳಿಸುವ ವಕೀಲನು.ಹೀಗೆ ನಮ್ಮ ಮನೆಯಲ್ಲಿ ಸುಖವೂ ಆನಂದವೂ ನೆಲೆಗೊಂಡವು.

ನಾವು ಕರ್ನಾಟಕದ ದೇಶಸ್ಥರು; ಮನೆಯಿಂದ ನೆಟ್ಟಗಿದ್ದವರು; ಇಂಥವರ ಮನೆಯಲ್ಲಿದ್ದ ನಮ್ಮ ಮಾಧವನು ಅವಿವಾಹಿತನಾಗಿ ಉಳಿಯುವದು ಹೇಗೆ? ಇಷ್ಟು ದಿವಸ ಮಾಧವನ ಮದುವೆಯಾಗದೆ ಉಳಿದದ್ದೇ ಹೆಚ್ಚಿನ ಮಾತು. ಹೈದರಾಬಾದದಲ್ಲಿ ಕರೋಡಗಿರಿಯ ಮೋಹತಮೀಮರಾದ ಸುಬ್ಬರಾಯರು ನಮ್ಮ ತಂದೆಯವರ ಬಾಲ್ಯದ ಸ್ನೇಹಿತರು. ತಮ್ಮ ಮಗಳನ್ನು ಮಾಧವನಿಗಾಗಿ ಸ್ವೀಕರಿಸಬೇಕೆಂದು ಸುಬ್ಬರಾಯರು ನಾವಿದ್ದಲ್ಲಿಗೆ ಬಂದು ಬಹುಪರಿಯಾಗಿ ಹೇಳಿಕೊಂಡು ಐದು ಸಾವಿರ ರೂಪಾಯಿ ವರದಕ್ಷಿಣೆಯಾಗಿ ಕೊಡಲೊಪ್ಪಿದ್ದರಿಂದ ನಮ್ಮ ತಂದೆಯವರು ಒಪ್ಪಿಕೊಂಡರು. ನಮ್ಮ ತಾಯಿಯವರು ಇನ್ನೂ ಕೆಲವು ‘ಬಾಬು’ಗಳನ್ನು ಹೆಚ್ಚಾಗಿ ಬೇಡಿದರೂ ಅವುಗಳನ್ನು ಸುಬ್ಬರಾಯರು ಕೊಡಲೊಪ್ಪಿದ್ದರಿಂದ ಮಾಧವನ ಮದುವೆಯ ನಿಶ್ಚಯವೇ ಆಗಿಹೋಯಿತು.

ಕಥೆ–ಕಾದಂಬರಿ–ನಾಟಕಾದಿಗಳನ್ನು ಓದಿದವನಾದ ಮಾಧವನು “ಇಂಗ್ಲಂಡದಲ್ಲಿ ತರುಣರು ಇಪ್ಪತ್ತೆಂಟು ಮೂವತ್ತು ವರ್ಷದ ಪ್ರಾಯದವರಾಗುವವರೆಗೆ ಲಗ್ನಮಾಡಿಕೊಳ್ಳುವುದಿಲ್ಲ. ಅವರು ತಮ್ಮ ಇಚ್ಛೆಗೆ ಬಂದ ವಧುವನ್ನೇ ಮದುವೆ

ಮಾಡಿಕೊಳ್ಳುತ್ತಾರೆ. ಹೀಗೆ ಬಂಧಿಸಿ ನನ್ನ ಮದುವೆ ಮಾಡುವದು ಸರ್ವಥಾ ಅನ್ಯಾಯವಾದದ್ದು" ಎಂದು ನನಗೂ ತಂದೆಯವರಿಗೂ ಕೂಡಿಯೇ ಬರಕೊಂಡನು. ನಮ್ಮ ತಂದೆಯವರು ತಾವು ಮಾಡಿದ ನಿಶ್ಚಯವನ್ನು ಮುರಿಯುವರೆ? ಕನ್ನೆಯು ಶ್ರೇಷ್ಠಳಾಗಿರುವಳೆಂದೂ ಸುಬ್ಬರಾಯರಂಥ ಮನೆತನಸ್ಥರೊಡನೆ ಸಂಬಂಧ ಮಾಡುವದು ಶ್ಲಾಘ್ಯವಾದದ್ದೆಂದೂ ಬರೆದದಲ್ಲದೆ ತಮ್ಮ ಆಜ್ಞೆಯನ್ನು ಉಲ್ಲಂಘಿಸಿದ್ದಾದರೆ ಕಾಲೇಜ ಬಿಟ್ಟು ಮನೆಗೆ ಬರಬೇಕಾದೀತೆಂದು ತಂದೆಯವರು ಮಾಧವನಿಗೆ ನಿಷ್ಠುರವಾಗಿ ಬರೆದದ್ದರಿಂದ ಅವನು ಅನಿರ್ವಾಹಕ್ಕಾಗಿ ಸುಮ್ಮನಾದನು.

ಮನೆಯಲ್ಲಿ ಮಾಧವನ ಮದುವೆಯ ಸಮಾರಂಭವು ಅಟ್ಟಹಾಸದಿಂದ ನಡೆದಿತ್ತು. ಬುದ್ಧಿಶಾಲಿಯೂ, ದೃಢಾಂಗನೂ, ಸುಂದರನೂ ಆದ ವರನನ್ನು ಕಂಡು, ವಧೂಪಕ್ಷದವರಿಗೆ ಅತಿಶಯವಾದ ಸಂತೋಷವಾಗಿತ್ತು. ನಮ್ಮ ತಾಯಿಗೂ ಭಾಮಕ್ಕನಿಗೂ ದಾಸಾನುದಾಸರಾಗಿ ನಡೆದುಕೊಳ್ಳುತ್ತಿದ್ದರು. ಕಳಸಗಿತ್ತಿಯಾದ ಭಾಮಕ್ಕನ ಜಂಬವನ್ನು ಹಿಡಿಯಬೇಕಾದರೆ, ಸುಬ್ಬರಾಯರಿಗೂ ಅವರ ಪತ್ನಿಗೂ ಸಾಕುಬೇಕಾಗಿ ಹೋಯಿತು.ಈ ಲಗ್ನ ಸಮಾರಂಭದಲ್ಲಿ ಎಲ್ಲ ಮನಸ್ಸಿನಲ್ಲಿಯು, ಉಲ್ಲಾಸ ಎಲ್ಲರಿಗೂ ಆನಂದವಾಗಿರುವಾಗ ಮಾಧವನೊಬ್ಬನೇ ಚಿಂತಾಕ್ರಾಂತನಾಗಿ ಕಂಡನು.

ಕನ್ನೆಯ ರೂಪವು ಹೇಗಿರುವದೋ ಎಂದು ನೋಡುವನೆಂದರೆ ಆ ಹುಡುಗಿಯು ಕೆಳಗೆ ಮೋರೆ ಹಾಕಿದವಳು ಅದನ್ನು ಮೆಲಕ್ಕೆ ಎತ್ತಿದ್ದಿಲ್ಲ. ಮೊದಲನೆಯ ದಿವಸ ವಧುವು ಮಾಧವನ ಮುಖವನ್ನು ನಿರೀಕ್ಷಿಸಿ ನೋಡುತ್ತಿದ್ದಳಂತೆ! ಆಗ ಊಟಕ್ಕೆ ಬಂದ ಪುರೋಹಿತಗಿತ್ತಿಯಾದ ಭಾಗಮ್ಮನು ಅದನ್ನು ಕಂಡು,"ಅಯ್ಯೆ! ಏನು ಹುಡುಗಿ ಇದು? ಈಗಲೆ ಗಂಡನ ಮೋರೆಯನ್ನು ಹುಳುಹುಳು ನೋಡುತ್ತಾಳೆ" ಎಂದು ಅಂದಳಂತೆ. ಆ ಮಾತು ಕೇಳಿದಾಗಿನಿಂದ ಮದುಮಗಳು ತಿರುಗಿ ಮೇಲಕ್ಕೆ ಮೋರೆಯನ್ನೆತ್ತಿದ್ದಿಲ್ಲ. ಸಿಕ್ಕಸಿಕ್ಕವರು ಎರೆದದ್ದರಿಂದ ಮದುಮಗಳ ತಲೆಯಲ್ಲಿ ತಪತಪ ಎಣ್ಣೆ ಬಸಿಯುತ್ತಿತ್ತು. ಮೈಯಲ್ಲ ಎಣ್ಣೆ ಅರಿಸಿನಗಳ ಜಿಗಿಯು. ಅಷ್ಟಪತ್ರಿಯು ಪುರೋಹಿತನಿಗೆ ಹೋಗಬೇಕಾದ್ದರಿಂದ ಒಂದೂ ಮುಕ್ಕಾಲು ರೂಪಾಯಿಯ ಬೆಲೆಯುಳ್ಳ ಅರಿಸಿನ ಬಣ್ಣದ್ದೊಂದು ವಸ್ತ್ರವನ್ನು ಆ ಕನ್ನೆಗೆ ಉಡಿಸಿದ್ದರು. ಇಷ್ಟು ಸೌಭಾಗ್ಯದ ಮೇಲೆ ವಧುವಿನ ಹೆಸರು ಗುಂಡಕ್ಕನು.

ಸಾರಾಂಶ, ಹೆಂಡತಿಯು ಮಾಧವನ ಮನಸ್ಸಿಗೆ ಎಳ್ಳಷ್ಟಾದರೂ ಬರಲಿಲ್ಲ. ಭಾಮಕ್ಕನು ಆಗ್ರಹದಿಂದ ಜಗ್ಗಿಕೊಂಡು ಹೋದರೆ ಮಾತ್ರ ಊಟಣಿಗೆ ಹೋಗುವನು. ಗುಂಡಕ್ಕನು ತಪ್ಪು ತಡೆಯಾದ ಮರಾಠೀ ಒಗಟುಗಳನ್ನು ಹಾಕಿ ಗಂಧ ಹಚ್ಚಲಿಕ್ಕೆ ಬಂದರೆ ಅವನು ಕೈ ಕೊಡಲಿಲ್ಲ. "ಮಾಧವಾ, ನಿನ್ನ ಮಾವನು ಕೊಟ್ಟ ಪೀತಾಂಬರವು ಚೆನ್ನಾಗಿದೆ ಅಲ್ಲವೆ? ನೋಡು ಬಾ!" ಎಂದು ನಮ್ಮ ತಾಯಿಯು ಕರೆದರೆ "ರಮಾಕಕ್ಕೀ, (ನಮ್ಮ ತಾಯಿಗೆ ನಾವು ರಮಾಕಕ್ಕೀ ಎಂದೆನ್ನುತ್ತೇವೆ) ರಮಾಕಕ್ಕಿ, ಈ ಸುದ್ದಿಯನ್ನು ನನ್ನ ಮುಂದೆ ತೆಗಿಯಬೆಡ. ಪೀತಾಂಬರವನ್ನು ಮದುವೆ ಮಾಡಿಕೊಳ್ಳುವದದೇನು?" ಅಂದನು.

ಹೀಗೆ ಮಾಧವನು ಮದುವೆ ಮುಗಿಯುವವರೆಗೆ ದುಮುದುಮು ಉರಿಯುತ್ತಿದ್ದನು. ಅಲ್ಪರೆದು ಹೇಳಿಕೊಂಡರೂ ತಂದೆಯವರು ತನ್ನ ವಿನಂತಿಯನ್ನು ಲಕ್ಷಿಸದೆ ತನಗೆ ಇಂಥದೊಂದು "ಕರಡೆ"ಯನ್ನು ಗಂಟು ಹಾಕಿದರೆ? ಒಳ್ಳೇದು, ಇದರ ಪ್ರಾಯಶ್ಚಿತ್ತವನ್ನು ಅವರಿಗೆ ಉಣ್ಣಿಸದಿದ್ದರೆ ನನ್ ಹೆಸರೇ ಮಾಧವನಲ್ಲ; ಆಗ್ರಹಿಯಾದ ತಂದೆಯ ಮಗನು ಆಗ್ರಹಿಯಾಗದಿದ್ದರೆ ಒಪ್ಪುವದುಂಟೆ? ಎಂದು ನೆನಿಸಿ ಅವನು ಕಾಲೇಜಕ್ಕೆ ಹೊರಟುಹೋದನು.

ಮುಂದಿನ 'ಮೇ' ತಿಂಗಳಲ್ಲಿ ಮಾಧವನು ಊರಿಗೆ ಬರಲಿಲ್ಲ. ತಂದೆಯವರು ಆಗ್ರಹದಿಂದ ಬಾರೆಂದು ಬರೆದರೆ ಅವನು ಊರಿಗೆ ಬಂದ ಮರುದಿವಸವೇ ಮರಳಿ ಕಾಲೇಜಕ್ಕೆ ಹೋದನು. ಮಾಧವನು ಅಳಿಯತನಕ್ಕೆ ಅತ್ತೇ ಮನೆಗೆ ಹೋಗಲಿಲ್ಲ. ಹೆಂಡತಿ ಮೈನೆರೆದರೆ ಫಲಶೋಭನಕ್ಕೆ ಊರಿಗೆ ಬರಲಿಲ್ಲ. ತಂದೆಯವರು ಬೇರೊಂದು ಮುಹೂರ್ತ ತೆಗೆದು ಮಾಧವನಿಗೆ ಸಿಟ್ಟುಮಾಡಿ ಬರಹೇಳಿ ಕಳಿಸಿದರೆ," ನನಗೆ ಇನ್ನೊಂದು ಮದುವೆ ಮಾಡಿದರೆ ಮಾಡಿರಿ; ಇಲ್ಲದಿದ್ದರೆ ನೀವು ಮಾಡುವ ಮಂಗಲಕಾರ್ಯಗಳು ನನಗೆ ಬೇಕಾಗಿಲ್ಲ" ಎಂದು ಪ್ರತ್ಯುತ್ತರ ಕೊಟ್ಟನು.

ತಂದೆಯವರಿಗೆ ಕೋಪ ಬಂದಿತು; ಆದರೆ ಮಗನನ್ನು ಬೈಯುವುದು ಹೇಗೆ? ಇತ್ತ ಸುಬ್ಬರಾಯರ ಪತ್ರಗಳು ಮೇಲಿಂದ ಮೇಲೆ ಬರುತ್ತಿದ್ದವು; ಇತ್ತ ಮಗನು ಮಾತು ಕೇಳಲ್ಲೊಲ್ಲನು. ಎಮ್.ಎ. ಆಗಿ ಪ್ರಬುದ್ಧನಾಗಿರುವ ಮಗನನ್ನು ಹೆಚ್ಚಿಗೆ ಕೆಣಕಿ ನೋಡಿ ಫಲವೇನು? ಸುಖಿಯಾಗಿದ್ದ ನಮ್ಮ ರಾಯರಿಗೆ ವೃದ್ಧಾಪ್ಯದಲ್ಲಿ ಇದೊಂದು ದೊಡ್ಡ ಚಿಂತೆಯಾಯಿತು. ಇದ್ದ ಸೊಸೆಯು ರೂಪವತಿಯೂ ಗುಣವತಿಯೂ ಆಗಿದ್ದಳು. ಇನ್ನೊಂದು ಮದುವೆ ಮಾಡುವದೆಂತು? ಒಬ್ಬರ ಮಗಳ ಗೋಳು ಕಟ್ಟಿಕೊಳ್ಳುವದಕ್ಕಿಂತಲೂ ಮಗನು ಹೆಂಡತಿಯಿಲ್ಲದೆ ಕುಳಿತರೂ ಚಿಂತೆಯಿಲ್ಲವೆಂದು ತಿಳಿದು ಅವರು ಮಾಧವನ ದ್ವಿತೀಯ ವಿವಾಹದ ಗೊಡವೆಗೆ ಹೋಗಲಿಲ್ಲ.

## ೨

ತಂದೆಯವರ ಪ್ರಕೃತಿಯು ದಿನೇದಿನೇ ಅಸ್ವಸ್ಥವಾಗುತ್ತೆ ನಡೆದದ್ದರಿಂದ ನಾವು ಗ್ರಾಮಾಂತರಕ್ಕೆ ಹೋಗಿ ಇರಬೇಕೆಂದು ವೈದ್ಯರು ಹೇಳಿದರು. ಆ ಮೇರೆಗೆ ನಾವೆಲ್ಲರೂ ಬೆಂಗಳೂರಿಗೆ ಹೋದೆವು. 'ಬಸವನಗುಡಿ' ಎಂಬ ಹೊಸಪೇಟೆಯಲ್ಲಿ ನಮ್ಮ ಪ್ರಾಂತದ ಜನರ ವಸತಿ ಬಹಳವಾಗಿರುವದರಿಂದ ನಾವು ಅಲ್ಲಿಯೇ ಒಂದು ರಮ್ಯವಾದ ಮನೆ ಹಿಡುಕೊಂಡು ಇದ್ದೆವು. ಬೆಂಗಳೂರಿನ ನೀರು ಗಾಳಿಗಳು ಒಳ್ಳೇ ಹಿತಕರವಾಗಿರುವದರಿಂದಲೂ, ಅಲ್ಲಿಯ ಶೋಭೆಯು ಒಳ್ಳೇ ರಮಣೀಯವಾಗಿರುವದರಿಂದಲೂ, ಅಲ್ಲಿರುವ ಬೇರೆ ಸುಖಸಾಧನಗಳು ಸಮೀಚೀನವಾಗಿರುವದರಿಂದಲೂ ತಿಂಗಳು ಹದಿನೈದು ದಿವಸಗಳಲ್ಲಿಯೇ ತಂದೆಯವರ ಪ್ರಕೃತಿಯು ವಾಸಿಯಾಗುತ್ತ ಬಂದಿತು.

ನಾವು ಬೆಂಗಳೂರಿಗೆ ಬಂದ ವರ್ತಮಾನವನ್ನು ಕೇಳಿ ನಮ್ಮ ಭಗಿನೀ ಪತಿಗಳಾದ ಶೇಷಗಿರಿನಾಯಕರಿಗೂ ಅಲ್ಲಿಗೆ ಬರುವ ಇಚ್ಛೆಯಾಯಿತು. ಶೇಷಗಿರಿ ನಾಯಕರು ಮೂವತ್ತೈದು ವರುಷದ ಪ್ರಾಯದವರಾದ ತರುಣರು. ಅವರು ದೃಢಾಂಗರಾಗಿದ್ದು ಮೈಬಣ್ಣ ಸಾದಗಪ್ಪಿನದಾಗಿತ್ತು. ನಾಯಕರ ಮುಖದ ಮೇಲೆ ಲಕ್ಷ್ಮಿಯ ಕಳೆಯು ಉಕ್ಕುತ್ತಿತ್ತು. ಹಿರಿಯರು ವರುಷಾ ನಿರಾತಂಕ ಏಳೆಂಟು ಸಾವಿರ ರೂಪಾಯಿ ಗಳಿಸುವರು. ಹೊಟ್ಟೆಗಿಲ್ಲದವರು ವಿದ್ಯಾವ್ಯಾಸಂಗವನ್ನು ಮಾಡತಕ್ಕದ್ದೆಂದು ತಮ್ಮಣ್ಣನಾಯಕರ ಅಭಿಪ್ರಾಯವಾದದ್ದರಿಂದ ಶೇಷಗಿರಿ ನಾಯಕರನ್ನು ದೊಡ್ಡೂರ ಶಾಲೆಗೆ ಕಳಿಸಲಿಲ್ಲ. ಅಂಕಿ ಮೊಗ್ಗೆ ಅಕ್ಷರ ಬರಹಗಳ ಪೂರ್ತೆ ಶೇಷಗಿರಿ ನಾಯಕರ ವಿದ್ಯಾಭ್ಯಾಸವಾಗಿತ್ತು. ಕನ್ನಡ ಮರಾಠೀ ಅಕ್ಷರಗಳನ್ನು ಅವರು ಮುಕ್ತಾಫಲದಂತೆ ಬರೆಯುತ್ತಿದ್ದರು. ವ್ಯಾಪಾರದ ಲೆಕ್ಕಗಳನ್ನು ಅವರು ತಪ್ಪಿಲ್ಲದೆ ಬಹು ಜಾಗ್ರತೆಯಾಗಿ ಮಾಡುತ್ತಿದ್ದರು. ಶೇಷಗಿರಿನಾಯಕರು ಒಳ್ಳೇ ತೀಕ್ಷ್ಣವಾದ ಬುದ್ಧಿಯುಳ್ಳವರಾಗಿದ್ದರಿಂದ ತಮಗೆ ಉಚ್ಚವಾದ ಶಿಕ್ಷಣವು ದೊರಕಲಿಲ್ಲವೆಂದು ಅವರು ಆಗಾಗ್ಗೆ ವಿಷಾದಪಡುತ್ತಿದ್ದರು. ಪದವೀಧರರಂತೆ ಪೋಷಾಕು ಮಾಡಿಕೊಳ್ಳುವುದೂ ಆ ಜನರಂತೆ ವರ್ತಿಸುವದೂ ಅವರಿಗೆ ಸೇರುತ್ತಿತ್ತು. ಉತ್ತಮೋತ್ತಮವಾದ ಜರದ ರುಮಾಲಗಳನ್ನು ಅವರು ಸುತ್ತಿಕೊಳ್ಳುತ್ತಿದ್ದರು. ಬೆಲೆಯುಳ್ಳ ಕೋಟು ಪಾಟಲೂನುಗಳ ಜೊತೆಗಳು ಅವರಲ್ಲಿ ಹತೆಂಟು ಇದ್ದವು. ಕಣ್ಣುಗಳು ಚೆನ್ನಾಗಿ ಕಾಣುತ್ತಿದ್ದರೂ ಅಲಂಕಾರಕ್ಕಾಗಿ 'ಲಾರೆನ್ಸ ಎಂಡ ಮೇಯೊ' ಕಂಪನಿಯಿಂದೆ ಐವತ್ತು ರೂಪಾಯದ ಉಪನೇತ್ರಗಳನ್ನು ತರಿಸಿದ್ದರು. ಅವರಿಗೆ ಗಡಿಯಾರದ ಅವಶ್ಯಕತೆ ಇಲ್ಲದಿದ್ದರೂ ಸುಶಿಕ್ಷಿತರು ಗಡಿಯಾರವಿಲ್ಲದೆ ಇರಕೂಡದಾದದ್ದರಿಂದ ಅವರ ಕಿಶೆಯಲ್ಲಿ ಚಿನ್ನದ ಗಡಿಯಾರವೂ ಅದಕ್ಕೆ ರತ್ನ ಖಚಿತವಾದ ಬಂಗಾರದ ಅಂದವಾದ ಸರಪಣಿಯೂ ಇತ್ತು. ವಾಚ್-ಚೇನ, ಮೀಟಿಂಗ-ಲೆಕ್ ಚರ, ಲೇಡಿಜ-ಜೆಂಟ್ಲಮೆನ್, ಗುಡ್‌ಮಾರ್ನಿಂಗ ಮುಂತಾದ ಅವಶ್ಯಕವಾದ ಅನೇಕ ಇಂಗ್ಲೀಷ ಶಬ್ದಗಳು ಅವರಿಗೆ ಬರುತ್ತಿದ್ದು ಅವುಗಳನ್ನು ಅವರು ಪ್ರಸಂಗ ಬಂದಾಗ ಉಪಯೋಗಿಸದಲೆ ಬಿಡುತ್ತಿದ್ದಿಲ್ಲ.

ಇರಲಿ ಶೇಷಗಿರಿನಾಯಕರು ಜಾತ್ಯಾ ಚತುರರೂ, ವೆಚ್ಚಮಾಡುವದರಲ್ಲಿ ಸಡಿಲು ಕೈಯುಳ್ಳವರೂ ಆಪ್ತರಿಷ್ಟರೊಡನೆ ಪ್ರೇಮದಿಂದ ನಡಕೊಳ್ಳುವವರೂ ಆಗಿದ್ದರು. ಗಂಡಹೆಂಡರು ಪ್ರೇಮದಿಂದಿದ್ದು ಆದರರೊಂದಿಗೆ ವರ್ತಿಸುತ್ತಿದ್ದರು. ಅವರಿಗೆ ರಂಗಣ್ಣನೆಂಬ ನಾಲ್ಕೈದು ವರ್ಷದ ಬಾಲಕನಿದ್ದನು. ಹೀಗೆ ಸುಖಿಯಾಗಿದ್ದ ಶೇಷಗಿರಿನಾಯಕರು ಸಪತ್ನೀಕರಾಗಿ ಬೆಂಗಳೂರಿನಲ್ಲಿ ಕೆಲವು ದಿವಸ ಆನಂದದಲ್ಲಿ ಕಳೆಯಬೇಕೆಂದು ಬಂದಿದ್ದರು.ಅವರಾದರೂ ನಮ್ಮ ಮನೆಯ ಸಮೀಪದಲ್ಲಿರುವದೊಂದು ಚಿಕ್ಕ ಬಂಗಲೆ ತೆಗೆದುಕೊಂಡು ಇರಲಾರಂಭಿಸಿದರು.

ಒಂದು ದಿವಸ ಪ್ರಾತಃಕಾಲದಲ್ಲಿ ನಾನೂ ನಮ್ಮ ತಮ್ಮನಾದ ಮಾಧವ ರಾಯನೂ (ಮಾಧವನು ಎಮ.ಎ. ಆದ ಬಳಿಕ ನಾವೆಲ್ಲರೂ ಅವನಿಗೆ ಮಾಧವರಾಯನೆನ್ನುತ್ತೇವೆ) ಕೂಡಿ ಭಾಮಕ್ಕನ ಮನೆಗೆ ಉಪಹಾರಕ್ಕೆ ಹೋದೆವು. ಅಲ್ಲಿಯ ವ್ಯವಸ್ಥೆ ನೋಡಿರಿ: ಬಂಗಲೆಯ ಪ್ರಶಸ್ತವಾದ ಒಂದು ಭಾಗದಲ್ಲಿ ಒಂದು ವರ್ತುಲಾಕಾರದ ಮೇಜು ಇಟ್ಟಿದ್ದು ಅದರ ಸುತ್ತಲೂ ನಾಲ್ಕಾರು ಅಂದವಾದ ಕುರ್ಚಿಗಳನ್ನಿಟ್ಟಿದ್ದರು. ಚಿತ್ರಮಯವಾದ ಬನಾತವನ್ನು ಮೇಜಿನ ಮೇಲೆ ಹಾಸಿದ್ದು ಮಧ್ಯದಲ್ಲಿ ಪುನಗು ಕಸ್ತೂರಿಯ ಊದಿನ ಕಡ್ಡಿಗಳುಳ್ಳ ಬೆಳ್ಳಿಯ ಗಿಡವು ಸುಗಂಧಮಯವಾದ ಹೊಗೆಯನ್ನು ತೂರುತ್ತಿತ್ತು. ಬೆಳ್ಳಿಯ ಹೂಜಿಗಳಲ್ಲಿ ವಿವಿಧವರ್ಣದ ಪುಷ್ಪಗಳನ್ನಿರಿಸಿ ಅವುಗಳನ್ನು ಊದಿನ ಕಡ್ಡಿಯ ಗಿಡದ ಸುತ್ತಲೂ ಪರಿಷ್ಕಾರವಾಗಿ ಇಟ್ಟಿದ್ದರು. ನಾಲ್ಕು ಬೆಳ್ಳಿಯ ಹರಿವಾಣಗಳಲ್ಲಿ, ಕಂಡರೆ ಬಾಯಿಗೆ ನೀರು ಬರುವಂಥ ಉಪಹಾರದ ಪಕ್ವಾನ್ನಗಳು ಒಳಿತಾಗಿ ಶೋಭಿಸುತ್ತಿದ್ದವು. ಹೆಚ್ಚಿದ ಸೇಬುಗಳ ತುಂಡುಗಳೂ, ಸುಲಿದ ಕಿತ್ತಳೆಗಳ ಪಳುಕುಗಳೂ, ದ್ರಾಕ್ಷದ ಗೊಂಚಲುಗಳೂ, ಮಾಣಿಕದ ಪ್ರಭೆಯನ್ನು ಹೀಯಾಳಿಸುವಂಥ ದಾಳಿಂಬದ ಬೀಜಗಳ ಗೋಪುರಗಳೂ ಅನೇಕ ಪ್ರಕಾರದ ಪಾತ್ರಗಳಲ್ಲಿ ತುಂಬಿಕೊಂಡಿದ್ದವು.

ನಾನೂ, ಮಾಧವನೂ, ನಾಯಕರೂ, ಭಾಮಕ್ಕನೂ ಹೀಗೆ ನಾಲ್ಕೂ ಜನರು ಉಪಹಾರಕ್ಕೆ ಕುಳಿತೆವು. "ನಾಯಕರ, ನಿಮ್ಮಲ್ಲಿಯ ವ್ಯವಸ್ಥೆ ಚನ್ನಾಗಿದೆ. ಆದರೂ ನಿಮಗಿನ್ನೂ ಯುರೋಪಿಯನ್ ವ್ಯವಸ್ಥೆಯು ಚೆನ್ನಾಗಿ ಸಾಧಿಸಿಲ್ಲ. ಪದಾರ್ಥಗಳನ್ನೆಲ್ಲ ಹೀಗೆ ಒಮ್ಮೆಲೇ ತಂದು ಒಟ್ಟತಕ್ಕದ್ದಲ್ಲ. ಬೆಳ್ಳಿಬಂಗಾರದ ಪಾತ್ರೆಗಳಿಗಿಂತ ಚೀನಾ ಭಾಂಡಗಳು ಪ್ರಶಸ್ತವಾದವುಗಳು. ಹೀಗೆ ಇನ್ನೂ ಅನೇಕ ಸೂಚನೆಗಳನ್ನು ಮಾಡಬಹುದು" ಎಂದು ಮಾಧವರಾಯನು ಹೇಳಿದನು.

"ಸೂಚನೆ ಮಾಡಲಿಕ್ಕೆ ಅಡ್ಡೀ ಇಲ್ಲ, ಆದರೂ ಭಾಟವಡೇಕರಕರಂದೀಕರ,ಅಜರೇಕರ,ಗೋಖಲೆ,ಜೋಗಳೇಕರ ಮುಂತಾದ ಪಾಶ್ಚಾತ್ಯ ಸುಧಾರಣಾಗ್ರಾಹಿಗಳ ಮನೆಯಲ್ಲಿ ಇಂಥದೇ ವ್ಯವಸ್ಥೆ ಇರುವದು"ಎಂದು ನಾಯಕರು ಹೇಳಿದರು. "ಯಾವದೇ ಮಾತಿನಲ್ಲಿಯಾಗಲಿ, ಪ್ರಗತಿಗೆ ಪ್ರತಿಕೂಲವಾದ ಮಾತುಗಳನ್ನು ತೆಗೆದುಹಾಕುವದೂ ಅದಕ್ಕೆ ಅನುಕೂಲವಾದವುಗಳನ್ನು ಸಂಗ್ರಹಿಸುವದೂ ಸುಧಾರಣೆಯೆಂದೆನಿಸುವದಷ್ಟೇ? ಈ ನಮ್ಮ ಉಪಹಾರದ ಉಪಕರಣಗಳಲ್ಲಿ ಸೌಕರ್ಯಕ್ಕೆ ಪ್ರತಿಕೂಲವಾದವುಗಳಾವುವು ಹೇಳಬಾರದೆ, ಪಂಡಿತಜೀ?" ಎಂದು ನಾನು ಮಾಧವರಾಯನನ್ನು ಕುರಿತು ಪ್ರಶ್ನೆಮಾಡಿದೆನು.ಮಾಧವನು ತುಸು ಚಕಿತನಾಗಿ "ಅಣ್ಣಾ, ಸುಧಾರಣೆಯ ಮಾತುಗಳು ಬೇರೆ, ಶಿಷ್ಟಾಚಾರದ ಮಾತುಗಳು ಬೇರೆ. ಬ್ರೆಕಫಸ್ಟ (ಉಪಹಾರ), ಟೀ (ಚಹ) ಮುಂತಾದ ಮಾತುಗಳಲ್ಲಿ ನಾವು ಯುರೋಪಿಯನ್ ಪದ್ಧತಿಯನ್ನೇ ಅನುಕರಿಸಬೇಕು. ಅವರಲ್ಲಿಯ ಕೆಲವು ಆಚಾರಗಳು ಅಪದ್ಧವಾಗಿ ಕಂಡರೂ ಶಿಷ್ಟಾಚಾರವೆಂದು ನಾವಾದರೂ ಅವರಂತಯೇ ಮಾಡತಕ್ಕದ್ದು" ಎಂದು ಹೇಳಿದನು.

"ಏನು? ಯುರೋಪಿಯನ್ನರೇ ಶಿಷ್ಟರು, ಅವರು ಮಾಡುವದೇ ಶಿಷ್ಟಾಚಾರವೆ? ನಾವೇಕೆ ಶಿಷ್ಟರಲ್ಲ? ನಮ್ಮ ಆಚಾರಗಳೇ ಶಿಷ್ಟಾಚಾರವೆಂದು ಅವರು ಅನುಕರಿಸಲಿ! ಮಾಧವರಾಯ, ನೀನು ಯುರೋಪಿಯನ್ನರ ಪಂಗ್ತಿಗೆ ಹೋದಾಗ ಅವರ ಆಚಾರಗಳಂತೆ ನಡಕೊಳ್ಳು ಬೇಕಾದರೆ"ಎಂದು ಭಾಮಕ್ಕನು ನಗುತ್ತ ನುಡಿದಳು.

"ಯುರೋಪಿಯನ್ನರು ನಮ್ಮ ಮಾಧವರಾಯರನ್ನು ಪಂಗ್ತಿಗೆ ಕರಕೊಂಡಾಗ ಈ ಮಾತು" ಎಂದು ನಾನು ಅಂದೆನು.

"ಅದಿರಲಿ, ನಾವು ನಮ್ಮ ಚಹಾ 'ಪಾರ್ಟಿ'ಯಲ್ಲಿ ಸುಧಾರಣೆ ಮಾಡುವದು ಅವಶ್ಯವಿರುವದೇನು ಎಂಬುದನ್ನು ವಿಚಾರಿಸುವಾ. ಉತ್ತಮವಾದ ಪದಾರ್ಥಗಳನ್ನು ವ್ಯವಸ್ಥಿತವಾಗಿ ಮಂಡಿಸಿ ವಿನೋದದ ಮಾತುಗಳನ್ನಾಡುತ್ತ ತಿಂದರಾಯಿತು. ಹಣ್ಣು ತಿನ್ನುವವನು ಪೂರ್ವಾಭಿಮುಖನಾಗಿ ತಿನ್ನಬೇಕೆಂದು ಯುರೋಪಿಯನ್ನನು ಹೇಳಿದನೆಂದು ತಿಳಿಯಿರಿ. ಕೇಳುವವರಾರು?" ಶೇಷಗಿರಿನಾಯಕರು ನುಡಿದರು. ಅಷ್ಟರಲ್ಲಿ ಅಪೂರ್ವಳಾದ ಸುಂದರಿಯೋರ್ವಳು ಮೆಲ್ಲನೆ ಬಾಗಿಲ ತೆರೆದು "ಅಕ್ಕಾ, ಈ ರಂಗಣ್ಣನನ್ನು ತುಸು ಕರಕೊಳ್ಳಿರಿ. ತ್ರಾಸ ಕೊಡುತ್ತಾನೆ. ಚಹ ಸೋಸಗೊಡಲೊಲ್ಲನು" ಎಂದು ರಂಗಣ್ಣನನ್ನು ಕೈಯಲ್ಲಿ ಹಿಡುಕೊಂಡು ಬಂದು ಮರಾಠೀ ಭಾಷೆಯಲ್ಲಿ ಬಲು ಮೆಲ್ಲಗೆ ಹೇಳಿದಳು.

ರಂಗನು ಸ್ಫೂರ್ತಿಯಿಂದ "ಬೇಂಡ್ ಬಾಜೆ"ಯನ್ನೂದುತ್ತೆ ತನ್ನ ತಾಯಿಯ ಬಳಿಯಲ್ಲಿ ಬಂದು ನಿಂತನು. ಆ ಸುಂದರಿಯು ಮತ್ತೆ ಒಳಗೆ ಹೋದಳು.

ಏನು ಸೌಂದರ್ಯವದು! ಇಂಥ ರೂಪವತಿಯನ್ನು ನಾನು ನೋಡಲೇ ಇಲ್ಲ. ಅವಳ ಗೌರವರ್ಣವೂ, ಪ್ರೌಢಿಮೆಯಿಂದ ಮೆರೆಯುವ ಅವಳ ಸುಂದರವಾದ ಮುಖವೂ, ಮಂಜುಲವಾದ ವಾಣಿಯೂ ಮನೋವೇಧಕವಾಗಿದ್ದವು. ಮುಂಬಯಿಯ "ಪರಭೂ" ಸುಂದರಿಯರಂತೆ ಅವಳು ತನ್ನ ನೀಲಾಲಕಗಳನ್ನು ಚೆನ್ನಾಗಿ ಬಾಚಿ ಚಮತ್ಕಾರವಾಗಿ ಕಾಣುವಂಥ 'ಬುಚಡೆ'ಯನ್ನು ಕಟ್ಟಿದ್ದಳು. ಬದನೀ ಬಣ್ಣದ ರೇಸಿಮೆಯ ಜರತಾರೀ ಸೀರೆಯು ಅವಳ ಮನೋರಮವಾದ ಮೈಕಟ್ಟಿಗೆ ಒಳಿತಾಗಿ ಒಪ್ಪುತ್ತಿತ್ತು.ಅವಳ ಮುಂಗೈ ಮೇಲಿದ್ದ ಅನರ್ಘವಾದ ಹರಡ ಕಂಕಣ ಗೋಟು ತೋಡೆಗಳಿಗೆ ಅವಳ ರುಚಿರವಾದ ಹಸ್ತಗಳೆ ಅಲಂಕಾರವಾಗಿದ್ದವೋ ಆ ಹಸ್ತಗಳಿಗೆ ಆ ಜಡಪದಾರ್ಥಗಳೇ ಅಲಂಕಾರವೊ ಹೇಳಲಾಗದು. ನಮ್ಮ ನಿರೀಕ್ಷಣಕ್ಕೆ ಈಡಾಗದೇ ಆ ಸುಂದರಿಯು ನಿಲ್ಲದೆ ಹೊರಟು ಹೋದದ್ದರಿಂದ ನಾನಾದರೂ ಅವಳ ವರ್ಣನೆಯನ್ನು ಹೆಚ್ಚಿಗೆ ಮಾಡಲಾರೆನು.

"ಭಾಮಕ್ಕಾ ಈ ಪ್ರಾಣಿ ಯಾರು? ಎಂದು ಮಾಧವರಾಯನು ಕೇಳಿದನು.

"ಇವಳೆ?" ಎಂದು ಉದ್ಗಾರ ತೆಗೆದು ಭಾಮಕ್ಕನು ತನ್ನ ಗಂಡನ ಕಡೆಗೆ ಕೈಮಾಡಿ "ಇವರ ಸೋದರ ಸೊಸೆಯು" ಎಂದು ನುಡಿದು ನಕ್ಕಳು.

"ನಗಲಿಕ್ಕೇನಾಯಿತು?" ಎಂದು ನಾಯಕರು ಹೆಂಡತಿಯ ಮೇಲೆ ತುಸು ರುಷ್ಟರಾಗಿ ಕೇಳಿದರು. ಭಾಮಕ್ಕನು ಗಂಡನ ಕೋಪವನ್ನು ಲೆಕ್ಕಿಸದೆ" ಊರೆಲ್ಲ ನಕ್ಕರೂ ನಾವು ನಗಕೂಡದು!" ಎಂದು ನುಡಿದು ಮತ್ತೆ ನಕ್ಕಳು.

ಈ ಚಮತ್ಕಾರವನ್ನು ಅರಿತುಕೊಳ್ಳುವ ಕುತೂಹಲದಿಂದ ನಾನು ಕೇಳಿದ್ದು "ಭಾಮಾ, ಇವಳು ನಿನ್ನ ಸೊಸೆಯಾದರೆ ನಮ್ಮೊಡನೆ ಚಹ ತೆಗೆದುಕೊಳ್ಳಲಿಕ್ಕೆ ಬರಲಿಲ್ಲವೇಕೆ?"

"ಹೇಗೆ ಬಂದಾಳು ವೆಂಕಣ್ಣಾ! ದೊಡ್ಡ ಹೆಂಗಸಾಗಿದ್ದಾಳೆ. ಇನ್ನೂ ಮದುವೆ ಇಲ್ಲ. ಪಾಪ ನಾಚಿಕೊಂಡು ಒಳಗೇ ಇರುತ್ತಾಳೆ. ಹಡೆದ ತಂದೆ ತಾಯಿಗಳಿಗೆ ಊಟ ಹೇಗೆ ಸವಿಯಾಗುವದೋ ಕಾಣೇ!" ಎಂದು ಭಾಮಕ್ಕನು ಗಂಡನನ್ನು ಓರೆಗಣ್ಣಿನಿಂದ ನೋಡಿ ನಕ್ಕಳು.

"ಅವರ ತಂದೆತಾಯಿಗಳ ಪಾಪ ಪುಣ್ಯ ಅವರ ಸುತ್ತ. ಇಲ್ಲಿಯೇ ನಿಮ್ಮ ತಮ್ಮನಿದ್ದಾನೆ; ಹೆಂಡತಿಯನ್ನು ಬಿಟ್ಟುಬಿಟ್ಟಿದ್ದಾನೆ. ನಿನಗೆ ಊಟ ಕಹಿ ಹತ್ತುತ್ತದೇನು?" ಎಂದು ನಾಯಕರು ಗಂಭೀರವಾದ ಮುದ್ರೆಯನ್ನು ತಳೆದು ಕೇಳಿದರು.

"ಬೇವಿನಕಾಯಿ ತಿಂದರೆ ಕಹಿ ಹತ್ತುತ್ತದೆ. ಸವಿಯೂಟ ಉಂಡು ಕಹಿ ಅನ್ನಲಿಯಾ?" ಎಂದು ನಾಯಕರ ಪ್ರೇಯಸಿಯು ನುಡಿದು ಮತ್ತೆ ನಕ್ಕಳು.

ನಾಯಕರ ಗಂಭೀರವಾದ ಮುಖಮುದ್ರೆಯು ಅಡಗಿ ಅಲ್ಲಿ ಮಂದಹಾಸವು ತೋರಿತು. ಅವರು ತಮ್ಮ ಚಿನ್ನದ ಗಡಿಯಾರವನ್ನು ತೆಗೆದು "ಓಹೋ, ಏಳುವರೆಯಾಯಿತು" ಎಂದು ಯಂತ್ರದ ಗಂಟೆ ಬಡಿದ ಮೇಲೆ "ನಾರ್ಣಮ್ಮಾ, ಚಹ ಸಿದ್ಧವಾಗಿದೆಯೋ ಇಲ್ಲವೋ?" ಎಂದು ಅಡಿಗೆಯವರನ್ನು ಕೂಗಿ ಕೇಳಿದರು.

ಆಗಲಿನ ವಾಗ್ಬಾಣ ಬಡೆದು ತುಸು ಚಿಂತಾಕ್ರಾಂತನಾಗಿದ್ದ ಮಾಧವರಾಯನು ನಾಯಕರ ಮೋರೆ ತಿರುವಿ "ನಾಯಕರೆ, ಯುರೋಪಿಯನ್ ಪದ್ಧತಿಯಂತೆ ನೀವು ಗಂಟೆ ಬಡಿದಿರಿ, ಸರಿಯಾಯಿತು; ಮೇಲೆ ನಾರ್ಣಮ್ಮನನ್ನು ಕೂಗಿದಿರೇಕೆ?" ಎಂದು ನುಡಿದು ಖೊಳ್ಳನೆ ನಕ್ಕನು.

ಶೇಷಗಿರಿನಾಯಕರ ಮುಖದಲ್ಲಿ ಹುಚ್ಚು ಕಳೆ ಇಡುಗಿತು. ಅವರಿಂದ ಅಚಾತುರ್ಯವೇ ಆಗಿತ್ತು. ಅವರಂದದ್ದು; "ಗಂಟೆ ಬಾರಿಸಿದ ಕೂಡಲೆ ಬರಬೇಕೆಂದು ನಾವು ನಾರ್ಣಮ್ಮನಿಗೆ ಕಲಿಸದಿದ್ದರೆ ಬಾರಿಸಿದ ಕೂಡಲೆ ಅವಳು ಬರುವುದು ಹೇಗೆ? ನಾನು ನಿನ್ನೆಯೇ ಈ ಗಂಟೆಯನ್ನು ಈ ಊರಲ್ಲಿ ಕೊಂಡೆನು. ಇದು ಹೊಸ ವಸ್ತುವಾದ್ದರಿಂದ ಹೇಗೆ ನುಡಿಯುತ್ತದೆಯೋ ನೋಡಿದೆನು."

ಅಷ್ಟರಲ್ಲಿ ಚಹ ಬಂದಿತು. ಎಲ್ಲರು 'ಸಾಸರ'ಗಳಲ್ಲಿ ಚಹ ಹಾಕಿ ಆರಿಸಿಕೊಂಡು ಕುಡಿಯಲಾರಂಭಿಸಿದರು. ಮಾಧವರಾಯನು ಚಹವನ್ನಾಸ್ವಾದಿಸಿ, "ಚಹ ಮಾತ್ರ ಸರ್ವೋತ್ಕೃಷ್ಟವಾಗಿದೆ" ಎಂದು ಗಟ್ಟಿಯಾಗಿ ನುಡಿದನು. ಭಾಮಕ್ಕನು ಅವನನು ದಿಟ್ಟಿಸಿ ನೋಡಿದಳು.

೩

ಮರುದಿವಸ ಶೇಷಗಿರಿನಾಯಕರು ನಮ್ಮ ಮನೆಗೆ ಬಂದಾಗ ನಾನು ಸೋದರ ಸೊಸೆಯೆಂದರೆ ಯಾರ ಮಗಳು? ಇಷ್ಟು ದಿವಸ ಅವಳು ಅವಿವಾಹಿತಳಾಗಿ ಉಳಿದದ್ದು ಹೇಗೆ? ಅವಳ ವಿದ್ಯಾವ್ಯಾಸಂಗಗಳೇನು? ಮುಂತಾದ ಪ್ರಶ್ನೆಗಳನ್ನು ಮಾಡಿದೆನು. ನಾಯಕರು ಇದ್ದ ಸಂಗತಿಯನ್ನೆಲ್ಲ ಸ್ವಲ್ಪದರಲ್ಲಿ ಹೇಳಿದರು. ಮಾಧವರಾಯನು ಅದನ್ನೆಲ್ಲ ಲಕ್ಷಕೊಟ್ಟು ಕೇಳುತ್ತಿದ್ದನು.

ಶೇಷಗಿರಿನಾಯಕರ ತಾಯಿಯು ಜೋಗಂಟೆಯ ಜಗೋಪಂತ ಕಾಥವಟೆಯವರ ಮಗಳು. ದೇಶಸ್ಥರಲ್ಲಿ ಇರುವ ರೂಢಿಗನುಸರಿಸಿ ತಮ್ಮಣ್ಣ ನಾಯಕರು ತಮ್ಮ ಮಗಳನ್ನು ಮತ್ತೆ ಜಗೋಪಂತರ ಮಗನಾದ ಮನೋಹರ ಪಂತನಿಗೆ ಕೊಟ್ಟಿದ್ದರು. ಆ ಮನೋಹರಪಂತರ ಮಗಳೆ ನಾವು ಮೇಲೆ ವಿವರಿಸಿದ ಅವಿವಾಹಿತಳಾದ ಸುಂದರಿಯು. ಅವಳ ಹೆಸರು ಚಂದ್ರಭಾಗಾ. ಜಗೋಪಂತರು ತೀರಿಕೊಂಡ ಬಳಿಕ ಮನೋಹರಪಂತನು ಪುಣೆಯಲ್ಲಿ ಮನೆ ಮಾಡಿಕೊಂಡಿದ್ದನು. ಅಲ್ಲಿ ಅವನು ಮಾಧವರಾವ ರಾನಡೆ, ವಿಷ್ಣು ಮೋರೇಶ್ವರ, ಅಗಸ್ತೀ ಮುಂತಾದ ಸುಧಾರಕಾಗ್ರಣಿಗಳ ಪಟ್ಟದ ಶಿಷ್ಯನಾಗಿದ್ದು, ಆ ಮಹಾತ್ಮರ ಪಶ್ಚಾತ್ ಮನೋಹರಪಂತನೇ ಪುಣೆಯಲ್ಲಿಯ ಸುಧಾರಕರ ಅಗ್ರಗಣಿಯೆಂದು ಎಲ್ಲರೂ ಮಾತಾಡುತ್ತಿದ್ದರು. ಮನೋಹರಪಂತನು ತನ್ನ ಮಗಳನ್ನು ಪುಣೆಯಲ್ಲಿಯ ಫೀಮೇಲ ಹಾಯಸ್ಕೂಲಿನಲ್ಲಿ ಅಭ್ಯಾಸಕ್ಕೆ ಇಟ್ಟಿದ್ದನು. ಅಲ್ಲಿ ಚಂದ್ರಭಾಗೆಯು ಇಂಗ್ಲಿಷ ಕಲಿತದ್ದಲ್ಲದೆ ಗಾನ, ಚಿತ್ರಕಲೆ, ಕಸೀದೆ ತೆಗೆಯುವದು ಮುಂತಾದ ಅಭಿನವ ಕಲೆಗಳಲ್ಲಿಯಾದರೂ ನಿಷ್ಣಾತಳಾಗಿದ್ದಳು. ತನ್ನ ಮಗಳು ಹದಿನೆಂಟು ವರ್ಷದ ಪ್ರಾಯದವಳಾಗುವವರೆಗೆ ಅವಳ ವಿವಾಹವನ್ನು ಮಾಡುದಿಲ್ಲೆಂದೂ ಅವಳ ಇಚ್ಛೆಗೆ ಬಂದ ವರನಿಗೆ ಮಾತ್ರ ಅವಳನ್ನು ಕೊಡುವೆನೆಂದೂ ಮನೋಹರ ಪಂತನು ನಿಶ್ಚಯಿಸಿದ್ದನು. ಅವನ ನಿಶ್ಚಯವೇ ಕೊನೆಗಾಣುವ ಹೊತ್ತು ಬಂದಿತು. ಯಾಕೆಂದರೆ ರಜಸ್ವಲೆಯಾದ ಚಂದ್ರಭಾಗೆಯನ್ನು ಹಳೆ

ಸಾಂಪ್ರದಾಯದವರಂತೂ ಮಾಡಿಕೊಳ್ಳುವ ಮಾತೇ ದೂರಾಗಿ ಹೋಗಿತ್ತು. ಇನ್ನು ಸುಧಾರಕರ ಚಿಕ್ಕಮೇಳೆಯಲ್ಲಿ ಚಂದ್ರಭಾಗೆಗೆ ಅನುರೂಪನಾದ ಪತಿಯು ದೊರಕುವನೋ ಇಲ್ಲವೋ ಎಂಬ ಶಂಕೆಯಿತ್ತು.

ಅಕ್ಕನ ಮೇಲೆ ಭಕ್ತಿ ಹೆಚ್ಚಾಗಿ ಮಾಧವನು ದಿನಾಲು ಶೇಷಗಿರಿನಾಯಾಕರ ಮನೆಗೆ ಎಡತಾಕಲಾರಂಭಿಸಿದನು. “ಹಸಿವೆಯಾಗಿದೆ, ಅಕ್ಕಾ ಏನಾದರು ತಿನ್ನಲಿಕ್ಕಿ ಕೊಡು” ಎಂದು ನೆಪ ಮಾಡಿಕೊಂಡು ಒಮ್ಮೆ ಹೋಗುವನು. ಮರೆತು ಬಂದ ಬಡಿಗೆಯನ್ನು ತರಲಿಕ್ಕೆ ಮತ್ತೊಮ್ಮೆ ಹೋಗುವನು. ಲಾಲಬಾಗಕ್ಕೆ ಬರುವಿರೇನೆಂದು ಶೇಷಗಿರಿನಾಯಕರನ್ನು ಕರೆಯಲಿಕ್ಕೆ ಒಂದಾವರ್ತಿ ಹೋಗಿ ಬರುತ್ತಿದ್ದನು. ಹೀಗೆ ಸಕಾರನೂ ನಿಷ್ಕಾರಣವಾಗಿ ಮಾಧವನ ನಾಯಕರ ಮನೆಗೆ ನಿತ್ಯದಲ್ಲಿಯೂ ಹೋಗಿ ಬರುತ್ತಿದ್ದನು.

ಭಾಮಕ್ಕನ ಮನೆಯಲ್ಲಿಯ ರುಚಿಕರವಾದ ಮಾವಿನಹಣ್ಣಿನ ಒಡೆಗಳನ್ನು ಯಾರು ಮಾಡಿದರೆಂದು ಮಾಧವನು ಕೇಳಿದರೆ ಅವುಗಳನ್ನು ಚಂದ್ರಭಾಗೆಯೇ ಮಾಡಿದಳೆಂಬ ಉತ್ತರ ಬಂದಿತು. ರಂಗಣ್ಣನ ತಲೆಯ ಮೇಲಿನ ಅಂದವಾದ ಟೊಪ್ಪಿಗೆಯನ್ನು ಹೆಣೆದವಳು ಚಂದ್ರಭಾಗೆಯೇ. ಆ ಹುಡುಗನಿಗೆ ಮನೆಯಲ್ಲಿ ಕಲಿಸುವವಳು ಅವಳೇ. ಒಳಗಿನ ಮನೆಯಲ್ಲಿ ಬಹು ಮಂಜುಲವಾಗಿ ಚಂದ್ರಭಾಗೆಯು ಹಾಡುತ್ತಿದ್ದರೆ ಅವಳು ತಾಲಮಟ್ಟುಗಳನ್ನು ಬಿಟ್ಟಿರಲಿಲ್ಲ. ಪುಣೆಯಲ್ಲಿ ಇಂಗ್ಲಿಷ ಕಲಿತವಳಾಗಿದ್ದರೂ ಅವಳು ಅವನೀತೆಯಾಗಿ ಇದ್ದಿಲ್ಲ. ಒಂದು ದಿನ ಸತ್ಯಭಾಮೆಯು ಮೈ ತೊಳೆದುಕೊಳ್ಳಲಿಕ್ಕೆ ಹೋದದ್ದು ಮಾಧವನಿಗೆ ಗೊತ್ತಿದ್ದರೂ ಅವನು ಮೆಲ್ಲನೆ ಚಂದ್ರಭಾಗೆಯ ಸಮೀಪಕ್ಕೆ ಬಂದು “ಭಾಮಕ್ಕನೆಲ್ಲಿ?” ಎಂದು ಕೇಳಿದಾಗ ಆ ಲಲನೆಯು ಪರಿವೃತ್ತಾರ್ಧ ಮುಖಿಯಾಗಿ ಎಳೆನಗೆ ತೋರುತ್ತ “ಮೈತೊಳೆಯುತ್ತಿರುವರು” ಎಂದು ಬಹು ಮಂಜುಲವಾಗಿ ಹೇಳಿದಳು. “ನಾನು ವರನು ನೀನು ಕನ್ನೆ ಏನು ಅನಹಿತಾ?” ಎಂದು ಮನಸಿನಲ್ಲಿಯೇ ಯೋಚಿಸುತ್ತ ಅವನು ಹೊರಟು ಹೋದನು.

ಮಾಧವನಿಗೆ ಚಂದ್ರಭಾಗೆಯ ಹುಚ್ಚೇ ಹಿಡಿಯಿತು. ಕನಸು ಮನಸಿನಲ್ಲಿ ಕೂಡಿಯೇ ಚಂದ್ರಭಾಗೆಯ ಹೊರತಾಗಿ ಇನ್ನೊಂದು ವಿಷಯವೇ ಇಲ್ಲ. ಕಡೆಗವನು ಒಂದು ದಿನ ಗಟ್ಟಿ ಧೈರ್ಯ ಮಾಡಿ ಅಕ್ಕನ ಬಳ್ಳಿಗೆ ಬಂದು “ಅಕ್ಕಾ, ನಿನ್ನೊಡನೆ ಒಂದು ಅಲೋಚನೆ ಮಾಡಬೇಕಾಗಿದೆ” ಎಂದಂದನು.

“ಏನದು?” ಎಂದು ಸತ್ಯಭಾಮೆಯು ಮುಗುಳುನಗೆ ನಗುತ್ತ ಕೇಳಿದಳು. ಅವಳಿಗೆ ಮಾಧವನ ಮನಸ್ಸಿನೊಳಗಿನ ಮಾತು ತಿಳಿದೇ ಹೋಗಿತ್ತು.

“ಹೇಳೆಂದರೆ ಹೇಳುತ್ತೇನೆ” ಎಂದು ಮಾಧವನು ಲಜ್ಜಾಗ್ರಸ್ತನಾಗಿ ನುಡಿದನು.

“ಹೇಳು. ನನ್ನ ಮುಂದೆ ಯಾತರ ಸಂಕೋಚ?”

“ನಾನು ಎರಡನೆಯ ಲಗ್ನ ಮಾಡಿಕೊಳ್ಳುವದಂತೂ ನಿಶ್ಚಯವೇ. ಈ ಚಂದ್ರಭಾಗೆಯನ್ನು ನನಗೇಕೆ ಕೊಡಿಸ ಬಾರದು?”

ಈ ಮಾತು ಕೇಳಿ ಸತ್ಯಭಾಮೆಯು ಚಕಿತಳಾಗಿ “ಹುಚ್ಚನೇನು ನೀನು ಮಾಧವರಾಯಾ? ಆ ಹುಡುಗೆ ಮೈನೆರೆದು ಮೂರು ವರ್ಷಗಳಾಗಿವೆ ಅಂತೆ. ಹಿರಿಯರು ಕೇಳಿದರೆ ನನ್ನ ನಿನ್ನ ಕೂಡಿಯೇ ಬಡಿದಾರು!” ಎಂದು ಅಧಿಕ್ಷೇಪಿಸಿ ನುಡಿದಳು.

“ಹೀಗೆಯೇ ನಾನು ಸನ್ಯಾಸಿಯಂತೆ ಇರಬೇಕೆಂಬುದು ನಿನ್ನ ಮನಸ್ಸೆ?”

“ಯಾಕೆ? ನಿನ್ನ ಹೆಂಡತಿಯನ್ನು ಕರಸಿಕೋ; ಸುಖದಿಂದ ಇರು. ಅವಳೇನು ಕುರುಡೆಯೇ? ಕುಂಟಿಯೇ? ಏನಾಗಿದೆ? ಕಲಿತು ಪಂಡಿತನಾಗಿರುವೆನೆಂದು ಹೇಳುತ್ತೀ.”

“ಭಾಮಕ್ಕಾ, ನಿನಗಿಂತ ನನಗೆ ಚೆನ್ನಾಗಿ ತಿಳಿಯುತ್ತದೆ. ನಾನು ನಿನ್ನ ಉಪದೇಶ ಕೇಳಲಿಲ್ಲ. ಚಂದ್ರೆಯನ್ನು ಕೊಡಿಸುವಿಯೋ ಇಲ್ಲವೋ ನನಗೆ ಹೇಳಿ ಬಿಡು.”

“ಕೊಡಿಸುವದು ದೊಡ್ಡ ಮಾತಲ್ಲ ಮಾಧವಾ, ನಿನ್ನಂಥವನಿಗೆ ಮಾಲೆ ಹಾಕದೆ ಅವಳು ಮತ್ತಿನ್ನಾರಿಗೆ ಹಾಕುವಳು? ಅದರೆ ಮೈನೆರೆದ ಹುಡುಗೆಯನ್ನು ನೀನು ಮದುವೆಯಾದರೆ ಜನರು ನಮ್ಮನ್ನು ಎತ್ತಿ ಇಟ್ಟಾರು; ಕಾಣದೆ?”

“ಏನು ಹೇಳುತ್ತಿ ಬಿಡು. ದುಷ್ಯಂತ, ನಳರಾಜ, ಪರಾಶರ, ಅರ್ಜುನ ಮುಂತಾದ ಮಹಾತ್ಮರು ಮೈನೆರೆದವರನ್ನೇ ಮದುವೆಯಾಗಲಿಲ್ಲೆ?”

“ವಾಖ್ಯಾನ ಕೊಡುವಿರೇನು ಎಮ್. ಎ. ಪಂಡಿತರೆ? ಕೊಡುವದಾದರೆ ಚನ್ನಾಗಿ ಎದ್ದು ನಿಂತು ‘ಮಹಿಳೆಯರೆ, ಸಭ್ಯಗೃಹಸ್ಥರೆ,’ ಎಂದು ಉಪಕ್ರಮಿಸಿ ಗಳಿಗೆ ಎರಡು ಗಳಿಗೆ ವ್ಯಾಖ್ಯಾನ ಕೊಡು, ನಿನ್ನ ಪರೀಕ್ಷೆಯಾಗಿ ಹೋಗಲಿ.”

"ಅಂತಃಕರಣದ ಅಕ್ಕನೆಂದು ನಿನ್ನ ಮುಂದೆ ಹೊಟ್ಟೆ ತೋಡಿಕೊಂಡರೆ ಭಾಮಕ್ಕಾ, ನೀನು ನಗೆಯಾಡುವಿಯಾ?" ಎಂದು ಮಾಧವನು ಹೀನಸತ್ವನಾಗಿ ನುಡಿದನು.

"ಅಪ್ಪಾ, ಈ ಮಾತಿನಲ್ಲೀ ನನಗೇನೂ ತಿಳಿಯದು. ಅವರಿದ್ದಾರೆ (ಅವರೆಂದರೆ ಗಂಡ), ಬೇಕಾದಂಥ ಕರ್ತಾಪುರುಷನಾದ ನಿಮ್ಮಣ್ಣನಿದ್ದಾನೆ, ನೀನಾದರೂ ದೊಡ್ಡ ಪರೀಕ್ಷೆ ಕೊಟ್ಟವನು. ಮೂರೂ ಮಂದಿ ಕಲೆತು ಬೇಕಾದ್ದು ಮಾಡಿರಿ. ಕೊಡಿಸೆಂದರೆ ಕನ್ಯಾ ಕೊಡಿಸಲಿಕ್ಕೆ ನಾನು ಸಿದ್ದಳು".

ಸಾಯಂಕಾಲಕ್ಕೆ ನಾನೂ ಮಾಧವರಾಯನೂ ಶೇಷಗಿರಿನಾಯಕರೂ ಕಲೆತು ಬಹಳೊತ್ತು ವಿಚಾರ ಮಾಡಿದೆವು. ಮಾಧವರಾಯನೆಷ್ಟು ಮಾಡಿದರೂ ತನ್ನ ಹಟ ಬಿಡಲಿಲ್ಲ . ಆಗ ನಾಯಕರು ಅಂದದ್ದು; "ನೋಡಿರಿ ಮಾಧವರಾಯರೆ, ನಿಮ್ಮ ಹಿರಿಯರನ್ನು ಹೇಗಾದರೂ ಮಾಡಿ ಒಡಂಬಡಿಸುವೆವು. ಆದರೆ ಚಂದ್ರಭಾಗೆಯನ್ನು ನೀವು ಚನ್ನಾಗಿ ಇಟ್ಟುಕೊಂಡು ಸಂಸಾರ ಮಾಡುವದು ನಿಶ್ಚಯವೇ? ಏನು ಮೂರನೆಯದೊಂದು ಹೆಣ್ಣು ಗಂಟುಹಾಕಿರೆಂದು ಹೇಳುವಿರೋ?"

"ನಾನು ಕೇವಲ ಮೂರ್ಖನೆಂದು ನೀವು ತಿಳಿದು ಹೀಗೆ ಮಾತಾಡುವಿರೇನು ನಾಯಕರೇ?"

"ಕನ್ಯಾ ಮನಸ್ಸಿಗೆ ಬಂದಿರುವದೇನು?"

"ಚಂದ್ರಭಾಗೆಯಂಥ ಸುಂದರಿಯು ಮನಸ್ಸಿಗೆ ಬಂದಳೇನೆಂದು ಕೇಳಬೇಕೆ? ಅವಳಲ್ಲಿ ತೆಗೆಯುವಂಥದೇನೂ ಇಲ್ಲ, ತೊಳೆದ ಮುತ್ತು!" ಎಂದು ಮಾಧವನು ಮೋರೆ ಹಿಗ್ಗಿಸಿ ಹೇಳಿದನನ.

"ಇದಕ್ಕೂ ಇನ್ನೇನು ಹೇಳಬೇಕು ನಾಯಕರೆ? ನಿಮಗೆ ಸಮಾಧಾನವಾಯಿತಷ್ಟೆ?" ಎಂದು ನಾನು ಕೇಳಿದನು.

"ವೆಂಕಟರಾಯರೆ, ನೀವು ಕನ್ನೆಯನ್ನು ಚೆನ್ನಾಗಿ ನೋಡಿರುವಿರಷ್ಟೆ?" ಎಂದು ನಾಯಕರು ನನ್ನನ್ನು ಕೇಳಿದರು.

"ನೋಡಿದಂತಾಗಿದೆ. ಮುಖ್ಯ ಮಾಧವನ ಮನಸ್ಸಿಗೆ ಬಂದ ಮೇಲೆ ಆಗಿ ಹೋಯಿತು. ಆದರೂ ಕರಿಸಿರಿ, ಇನ್ನೊಮ್ಮೆ ನೋಡೋಣ."

"ಯಾರು! ಗುಂಡಕ್ಕನನ್ನು ಹೀಗೆ ಕರೆದುಕೊಂಡು ಬರಬಾರದೆ!" ಎಂದು ನಾಯಕರು ತಮ್ಮ ಹೆಂಡತಿಗೆ ಹೇಳಿದರು. ಗುಂಡಕ್ಕನೆಂಬ ಹೆಸರು ಕೇಳಿದಾಕ್ಷಣವೇ ನಾನು ಚಕಿತನಾದೆನು. ಮಾಧವನ ಮೋತಿಯಂತೂ ಹುಚ್ಚೆಟ್ಟಿತು. "ಗುಂಡಕ್ಕನಾರು?" ಎಂದು ನಾನು ಕೇಳಿದೆನು.

"ಮತ್ತಾವ ಗುಂಡಕ್ಕ? ನಮ್ಮ ಅನುಜರ ಪ್ರೀತಿಯ ಹೆಂಡತಿಯೇ ಅವಳು. ಈಗ ವಿನೋದಕ್ಕಾಗಿ ಚಂದ್ರಭಾಗಾ ಎಂಬ ಹೆಸರಿಟ್ಟುಕೊಂಡಿದ್ದಾಳೆ," ಎಂದು ನಾಯಕರು ಗಹಗಹಿಸಿ ನಗುತ್ತ ನುಡಿದರು.

ಭಾಮಕ್ಕನು ಗುಂಡಕ್ಕನನ್ನು ಕರೆಕೊಂಡು ಬಂದು ನಮ್ಮೆಲ್ಲರಿಗೂ ಸಮಸ್ಕಾರ ಮಾಡಹೇಳಿದಳು.

ಆ ದಿವಸ ನಮಗೆಲ್ಲರಿಗೂ ಮಿತಿಮೀರಿದ ಆನಂದವಾಯಿತು. ಹಿರಿಯರ ಎದೆಯ ಮೇಲಿದ್ದ ದೊಡ್ಡ ಕಲ್ಲು ಇಳಿದಂತಾಗಿ ಅವರು ಸಮಾಧಾನದ ಉಸುರ್ಗರೆದರು. ಬೆಂಗಳೂರಲ್ಲಿಯೇ ಫಲಶೋಭನದ ಪ್ರಸ್ತವಾಗತಕ್ಕದ್ದು. ಸುಬ್ಬರಾಯರಿಗೆ ತಾರು ಕಳಿಸಿದ್ದೇವೆ. ಮುಹೂರ್ತವು ಅನಾಯಾಸವಾಗಿ ನಾಳಿನ ಇಂಗ್ರಜೀ 'ನ್ಯೂ ಇಯರ್ಸ ಡೇ'ದ ದಿವಸ ಹೊರಟಿದೆ. ಸಂಪಾದಕರೆ, ಈ ಮಹೋತ್ಸವದ ದಿವಸವೇ ನೀವಾದರೂ ನಿಮ್ಮ ಡಿಸೆಂಬರದ ಸಂಚಿಕೆಯನ್ನು ಹೊಡಿಸಿದರೆ ಬಹಳೇ ಒಳ್ಳೇದಾಗುವುದು.

**ಕಥೆಗಾರರ ಪರಿಚಯ:** ಕೆರೂರು ವಾಸುದೇವಾಚಾರ್ಯರು ಕನ್ನಡದ ನವೋದಯದ ಮೊದಲ ಸಾಹಿತಿಗಳಲ್ಲಿ ಪ್ರಮುಖರು. ೧೮೬೬ ಅಕ್ಟೋಬರ್-೧೫ರಲ್ಲಿ ಬಾಗಿಲಕೋಟೆಯ ಸಮೀಪದ ತೋಳಮಟ್ಟಿ ಗ್ರಾಮದಲ್ಲಿ ಜನಿಸಿದರು. ಇವರ ಪ್ರಕಟಿತ ಕೃತಿಗಳು: ಪ್ರೇಮವಿಜಯ, ಬೆಳಗಿದ ದೀಪಗಳು, ಎಂಬ ಕಥಾ ಸಂಗ್ರಹಗಳು. 'ಇಂದಿರೆ', ಯದುಮಹಾರಾಜ, ವಾಲ್ಮೀಕಿ ವಿಜಯ, ಎಂಬ ಕಾದಂಬರಿಗಳು. ಪತಿವಶೀಕರಣ, ವಸಂತಯಾಮಿನಿ, 'ಸ್ವಪ್ನಚಮತ್ಕಾರ' ಎಂಬ ನಾಟಕಗಳನ್ನು ರಚಿಸಿದ್ದಾರೆ.

**ಪ್ರಶ್ನೆಗಳು:**

೧. ಮಾಧವರಾಯರ ಮನೆತನದ ಹಿನ್ನೆಲೆಯನ್ನು ವಿವರಿಸಿ.

೨. ಶೇಷಗಿರಿರಾಯರ ಅಂತಸ್ತಿನ ತಕ್ಕಂತಿನ ವೇಷಭೂಷಣದ ವೈಭವವನ್ನು ವಿವರಿಸಿ.

೩. ಮಾಧವರಾಯರು ಚಂದ್ರ ಭಾಗಳಲ್ಲಿ ಮೋಹಗೊಳ್ಳಲು ಕಾರಣವೇನು?

೪. ಇತ್ತೀಚೆಗೆ "ವಿವಾಹ ಸಂಬಂಧಗಳು ಜಾಳಾಗುತ್ತಿವೆ" ಕಾರಣವೇನು?

# ೩. ಮಾನವ ನಿರ್ಮಿತ ಮಹಾಸಮಸ್ಯೆಗಳು

**–ನಾಗೇಶ ಹೆಗಡೆ**

**ಆಶಯ:** ಮಾನವ ಬೆಳೆದು ಬಂದ ರೀತಿಯೇ ಸೋಜಿಗ. ಆದರೆ ಅವನ ಸಾಧನೆಯಿಂದ ಸಮಸ್ಯೆಗಳು ಅನೇಕ. ಅಲೆಮಾರಿತನದಿಂದ ನಾಗರಿಕ ಬದುಕಿಗೆ ಸಾಗಿ ಬಂದು. ಶೋಧಿಸುವ ಗುಣದಿಂದ ಅಭಿವೃದ್ಧಿಯ ಹೆಸರು ಪಡೆದು. ಇರುವ ಏಕೈಕ ಭೂಮಿಯ ನಾಶಕ್ಕೆ ಕಾರಣವಾಗಿದ್ದಾನೆ. ಹಾಗಾಗಿ ಮಾನವನು ಯಾವುದು ಪ್ರಗತಿ, ಯಾವುದು ಬೆಳವಣಿಗೆ ಎಂಬ ನಿಖರ ಅರ್ಥವನ್ನು ತಿಳಿದು ಭೂಮಿಯನ್ನು ಉಳಿಸುವ ಪಥವನ್ನು ಹಿಡಿಯಬೇಕಾಗಿದೆ.

–೧–

ಭೂಮಿಯ ಮೇಲೆ ಮಾನವ ಜೀವಿಗಳು ಓಡಾಡಲಾರಂಭಿಸಿ ಸುಮಾರು ೪೦ ಸಾವಿರ ವರ್ಷಗಳೇ ಸಂದಿವೆ. ಕಾಡುಪ್ರಾಣಿಗಳಂತೆ ಅಲೆಯುತ್ತ, ಹೊಟ್ಟೆ ತುಂಬಿಸಿಕೊಳ್ಳುವ ಏಕಮಾತ್ರ ಉದ್ದೇಶದಿಂದ ದೀರ್ಘಕಾಲ ಶಿಲಾಯುಗದಲ್ಲೇ ಕಳೆದು ಆತ ನಾಲ್ಕು ಸಾವಿರ ವರುಷಗಳ ಹಿಂದೆ ನಾಗರಿಕ ಯುಗಕ್ಕೆ ಕಾಲಿಟ್ಟ, ದೇವರು, ಧರ್ಮ, ಕರ್ಮ ಎಂದೆಲ್ಲಾ ನಂಬುತ್ತ ಪಗೋಡಗಳನ್ನೂ ಪಿರಮಿಡ್ಡುಗಳನ್ನೂ ಕಟ್ಟುತ್ತಲೇ ಇನ್ನಷ್ಟು ಕಾಲ ಕಳೆದು, ಕೇವಲ ನಾಲ್ಕು ನೂರು ವರುಷಗಳ ಹಿಂದೆ ದಿಗಂತದಾಚೆ ದೃಷ್ಟಿ ನೆಟ್ಟು, ಕಾಲಲ್ಲಿ ಚಪ್ಪಲಿ ಮೆಟ್ಟಿದ. ಆಧುನಿಕ ಯುಗದಲ್ಲಿ ಕಾಲಿಟ್ಟು, ನೂರೊಂದು ಆಡಂಬರಗಳನ್ನು ಹಚ್ಚಿಕೊಂಡು ನಲವತ್ತು ವರ್ಷಗಳ ನೋಡನೋಡುತ್ತಿದ್ದಂತೆಯೇ ಇಂದು ಇಡೀ ಭೂಮಂಡಲವೇ ಸಮಸ್ಯೆಗಳ ಮಡುವಾಗಿ ನಿಂತಿದೆ. ಜನಸಂಖ್ಯೆಯ ಸಮಸ್ಯೆ, ಆಹಾರ ಸಮಸ್ಯೆ, ಪಕ್ಷಿ ಸಮಸ್ಯೆ, ಕಚ್ಚಾ ಪದಾರ್ಥಗಳ ಸಮಸ್ಯೆ, ಪರಿಸರ ಸಮಸ್ಯೆ...... ಒಂದಲ್ಲ ಎರಡಲ್ಲ, ಹಳೆಯ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಿರುವಂತೆಯೇ ಹೊಸ ಸಮಸ್ಯೆಗಳು ಉದ್ಭೂತವಾಗುತ್ತಿವೆ. ಭೂಮಿಯ ಯಾವುದೋ ಒಂದು ಮೂಲೆಯಲ್ಲಿ ನಿನ್ನೆ ತಲೆದೋರಿದ ಸಮಸ್ಯೆ ಇಂದು ಇಡೀ ಪೃಥ್ವಿಯನ್ನೇ ಆಕ್ರಮಿಸುತ್ತಿದೆ.

ಹಾಗೆ ನೋಡಿದರೆ, ಮಾನವನ ಇತಿಹಾಸದುದ್ದಕ್ಕೂ ಸಮಸ್ಯೆಗಳ ಸರಮಾಲೆಯೇ ಹೆಣೆದುಕೊಂಡು ಬಂದಿದ್ದು ನಮಗೆಲ್ಲ ಗೊತ್ತಿದೆ. ಅವುಗಳಿಗೆಲ್ಲ ಮನುಷ್ಯ ಆಗಾಗ ಪರಿಹಾರ ಹುಡುಕಿಕೊಂಡೆ ಪ್ರಗತಿಯ ಮೆಟ್ಟಿಲೇರುತ್ತ ಬಂದಿದ್ದಾನೆ. ಪ್ಲೇಗು, ಯುದ್ಧ, ಮಹಾಪೂರ, ಭೂಕಂಪ ಮುಂತಾದವನ್ನೆಲ್ಲ ಮಾನವ ಎದುರಿಸಿದ್ದಾನೆ. ಇವೆಲ್ಲ ಅಡತಡೆಗಳನ್ನೂ ನಿವಾರಿಸಿಕೊಂಡೇ ಆಧುನಿಕ ಯುಗಕ್ಕೆ ಕಾಲಿರಿಸಿದ್ದಾನೆ. ಇಂದಿನ ಸಮಸ್ಯೆಗಳೂ ಹಾಗಿದ್ದರೆ ತಾತ್ಕಾಲಿಕವೆ? ಅಥವಾ, ಇಂದಿನ ಸಮಸ್ಯೆಗಳು ಹಿಂದಿನದೆಲ್ಲಕ್ಕಿಂತ ಭಿನ್ನವಾಗಿರಬಹುದೆ? ಇತಿಹಾಸ ಮರುಕಳಿಸುತ್ತದೆಯೆಂದೇ ನಂಬಿಕೊಂಡು, ಸಮಸ್ಯೆಗಳಿಗೆ ಪರಿವಾರ ಸಿಕ್ಕೇ ಸಿಗುತ್ತದೆಂದು ನಮ್ಮ ಪಾಡಿಗೆ ನಾವಿರುವುದು ಸರಿಯೆ?

–೨–

ಇತಿಹಾಸ ಮರುಕಳಿಸುವ ಸ್ಥಿತಿಯಲ್ಲಂತೂ ಇಲ್ಲ, ಇಂದಿನ ಸಮಸ್ಯೆಗಳಲ್ಲಿ ಒಟ್ಟಿಗೆ ವಕ್ಕರಿಸಿವೆ. ಒಂದೊಂದಾಗಿ ಪರಿಹರಿಸುವಂತೆಯೂ ಇಲ್ಲ. ಎಲ್ಲ ಒಂದಕ್ಕೊಂದು ಹೆಣೆದುಕೊಂಡಿವೆ. ಪ್ರತಿಯೊಂದೂ ವಿಶ್ವವ್ಯಾಪಿಯಾಗಿ ಕೂತಿದೆ ಬೇರೆ. ಇಷ್ಟೂ ಸಾಲದೆಂಬಂತೆ ಈ ಎಲ್ಲ ಸಮಸ್ಯೆಗಳ ಮೂಲ ಸ್ವರೂಪವೇ ಹಿಂದಿನದಕ್ಕಿಂತ ಭಿನ್ನವಾಗಿದೆ. ಹಿಂದಿನ ಎಲ್ಲ ಸಮಸ್ಯೆಗಳೂ 'ದುಷ್ಟ ಉದ್ದೇಶ'ಗಳಿಂದ ಸೃಷ್ಟಿಯಾಗಿದ್ದವು. ಇತರರನ್ನು ಹತ್ತಿಕ್ಕಿ ತಾನೇ ಏಕಾಧಿಪತಿಯಾಗಬೇಕೆಂದು ರಾಜರುಗಳು ದಂಡೆತ್ತಿ ಹೋಗುತ್ತಿದ್ದರು ಅಥವಾ ಜನತೆಯನ್ನು ಸಂತ್ರಸ್ತಗೊಳಿಸುವುದಕ್ಕಾಗಿಯೇ (ಅಂದಿನವರು ನಂಬಿದ್ದಂತೆ) ಪ್ಲೇಗು, ಮಹಾಪೂರ, ಭೂಕಂಪಗಳು ಸಂಭವಿಸುತ್ತಿದ್ದವು. ಇಂಥ ನೆಗೆಟಿವ್ ಕಾಸಸ್(ಋಣ–ಅನುಬಂಧ)ಗಳಿಂದಾಗಿಯೇ ಸಂಕಷ್ಟ ಒದಗಿ ಬರುತ್ತಿದ್ದವು. ಆದರೆ ಈಗ ಹಾಗಲ್ಲ. ಮನುಷ್ಯ ತನ್ನವರ ಏಳಿಗೆಯ 'ಸದುದ್ದೇಶ'ದಿಂದ ಮಾಡಿದ ಕೆಲಸಗಳೇ ಇಂದಿನ ಸಮಸ್ಯೆಗಳಿಗೆ ಮೂಲ ಕಾರಣಗಳಾಗಿವೆ. ಮಾನವ ದೈಹಿಕ ಶ್ರಮ ಉಳಿಸಲೆಂದೇ ಶಕ್ತಿಮೂಲಗಳಾದ ಪೆಟ್ರೋಲು ಕಲ್ಲಿದ್ದಲುಗಳನ್ನು ಆಗೆಯಲಾರಂಭಿಸಿದ್ದು. ಯಾರೂ ಆ ಬಗ್ಗೆ ತಕರಾರು ಎತ್ತಿರಲಿಲ್ಲ. ಈಗ ಇದಕ್ಕಿದ್ದಂತೆ ಪರಿಸರ ಮಾಲಿನ್ಯ ಹಾಗೂ ಶಕ್ತಿ ಸಮಸ್ಯೆಯನ್ನು ನಾವು ಎದುರಿಸಬೇಕಾಗಿದೆ. ರೋಗ ರುಜಿನಗಳಿಂದ ಮನುಷ್ಯರನ್ನು ಬಚಾವು ಮಾಡಲೆಂದೇ ಔಷಧ ಸೃಷ್ಟಿ, ವೈದ್ಯಕೀಯ ಸಂಶೋಧನೆಗಳಾಗಿದ್ದುದರಲ್ಲಿ ಯಾವ ದುರ್ಬುದ್ದಿಯೂ ಇರಲಿಲ್ಲ. ಈಗ ನೋಡಿದರೆ ಜನಸಂಖ್ಯೆ ಅಪಾರ ಬೆಳೆದಿದೆ. ಸಾಯುವವರೇ ಕಡಿಮೆಯಾಗಿದ್ದಾರೆ.

ಮಾನವಕುಲದ ಒಳ್ಳೆಯದಕ್ಕೆಂದು ಏನೇ ಮಾಡಿದರೂ ಅದು ಶಾಪವಾಗಿಯೇ ಪರಿಣಮಿಸುವುದೇಕೆ? ಎಲ್ಲ ಮಾನವೀಯ ಆದರ್ಶಗಳನ್ನೂ ಧಾರ್ಮಿಕ ಹಿತವಚನಗಳನ್ನೂ ಪಾಲಿಸಿದರೂ ಈ ಬಗೆಯ ದುರಂತ ಕಟ್ಟಿಟ್ಟದ್ದಾದರೆ ಮುಂದೆ ಜೀವಿಸುವುದು ಹೇಗೆ? ಅನೂಚಾನವಾಗಿ ಬಂದ ಎಲ್ಲ ಸತ್ಕರ್ಮಗಳನ್ನೂ ತ್ಯಾಗ ಮಾಡುವ ಸ್ಥಿತಿ ಬಂತೇ ಈಗ ?

–೩–

ಈ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ಮಾನವ ಕುಲ ಬೆಳೆದು ಬಂದಿರುವ ವಿಧಿ ವಿಧಾನಗಳನ್ನು ಇನ್ನೊಮ್ಮೆ ಪರಿಶೀಲಿಸಬೇಕು. ತನ್ನವರ ಏಳಿಗೆಯೊಂದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಮನುಷ್ಯ ಈವರೆಗೆ ತನ್ನ ಸುತ್ತಲ ನಿಸರ್ಗವನ್ನು ಕಡೆಗಣಿಸುತ್ತ ಬಂದದ್ದಂತೂ ನಿಜ. ನಿಸರ್ಗದ ಮೇಲೆ ಮನುಷ್ಯ ಯಾವ ಯಾವ ರೀತಿಯಲ್ಲಿ ಹತೋಟ ಸಾಧಿಸಿಕೊಂಡಿದ್ದಾನೆ ಎಂಬುದನ್ನೇ ಒಂದು ಮಹಾ ಸಾಧನೆಯೆಂಬಂತೆಯೇ ನಾವು ಹೆಮ್ಮೆಯಿಂದ ಬೀಗುತ್ತ ಹೇಳುತ್ತಿರುತ್ತೇವೆ; ಮಕ್ಕಳಿಗೆ ಬೋಧಿಸುತ್ತಿದ್ದೇವೆ. ಗುಡ್ಡಕ್ಕೆ ಸುರಂಗ ಕೊರೆದು ನದಿಯನ್ನು ತಿರುಗಿಸಿದ್ದೇವೆ, ಮೈ ಕೊರೆಯುವ ಹಿಮಖಂಡದಲ್ಲೂ ಹೆಲಿಕ್ಯಾಪ್ಟರ್ ಇಳಿಸಿದ್ದೇವೆ; ಡಿಡಿಟಿ ಸಿಂಪಡಿಸಿ ಮಲೇರಿಯ ಕೀಟಾಣುಗಳನ್ನು ನಾಶಮಾಡಿದ್ದೇವೆ; ನೆಲದಾಳದ ಖನಿಜ ಕೊರೆದು ಅಣುಶಕ್ತಿ ಪಡೆದಿದ್ದೇವೆ; ಸಮುದ್ರದಾಳದಲ್ಲೂ ಕಿಂಡಿ ಕೊರೆದು.... ಇತ್ಯಾದಿ ಸಾಹಸಗಳಿಂದಾಗಿ ನಿಸರ್ಗವನ್ನು ಇನ್ನೇನು ಸಂಪೂರ್ಣವಾಗಿ ನಮ್ಮ ದಾಸ್ಯಕ್ಕೆ ಒಳಪಡಿಸಿಕೊಂಡುಬಿಟ್ಟಿದ್ದೇವೆ.

ಆದರೆ ನಾವು ತಿಳಿದುಕೊಂಡಂತೆ ನಿಸರ್ಗ ನಮಗೆ ಸೋತು ಶರಣಾಗಿಲ್ಲ. ಸರಿಪಡಿಸಲಾರದಷ್ಟು ವಿಕೃತವಾಗಿದೆ. ಅಪರೂಪಕ್ಕೆ ಅಲ್ಲಲ್ಲಿನ ಕೆಲವು ಭಾಗಗಳಲ್ಲಿ ಪ್ರಕೃತಿ ತನ್ನತನವನ್ನು ಉಳಿಸಿಕೊಂಡಿದ್ದರೂ, ಇನ್ನು ಹೆಚ್ಚುದಿನ ಉಳಿಸಿಕೊಳ್ಳಲಾರದಷ್ಟು ಕ್ಷೀಣವಾಗಿದೆ.

ಹಾಗಿದ್ದರೆ ಮಾನವಕುಲದ ವಿಕಾಸಪಥದಲ್ಲೇ ದೋಷವಿದೆಯೆ? ಇತರ ಪ್ರಾಣಿಗಳ ಜತೆ ಪೈಪೋಟಿ ನಡೆಸಿ ತನ್ನ ಬುದ್ಧಿಮತ್ತೆಯಿಂದಾಗಿ ಪ್ರಗತಿ ಹೊಂದಿದ ಈ ಪ್ರಾಣಿಗೆ ತನ್ನದೇ ಅಸ್ತಿತ್ವವನ್ನು ಉಳಿಸಿಕೊಳ್ಳುವಷ್ಟು ಬುದ್ಧಿಯಿಲ್ಲವೆ? ನಮ್ಮ ವಿಕಾಸಪಥವನ್ನು ಬದಲಿಸಬೇಕಾಗಿ ಬಂದಿದೆಯೆ?" (ಲೆಸ್ಟರ್ ಬ್ರೌನ್ : 'ಸವತೋಲ ಸಮಾಜದೆಡೆ ಆರು ಹೆಜ್ಜೆಗಳು' (ಸಿಕ್ಸ್ ಸ್ಟೆಪ್ಸ್ ಟು ಎ ಸೆಸ್ಟೈನಬಲ್ ಸೊಸೈಟಿ, ೧೯೮೨)

–೪–

ಏಕಮುಖ ಬೆಳವಣಿಗೆಯಿಂದಾಗಿಯೇ ಇಂದು ನಾವು ನೂರಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆಂದೂ, ಬೆಳವಣಿಗೆಯನ್ನೇ ಸ್ಥಗಿತಗೊಳಿಸಿದರೆ ಎಲ್ಲ ಸರಿಹೋಗುತ್ತದೆಂದೂ ಕೆಲವವರು ವಾದಿಸುತ್ತಾರೆ. ಇದಕ್ಕೆ ತದ್ವಿರುದ್ಧವಾದ ವಾದವೂ ಅದೇ ಗುರಿಯನ್ನೇ ಸೂಚಿಸುತ್ತದೆ. ಅಂದರೆ, ನಿರಂತರವಾಗಿ (ಸಂಶೋಧನೆಗಳೇ ಮುಂತಾದ ಎಲ್ಲ ರಂಗಗಳಲ್ಲೂ) ಬೆಳವಣಿಗೆ ಮುಂದುವರಿದರೇನೇ ಇಂದಿನ ಸಮಸ್ಯೆಗಳಿಗೆಲ್ಲ ಪರಿಹಾರವೆನ್ನುವವರೂ ಇದ್ದಾರೆ. 'ಬೆಳವಣಿಗೆ' ಅಥವಾ 'ಪ್ರಗತಿ' ಎಂಬ ಪದಕ್ಕೆ ನಿಖರವಾದ ವ್ಯಾಖ್ಯೆಯನ್ನೇ ಕೊಡದೆ ಬೆಳವಣಿಗೆ ಬೇಕು ಅಥವಾ ಸಾಕು ಎನ್ನುವುದು ಅರ್ಥಹೀನವಾಗುತ್ತದೆ. ಜನಸಂಖ್ಯೆಯ ಬೆಳವಣಿಗೆ ಸಾಕು ಎಂಬುದನ್ನಂತೂ ಎಲ್ಲರೂ ಒಪ್ಪುತ್ತಾರೆ. ಹಾಗೆಯೇ ಆರೋಗ್ಯ ವಿಕಾಸಕ್ಕಾಗಿ ವೈದ್ಯಕೀಯ ಸಂಶೋಧನೆಗಳು ಇನ್ನಷ್ಟು ಬೆಳವಣಿಗೆಯಾಗಬೇಕೆನ್ನುವುದೂ ನಿರ್ವಿವಾದದ ಸಂಗತಿ. ಆದರೆ ಹಾಗೆ ಮಾಡಿದರೆ ಜನಸಂಖ್ಯೆಯೂ ಮತ್ತೆ ಹೆಚ್ಚುತ್ತ ಹೋಗುತ್ತದೆ. ಸಂಪನ್ಮೂಲಗಳ ಬಳಕೆಯ ಕುರಿತೂ ಇಂಥ ವಿರೋಧಾಭಾಸಗಳು ಎದುರಾಗುತ್ತವೆ. ಈ ರಂಗದಲ್ಲಿ ಬೆಳವಣಿಗೆ ಹೆಚ್ಚಾದರೆ ಶ್ರೀಮಂತ ರಾಷ್ಟ್ರಗಳಲ್ಲಿ ಪೋಲು ಮಾಡುವ ಪ್ರವೃತ್ತಿಯೂ ಬೆಳೆಯುತ್ತದೆ. ಹಾಗೆಂದು ಸಂಪನ್ಮೂಲಗಳ ಬೆಳವಣಿಗೆ ಸ್ಥಗಿತಗೊಳಿಸಿದರೆ ಬಡರಾಷ್ಟ್ರಗಳು ಇನ್ನಷ್ಟು ತತ್ತರಿಸಬೇಕಾಗುತ್ತದೆ.

ಈ ಗೋಜನ್ನು ನಿವಾರಿಸಿಕೊಳ್ಳಬೇಕೆಂದರೆ ನಿಸರ್ಗದಲ್ಲಿ ದೊರೆಯುವ ಉದಾಹರಣೆಯನ್ನೇ ಬಳಸಿಕೊಂಡು 'ಬೆಳವಣಿಗೆ'ಯ ಅರ್ಥ ಹುಡುಕಬೇಕಾಗುತ್ತದೆ. ನಿಸರ್ಗದ ಜೀವರಾಶಿಗಳಲ್ಲಿ ಎರಡು ಬಗೆಯ ಬೆಳವಣಿಗೆ ಕ್ರಮವನ್ನು ನಾವು ನೋಡಬಹುದು. ಒಂದು 'ಏಕತಾನದ ಬೆಳವಣಿಗೆ', ಇನ್ನೊಂದು 'ಜೈವಿಕ ಬೆಳವಣಿಗೆ ಏಕತಾನದ ಬೆಳವಣಿಗೆ ಕ್ರಮವೆಂದರೆ ಪ್ರತಿಯೊಂದು ಜೀವಕೋಶವೂ ಒಡೆದು ಒಂದಕ್ಕೆ ಎರಡಾಗುವುದು. ಒಂದರಿಂದ ಎರಡು, ಎರಡರಿಂದ ನಾಲ್ಕು, ನಾಲ್ಕರಿಂದ ಎಂಟು.... ಹೀಗೇ ಕೋಟ್ಯಾಂತರ ಜೀವಕೋಶಗಳು ಏಕರೂಪದಲ್ಲಿ ಬೆಳೆಯುವುದು. ತಾಸಿಗೊಮ್ಮೆ ಹೀಗೆ ದ್ವಿಗುಣಿತವಾಗುತ್ತ ಹೋದರೆ ಒಂದು ಜೀವಕೋಶ ೨೪ ತಾಸುಗಳಲ್ಲಿ ೧೭೦ ಲಕ್ಷ ಜೀವಕೋಶಗಳನ್ನೂ ೪೮ ತಾಸುಗಳಲ್ಲಿ ೨೮೦,೦೦,೦೦೦,೦೦೦,೦೦೦ ತದ್ರೂಪಿ ಜೀವಕೋಶಗಳನ್ನೂ ಉತ್ಪಾದಿಸಬಲ್ಲದು. ಕ್ಯಾನ್ಸರ್ ಕೋಶಗಳು ಬೆಳೆಯುವ ವಿಧಾನ ಇದೇ.

'ಜೈವಿಕ ಬೆಳವಣಿಗೆ' ಬೇರೆ ಬಗೆಯದು: ತಾಯಿಯ ಭ್ರೂಣದಲ್ಲಿ ಶಿಶುವಿನ ಜೀವಕೋಶ ಬೆಳೆದಂತೆ, ಒಂದೊಂದು ಬಗೆಯ ಕೋಶಕ್ಕೂ ಒಂದೊಂದು ಬಗೆಯ ಸ್ವರೂಪ; ವಿಭಿನ್ನ ಕೆಲಸ. ಒಂದು ಮೆದುಳಿನ ಕೋಶವಾಗಿ ವಿಭಜನೆಯಾಗುತ್ತ ಬೆಳೆದರೆ, ಇನ್ನೊಂದು ಮೂಳೆಯ ಕೋಶವಾಗಿ ಬೆಳೆಯುವುದು. ಕೆಲವು ಕೋಶಗಳಿಗೆ ಸದಾ ಬೆಳವಣಿಗೆ, ಇನ್ನು ಕೆಲವಕ್ಕೆ ಒಮ್ಮೆ ಮಾತ್ರ ಬೆಳಗಣಿಗೆ, ಉದಾಹರಣೆಗೆ ಮಾನವ ಶರೀರದ ಬಹಳಷ್ಟು ಭಾಗ ಸದಾ ಪುನರ್ ನಿರ್ಮಾಣವಾಗುತ್ತಲೇ ಇರುತ್ತದೆ. (ಮಿದುಳಿನ ನರಕೋಶಗಳು ಮಾತ್ರ ಒಮ್ಮೆ ಬೆಳೆದು ಕೆಲಸ ಪ್ರಾರಂಭಿಸಿದ ಮೇಲೆ ಮತ್ತೆ ಚಿಗುರುವುದಿಲ್ಲ. ಸತ್ತರೆ ಮತ್ತೆ ನಿರ್ಮಾಣವಾಗುವುದಿಲ್ಲ.) ಆದರೆ ದೇಹದ ಉಳಿದ ಅಂಗಗಳ ಜೀವಕೋಶಗಳು ಹುಟ್ಟುತ್ತ ಸಾಯುತ್ತಿರುತ್ತವೆ. ಸುಮಾರು ಪ್ರತಿ ಏಳು ವರ್ಷಗಳಿಗೊಮ್ಮೆ ಶರೀರ ಕಣಕಣವಾಗಿ ಪುನರ್ನಿರ್ಮಾಣವಾಗಿರುತ್ತದೆ.

ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ನಾವು ಹಾಕಿಕೊಳ್ಳಬೇಕಾದ ಬೆಳವಣಿಗೆಯ ವಿಧಾನ ಕ್ಯಾನ್ಸರ್ ನಂತಿರಬಾರದು. ಮಾನವ ಚಟುವಟಿಕೆಯ ಕೆಲವು ರಂಗಗಳಲ್ಲಿ ಬೆಳವಣಿಗೆ ಸಂಪೂರ್ಣ ಸ್ಥಗಿತವಾಗಿ, ಕೆಲವು ರಂಗಗಳಲ್ಲಿ ಹಂತ ಹಂತದ ಬೆಳವಣಿಗೆಯಾಗುವ "ಜೈವಿಕ ವಿಧಾನ" ನಮ್ಮದಾಗಬೇಕು. ಇಂದಿನ ಸಮಾಜ ಮೊದಲಿನಂತಿಲ್ಲ. ಇಂದು ಜಗತ್ತಿನ ಯಾವ ಭಾಗವೂ, ಯಾವ ಚಟುವಟಿಕೆಯೂ ಇತರರಿಗೆ ಸಂಬಂಧವಿಲ್ಲದಂತೆ ಕಾರ್ಯ ನಿರ್ವಹಿಸುವುದು ಸಾಧ್ಯವಿಲ್ಲ. 'ವಸುಧೈವ ಕುಟುಂಬಕಮ್' ಎಂಬ ಮಾತೂ ಹಳತಾಗಿ ಈಗ 'ವಸುಧೈವ ಶರೀರಕಂ' ಎನ್ನಬೇಕಾದ ಹಂತದಲ್ಲಿ ನಾವಿದ್ದೇವೆ. ಇಡೀ ಮಾನವಕುಲವೇ ಒಂದು ಸಜೀವ ಶರೀರವೆಂಬಂತೆ ಒಟ್ಟಾಗಿ ಸಮಸ್ಯೆಗಳೊಂದಿಗೆ ಸೆಣಸಾಡಬೇಕಾಗಿದೆ.

–೫–

**'ಮಾಸ್ಟರ್ ಪ್ಲಾನ್'**

ನಿಸರ್ಗದಲ್ಲಿ, ಕಾಯಿಯೊಳಗಿನ ಬೀಜ ಸಸಿಯಾಗುವಾಗ ಅಥವಾ ತಾಯಿಯೊಳಗಿನ ಭ್ರೂಣ ಶಿಶುವಾಗುವಾಗ ಪ್ರತಿ ಜೀವಾಣುವಿನಲ್ಲೂ ಒಂದು ನಿರ್ದಿಷ್ಟ ಬೆಳವಣಿಗೆಯ ಸೂತ್ರ (ಮಾಸ್ಟರ್ ಪ್ಲಾನ್) ಅಡಕವಾಗಿರುತ್ತದೆ. ಈ ಸೂತ್ರದ ಪ್ರಕಾರವೇ ಯಾವ ಯಾವ ಕೋಶಗಳು ಎಷ್ಟೆಷ್ಟು ಬೆಳೆದು ಎಂಥೆಂಥ ಅಂಗಗಳಾಗಿ ಕಾರ್ಯನಿರ್ವಹಿಸಬೇಕೆಂಬ ಸೃಷ್ಟಿ ನಿಯಮವಿದೆ.

ಮಾನವಕುಲವೇ ಒಂದು ಸಜೀವ ಶರೀರವೆಂಬಂತೆ ವ್ಯವಸ್ಥಿತವಾಗಿ ಬೆಳೆಯಬೇಕಾದರೆ ಇಂಥದೊಂದು 'ಮಾಸ್ಟರ್ ಪ್ಲಾನ್' ತೀರ ಅವಶ್ಯ. ಈವರೆಗೆ ನಾವು ಅನುಸರಿಸಿದ್ದು ಕ್ಯಾನ್ಸರ್ ರೂಪದ ಏಕತಾನದ ಬೆಳವಣಿಗೆ ವಿಧಾನ. (ಇಡೀ ಜಗತ್ತಿಗೆ ಇಂದು ಕ್ಯಾನ್ಸರ್ ಹಬ್ಬುತ್ತಿದೆ; ಮನುಷ್ಯನೇ ಕ್ಯಾನ್ಸರ್ ಕೋಶ ಎಂದು ಎ. ಗ್ರೇಗ್ ಎಂಬಾತ ೧೯೫೫ರಲ್ಲಿ ಹೇಳಿದ್ದ.) ಈ ವಿಧಾನದ ಪ್ರಗತಿಪಥವನ್ನು ಬಿಟ್ಟುಕೊಟ್ಟು ಜೈವಿಕ ವಿಧಾನದ ಬೆಳವಣಿಗೆಯನ್ನು ಅನುಸರಿಸಬೇಕೆಂದರೆ ಪ್ರತಿಯೊಬ್ಬ ಮಾನವನೂ ತನ್ನ ಬದುಕಿನಲ್ಲಿ ಅಷ್ಟಿಷ್ಟು ಮಾರ್ಪಾಡು ಮಾಡಿಕೊಳ್ಳಲೇಬೇಕು. ನಮ್ಮದು ಬಡರಾಷ್ಟ್ರವಾಗಿರಲಿ, ಧನಿಕದೇಶವಾಗಿರಲಿ, ಪ್ರಕೃತಿಯನ್ನು ದೋಚುವ ದುಂದು ಪ್ರವೃತ್ತಿಯನ್ನು ಕಡಿಮೆ ಮಾಡಲೇಬೇಕು. ರಾಷ್ಟ್ರದ ಗಡಿ ಸಂರಕ್ಷಣೆಗಾಗಿ ಪ್ರತಿ ವರ್ಷ ಮಾನವಕುಲ ವೆಚ್ಚ ಮಾಡುವ ೫೫೦೦ ಶತಕೋಟಿ ರೂಪಾಯಿಗಳ ಧನಧಾರೆ ನಿಲ್ಲಬೇಕು. ರಾಷ್ಟ್ರೀಯ ಭದ್ರತೆಯ ವ್ಯಾಖ್ಯೆ ಬದಲಾಗಬೇಕು, ಮಿಲಿಟರಿಯ ಮೂಲಕವೇ ದೇಶದ ಸಂರಕ್ಷಣೆಯಾದೀತೆಂಬ ಧೋರಣೆ ಬದಲಾಗಬೇಕು. ಇಂದು ಶಕ್ತ ರಾಷ್ಟ್ರಗಳೂ ತತ್ತರಿಸುತ್ತಿರುವುದು ಗಡಿಯಾಚೆ ಕೂತಿರುವ ವೈರಿಯ ಭಯದಿಂದಲ್ಲ: ಗಡಿಯೊಳಗೇ ಕುದಿಯುತ್ತಿರುವ ಪ್ರಜಾಕೋಟಿಯ ಸಮಸ್ಯೆಗಳಿಂದ: ಶುದ್ಧಗಾಳಿಯ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಸಂಪನ್ಮೂಲ ಸಮಸ್ಯೆ, ಮಳೆ ಬೆಳೆಯ ಸಮಸ್ಯೆ....

ಅಣ್ವಸ್ತ್ರಗಳ ಪ್ರಯೋಗದಿಂದ ಈ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಿಲ್ಲ, ಭೀಕರ ಲೇಸರ್ ಶಸ್ತ್ರಗಳನ್ನು ಹೊತ್ತ ಹತ್ತು ತಲೆಯ ಖಂಡಾಂತರ ಕ್ಷಿಪಣಿಗಳೂ ಈ ಸಮಸ್ಯೆಗಳಿಗೆ ಪರಿಹಾರ ದೊರಕಿಸಲಾರವು, ನೂರಾರು ಮಾರಕಾಸ್ತ್ರಗಳನ್ನು ಹೊತ್ತು ಗಗನದಲ್ಲಿ ಗಸ್ತು ತಿರುಗುವ ಗೂಢಚಾರಿ ಉಪಗ್ರಹಗಳೂ ಮಾನವನ ಸಂಕಟ ಸಮಯಕ್ಕೆ ನೆರವಿಗೆ ಬರಲಾರವು.

–೬–

**ಏಕೈಕ ಭೂಮಿ**

ಕಂಗೆಟ್ಟ ಭೂಮಿಯನ್ನು ಮತ್ತೆ ಸುಸ್ಥಿತಿಗೆ ತರಬೇಕೆನ್ನುವಲ್ಲಿ ಒಂದು ಬಹು ಮೂಲ್ಯ ಕಾರಣವಿದೆ. ಇಡೀ ವಿಶ್ವದಲ್ಲಿ ಜೀವಿಗಳಿರಬಹುದಾದ ಬೇರೆ ಯಾವ ಗ್ರಹಗಳೂ ನಮ್ಮ ಗಮನಕ್ಕೆ ಈವರೆಗೆ ಬಂದಿಲ್ಲ. ಚಂದ್ರನ ಮೇಲೆ ಇಳಿದು ಸ್ವತಃ ನೋಡಿಯಾಯಿತು. ಬರೀ ಬರಡೋ ಬರಡು, ಬುಧ, ಮಂಗಳ, ಗುರು, ಶನಿಗ್ರಹಗಳವರೆಗೂ ಯಂತ್ರದೂತರನ್ನು ಕಳಿಸಿಯಾಯ್ತು. ಅಲ್ಲೆಲ್ಲೂ ಜೀವದ ಸುಳಿವಿಲ್ಲ. ದೂರದರ್ಶಕದ ಮೂಲಕ, ರೇಡಿಯೋ ಸಂಕೇತಗಳ ಮೂಲಕ ನಮ್ಮ ಸುತ್ತಲ ಎಲ್ಲ ಗ್ರಹತಾರೆಗಳನ್ನೂ ವೀಕ್ಷಿಸಿಯಾಯಿತು, ಸಂದೇಶ ಕಳಿಸಿಯಾಯ್ತು. ಓಗೊಡುವವರು ಮಾತ್ರ ಯಾರೂ

ಕಂಡುಬಂದಿಲ್ಲ. ಜೀವರಾಶಿ ತುಂಬಿ ತುಳುಕುವ, ತುಂಬ ಅಪರೂಪದ ಏಕಾಕಿ ಭೂಮಿ ನಮ್ಮದು. ಇದನ್ನು ಉಳಿಸಿಕೊಳ್ಳಬೇಕು.

ವಿವರಣೆ

- ಗ್ರಹಿಕೆಯ ಸೌಕರ್ಯಕ್ಕಾಗಿ ಈ ಲೇಖನವನ್ನು ಆರು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.
- ವಿಜ್ಞಾನದ ಪರಿಭಾಷೆಯನ್ನರಿಯದ, ಆದರೆ ಅದರ 'ಪ್ರಯೋಗಗಳ ಪರಿಣಾಮಗಳನ್ನು ಅನುಭವಿಸುವ ಓದುಗ ವರ್ಗವನ್ನು ತಲುಪುವುದು ಈ ಲೇಖನದ ಗುರಿ. ಆದ್ದರಿಂದಲೇ ಕಾಲಾನುಕ್ರಮಣಿಕೆಯಲ್ಲಿ ಇತಿಹಾಸವನ್ನು ನಿರೂಪಿಸುವ ರೀತಿಯಲ್ಲಿ ಈ ಲೇಖನ ಪ್ರಾರಂಭವಾಗುತ್ತದೆ.
- ಲೇಖನದ ಒಂದು, ಎರಡು ಹಾಗೂ ಮೂರನೆಯ ಭಾಗಗಳನ್ನು ಗಮನಿಸೋಣ. ಮೊದಲಿಗೆ 'ವಸ್ತುಸ್ಥಿತಿ'ಯನ್ನು ವಿವರಿಸುವುದು; ಆ ಮೂಲಕ ಸಮಸ್ಯೆಗಳನ್ನು ಮಂಡಿಸುವುದು. ಆ ಭಾಗದ ಕೊನೆಯಲ್ಲಿ ಆ ಸಮಸ್ಯೆಗಳಿಗೆ ಸಂಬಂಧಿಸಿದ ಮುಖ್ಯವಾದ ಪ್ರಶ್ನೆಗಳನ್ನು ಎತ್ತುವುದು – ಈ ವಿಧಾನವನ್ನು ಇಲ್ಲಿಯ ನಿರೂಪಣೆ ಅನುಸರಿಸಿದೆ. ಓದುಗನನ್ನು ಸಂವಾದದ ಭಾಗವನ್ನಾಗಿ ಮಾಡಿಕೊಳ್ಳಬೇಕೆಂಬ ಕಾಳಜಿ ಇದರ ಹಿಂದಿರುವುದನ್ನು ಗುರುತಿಸಬಹುದು.
- ಕೆಲವೊಂದು ಸಂಗತಿಗಳನ್ನು ಲೇಖನ ತಿಳಿಸುತ್ತಲೇ, ಆ ಸಂಗತಿಗಳನ್ನು ಹೇಗೆ ವ್ಯಾಖ್ಯಾನಿಸಲಾಗಿದೆ ಎಂಬುದನ್ನು ಇಲ್ಲಿ ಮುಂದಿಡಲಾಗುತ್ತದೆ. ಬಳಿಕ ಆ ವ್ಯಾಖ್ಯಾನಕ್ಕೆ ಪ್ರತಿಯಾದ ಬೇರೊಂದು ವಾದಸರಣಿಯನ್ನು ಮಂಡಿಸಲಾಗುತ್ತದೆ.

  ಉದಾ: ೧ ನಿಸರ್ಗದ ಮೇಲೆ ಮಾನವನ ಹತೋಟಿ
  ೨. ಆ ಕುರಿತಾದ ನಮ್ಮ ಹೆಮ್ಮೆ
  ೩. ಈ ಅಭಿಪ್ರಾಯವನ್ನು ಮರುಪರಿಶೀಲಿಸಬೇಕಾದ ಅಗತ್ಯ.

- ತಿಳಿಯದಿರುವುದನ್ನು ತಿಳಿಸಿ, ಆ ಮೂಲಕ ಹೆಚ್ಚಿನ ತಿಳಿವಳಿಕೆಯ ಕಡೆಗೆ ಕರೆದುಕೊಂಡುಹೋಗುವುದು ಇಲ್ಲಿನ ವಿಧಾನ. 'ಏಕತಾನದ ಬೆಳವಣಿಗೆ' ಹಾಗೂ 'ಜೈವಿಕ ಬೆಳವಣಿಗೆ'ಗಳನ್ನು ವಿವರಿಸಿರುವ ರೀತಿ ಇದ್ದಕ್ಕೆ ನಿದರ್ಶನವಾಗಿದೆ.
- ಮೊದಲಿಗೆ ಈ ನೆಲಕ್ಕೆ ಸಂಬಂಧಿಸಿದ ಬಿಡಿ ಬಿಡಿ ವಿವರಗಳನ್ನು ಮುಂದಿಡುವ ಲೇಖನ, ಬಳಿಕ ಹಂತ ಹಂತವಾಗಿ ಸಮರ್ಥನೆಯ ನೆಲೆಗೆ ನಮ್ಮನ್ನು ಕರೆದೊಯ್ಯುತ್ತದೆ. ಕೊನೆಯಲ್ಲಿ ಮನುಕುಲ, ಭೂಮಿ, ಬಳಿಕ ಸಮಗ್ರ ವಿಶ್ವವನ್ನೇ ಗಮನಕ್ಕೆ ತೆಗೆದುಕೊಂಡು ನಿರ್ಣಯದ ಮಂಡನೆಯಲ್ಲಿ ತೊಡಗುತ್ತದೆ. ಲೇಖನದ ಉದ್ದಕ್ಕೂ ಬೆಳೆಯುವ ತರ್ಕಸರಣಿಯಿಂದ ಈ ನಿರ್ಣಯ ಹೇಗೆ ಹೊರಹೊಮ್ಮುತ್ತದೆ ಎಂಬುದನ್ನು ಪರಿಶೀಲಿಸಬಹುದು.

**ವಿಸ್ತರಣೆ**

- 'ಪ್ರಗತಿ' ಎನ್ನುವುದರ ವಿವರಣೆಯನ್ನು ಈವರೆಗೆ ನಾವು ಗೃಹೀತವಾಗಿ ತೆಗೆದುಕೊಂಡಿದ್ದೇವೆ. ಆದರೆ ಪ್ರಗತಿಯ ನಿಜವಾದ ಮುಖ ಯಾವುದು ಎಂಬುದನ್ನು ಈ ಲೇಖನ ಹೇಳಲು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ನಮ್ಮ ಪ್ರತಿಕ್ರಿಯೆ ಏನು?

೧. ಇಲ್ಲಿ ಮಂಡಿತವಾಗಿರುವ ವಸ್ತುಸ್ಥಿತಿಯನ್ನು ವಿವರಗಳ ಮಟ್ಟಿಗೆ ಒಪ್ಪುತ್ತೇನೆ. ಆದರೆ ನಿರ್ಣಯವನ್ನು ಒಪ್ಪಲು ಸಿದ್ಧವಿಲ್ಲ.

೨. ವಸ್ತುಸ್ಥಿತಿಯ ವಿವರಗಳನ್ನು ಮಾತ್ರವಲ್ಲದೆ ನಿರ್ಣಯಗಳನ್ನೂ ಒಪ್ಪುತ್ತೇನೆ. ನಮ್ಮ ಪ್ರತಿಕ್ರಿಯೆ ಮೊದಲನೆಯದಾದರೆ ನಾವು ತೆಗೆದುಕೊಳ್ಳಬಹುದಾದ ಬೇರೊಂದು ನಿರ್ಣಯ ಏನೆಂಬುದನ್ನು, ಎರಡನೆಯದಾದರೆ ಆ ನಿರ್ಣಯವನ್ನು ಒಪ್ಪಿದ ಮೇಲೆ ನಮ್ಮ ಜವಾಬ್ದಾರಿ ಏನೆಂಬುದನ್ನು ಚರ್ಚಿಸಬಹುದು.

- ಪ್ರಸ್ತುತ ಸಾಮಾಜಿಕ ಹಾಗೂ ಆರ್ಥಿಕ ಸನ್ನಿವೇಶಗಳಲ್ಲಿ ಯಾವುದನ್ನು 'ಪ್ರಗತಿ' ಎಂದು ಕರೆಯಲಾಗುತ್ತಿದೆಯೋ ಅದರ ವಕ್ತಾರರು/ಪ್ರತಿಪಾದಕರು ಈ ಲೇಖನಕ್ಕೆ ಹೇಗೆ ಪ್ರತಿಕ್ರಿಯಿಸಬಹುದು? ಆ ಪ್ರತಿಕ್ರಿಯೆಗೆ ಮರು ಪ್ರತಿಕ್ರಿಯೆಯನ್ನು ತೋರುವ ನಿಟ್ಟಿನಲ್ಲಿ ನಮ್ಮ ಚರ್ಚೆಯನ್ನು ಮುಂದುವರಿಸಬಹುದು.
- ವಾದವೊಂದನ್ನು ಮಂಡಿಸಲು ಬೇರೆ ಬೇರೆ ವಿಧಾನಗಳನ್ನು ಅನುಸರಿಸುವುದುಂಟು.

  ಉದಾ:

  ಹಂತ ೧: ಚರ್ಚಿಸಬೇಕಾಗಿರುವ ಸನ್ನಿವೇಶದ ಸಂಗತಿಯ ವಿವರಗಳನ್ನು ಪರ/ವಿರೋಧಗಳ ನಿಲುವನ್ನು ತೆಗೆದುಕೊಳ್ಳದೆ ನಿರೂಪಿಸುವುದು.

ಹಂತ ೨ : ಅದರ ಬಗೆಗಿನ ವಾದವನ್ನು ಹೇಳಿಕೆಗಳ ಮೂಲಕ ಅಥವಾ ಪ್ರಶ್ನೆಗಳ ಮೂಲಕ ಮಂಡಿಸುವುದು.

'ನಗರದಲ್ಲಿ ಹೆಚ್ಚಾಗುತ್ತಿರುವ ವಾಹನಗಳ ದಟ್ಟಣೆ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಮೇಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಿಮ್ಮ ವಾದವನ್ನು ಪರ/ವಿರೋಧವಾಗಿ ಮಂಡಿಸಿ

೧. ಕತ್ತರಿ ರಸ್ತೆಯಲ್ಲಿ ಮಾನವಕುಲ' (ಮ್ಯಾನ್ ಕೈಂಡ್ ಆಟ್ ದಿ ಟರ್ನಿಂಗ್ ಪಾಯಿಂಟ್) ಗ್ರಂಥದ ವಿಚಾರಸರಣಿ ಇದು.

**ಲೇಖಕರ ಪರಿಚಯ:** ನಾಗೇಶ ಹೆಗಡೆಉತ್ತರ ಕನ್ನಡ ಜಿಲ್ಲೆಯ 'ಬಕ್ಕೆ ಮನೆ' ಎಂಬ ಹಳ್ಳಿಯವರು, ಭೂವಿಜ್ಞಾನದಲ್ಲಿ ಎಂ.ಎಸ್ಸಿ ಪದವಿ ಮತ್ತು ದೆಹಲಿಯ ಜವಹರಲಾಲ್ ನೆಹರೂ ವಿ.ವಿ.ಯಲ್ಲಿ ೧೯೭೮ರಲ್ಲಿ ಪರಿಸರ ವಿಜ್ಞಾನದಲ್ಲಿ ಎಂ.ಫಿಲ್ ಪದವಿ ಪಡೆದು ನೈನಿತಾಲ್ ವಿ.ವಿಯಲ್ಲಿ ಪರಿಸರ ವಿಜ್ಞಾನ ಉಪನ್ಯಾಸಕರಾಗಿ ಸೇವೆ ಸಲ್ಲಿದ್ದಾರೆ. ನಂತರ ಪತ್ರಕರ್ತರಾಗಿ, ಅಂಕಣ ಬರಹಗಾರರಾಗಿ ಪ್ರಸಿದ್ಧರಾಗಿದ್ದಾರೆ.ಇರುವುದೊಂದೇ ಭೂಮಿ, ನಮ್ಮೊಳಗಿನ ಬ್ರಹ್ಮಾಂಡ, ಮುಷ್ಟಿಯಲ್ಲಿ ಮಿಲೇನಿಯಂ, ಗಗನ ಸಖಿಯರ ಸೆರಗ ಹಿಡಿದು, ಅಭಿವೃದ್ಧಿಯ ಅಂಧಯುಗ ಮೊದಲಾದ ೨೩ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಇವರ ಬರಹಗಳು ಪರಿಸರ ಸಂರಕ್ಷಣೆಯ ಅನೇಕ ಚಳುವಳಿಗಳಿಗೆ ಬುನಾದಿ ಒದಗಿಸಿವೆ. ರಾಜ್ಯದ ಬಹುತೇಕ ವಿ.ವಿಗಳ ಪಠ್ಯಗಳಲ್ಲಿ ಇವರ ಬರಹಗಳಿವೆ. ಪತ್ರಿಕೋದ್ಯಮ, ಸಾಹಿತ್ಯವಲಯಗಳ ಇವರ ಗಮನಾರ್ಹ ಸೇವೆಗೆ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪ್ರೆಸ್ ಕ್ಲಬ್' ಪ್ರಶಸ್ತಿ ಮೊದಲಾದ ಅನೇಕ ಪ್ರಶಸ್ತಿಗಳು ಸಂದಿವೆ.

**ಪ್ರಶ್ನೆಗಳು:**

೧. ಸಮಸ್ಯೆಗಳ ಪರಿಹಾರಗಳು ಹೊಸ ಸಮಸ್ಯೆಗಳನ್ನು ಹೇಗೆ ಸೃಷ್ಟಿಸುತ್ತವೆ ಎಂಬುದನ್ನು ಲೇಖನ ಹಿನ್ನಲೆ ಚರ್ಚಿಸಿ
೨. ಮಾನವ ಕುಲ ಬೆಳೆದು ಬಂದ ಬಗೆಯನ್ನು ತಿಳಿಸಿ
೩. ಮನುಷ್ಯನ ಏಳಿಗೆಯೇ ಇಂದಿನ ಸಮಸ್ಯೆಗೆ ಕಾರಣವೆ ಚರ್ಚಿಸಿ
೪. ಮಾನವನ ಅಭಿವೃದ್ಧಿಯಿಂದ ನಿಸರ್ಗ ಸರಿಪಡಿಸಲಾರದಷ್ಟು ವಿಕೃತವಾಗಿದೆ ಹೇಗೆ? ವಿವರಿಸಿ.ಪ
೫. ಪ್ರಗತಿ ಮತ್ತು ಬೆಳವಣಿಗೆ ಅರ್ಥಗಳನ್ನು ತಿಳಿಸಿ
೬. ಪರಿಸರವನ್ನು ಉಳಿಸಬೇಕಾದರೆ ಮಾನವ ತನ್ನ ಬದುಕಿನಲ್ಲಿ ಮಾಡಿಕೊಳ್ಳಬೇಕಾದ ಮಾರ್ಪಾಡುಗಳೇನು? ತಿಳಿಸಿ.

## ಘಟಕ : ೪

# ೧. ಮಹಾತ್ಮ

**–ಗಂಗಾಧರ ಚಿತ್ತಾಲ**

**ಆಶಯ:** ಮನುಕುಲದ ಇತಿಹಾಸದಲ್ಲಿ ಗಾಂಧೀಜಿಯ ಕೊಲೆ ಅತ್ಯಂತ ಅಮಾನವೀಯ. ಮನುಷ್ಯರೂಪಿ 'ದೇವರಾದ' ಗಾಂಧೀಜಿ ಹತ್ಯೆಗೀಡಾದದ್ದು ಒಬ್ಬ ಸಿದ್ಧಾಂತಿಯಿಂದ. ಭಾರತೀಯರು ನಾಚಿಕೊಂಡ, ದುಖಃಸಿದ, ತಲೆತಗ್ಗಿಸಿದ ಈ ಕೃತ್ಯ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅಭಿವ್ಯಕ್ತಿಯಾಗಿರುವುದು ಗಮನಾರ್ಹ.

ನಿನ್ನ ನೆತ್ತರು ನೆಲಕೆ ಚೆಲ್ಲಿದಂದು
ಮಣ್ಣು ನಡುಗಿತು, ಹಗಲ – ಹೂ ಬಾಡಿತು,
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ,
ಉತ್ತಮರ ಬಲಿ ಇಲ್ಲಿ – ಬಾನಾಡಿತು.
ಮನುಕುಲದ ರಕ್ತಮಯ ಇತಿಹಾಸ ಕೂಗಿತು–
ನೆಲವು ನಂದನವಾಗಲೇನು ಬೇಕು?
ತಿಳಿವು ತುಂಬಿದ ಕಣ್ಣು, ಒಲವು ತುಂಬಿದ ಎದೆಯು,
ಛಲವನರಿಯದ ಬದುಕು, ಇಷ್ಟೆ ಸಾಕು.
ಅಂತೆ ತವಕದಿ ಬಂದೆ ಮನದ ಮಮತೆಯ ತಂದೆ
ಹಗೆಯ ಕಾಳೋರಗವ ತವಿಪೆನೆಂದೆ
ಇತ್ತ ಹಾಲಾಹಲವು ಅತ್ತ ಕೋಲಾಹಲವು
ಅಮೃತಹಾಸವ ಬೀರಿ ನಡೆದೆ ಮುಂದೆ.
ಬತ್ತಿದೆದೆಗಳಲು ತಿಳಿವಿನ ತೇವು ಒಡೆದಿತ್ತು
ಶಾಂತಿ – ಸಮರಸಕೆ ಇದು ಮೊದಲೆನಿಸಿತು.
ಕಲ್ಲೆದೆಯ ಸೀಮೆಯಲು ಹೂ – ಕುಸುರು. ಆಹಾ ಇದು
ಬರುವ ಭಾಗ್ಯದ ಯುಗದ ತೊದಲೆನಿಸಿತು.
ನರನ ಕಾಡಿನ ನಡತೆ ಇನ್ನೂ ಮುಗಿದಿರಲಿಲ್ಲ.
ನಿನ್ನ ಬೇಟೆಗೆ ತಾಯಿ – ಮಣ್ ನಡುಗಿತು,
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ,
ಇಂತ ಬಲಿ ಇನ್ನೇಸೊ! – ಬಾನ್ ಗುಡುಗಿತು.

**ಕವಿ ಪರಿಚಯ:** ಗಂಗಾಧರ ಚಿತ್ತಾಲ (೧೯೨೩–೧೯೮೭, ಉತ್ತರ ಕನ್ನಡದ ಹನೇಹಳ್ಳಿ) ಖ್ಯಾತ ಕವಿ. ಕಾಲದ ಕರೆ, ಮನುಕುಲದ ಹಾಡು, ಸಂಪರ್ಕ, ಹರಿವ ನೀರಿದು ಇವರ ಪ್ರಮುಖ ಕೃತಿಗಳು.

**ಪ್ರಶ್ನೆಗಳು:**

೧. ನರನ ನಡತೆ ಎಂತದು?
೨. 'ಬಲಿ' ದೇಶಕ್ಕೆ ನೀಡಿದ ಆಘಾತ ವಿವರಿಸಿ.
೩. ಕವಿಯ ದೃಷ್ಟಿಯಲ್ಲಿ 'ಬಲಿ'ಯ ಪರಿಣಾಮ ನಿರೂಪಿಸಿ.

# ೨. ತಾಯಿ

**–ಡಾ. ಯು.ಆರ್. ಅನಂತಮೂರ್ತಿ**

**ಆಶಯ:** ನಮ್ಮ ಜನಪದರು "ನದಿಮೂಲ, ಋಷಿಮೂಲ, ಮಾತೃಮೂಲವನ್ನು ಎಂದಿಗೂ ಹುಡುಕಬಾರದು" ಎಂದಿದ್ದಾರೆ. ಏಕೆಂದರೆ ಇವರುಗಳಿಂದ ಎಲ್ಲರಿಗೂ ಒಳ್ಳೆಯದೇ ಆಗುತ್ತದೇ ಹೊರತು ಕೆಡಕಾಗಲು ಸಾಧ್ಯವಿಲ್ಲ. ಹಾಗೆಯೇ ಪ್ರತಿಯೊಬ್ಬ ಮನುಷ್ಯನ ಜೀವನದಲ್ಲೂ ತಾಯಿಯ ಪಾತ್ರ ಪ್ರಮುಖವಾದುದು. ಜೀವ–ಜೀವನ ಎರಡನ್ನೂ ನೀಡುವವಳು ತಾಯಿ. ತಾಯಿ ಹೃದಯದ ಪ್ರೀತಿ, ನೋವನ್ನು ಇಲ್ಲಿ ಕಟ್ಟಿಕೊಡಲಾಗಿದೆ.

"...ರಾತ್ರಿ ಆಯ್ತು ಅಂದ್ರೆ ದುಷ್ಟ ಮೃಗಗಳ ಸಂಚಾರ ... ಆದ್ರೂನು ಆ ಕ್ರೂರಿ ತಾಯಿ ಮಗು ಇಡೀ ರೊಟ್ಟಿ ಬೇಕೂಂತ ಹಠ ಮಾಡ್ತದೆ ಅಂತ ಸಿಟ್ಟುಗೊಂಡು ಆ ಪುಟ್ಟ ಮಗೂನ ಅಂಗೈಕ್ಕೆ ದಬ್ಬಿ, ಅಗ್ಳಿ ಹಾಕ್ಕೊಂಡು ಬಂದು ಮತ್ತೆ ರೊಟ್ಟಿ ತಟ್ಟಕ್ಕೆ..."

"ಅವ್ವ ಕಥೆ ಹೇಳೋ ಹೊತ್ಗೆ ಅದ್ಯಾಕೆ ಹಾಗೆ ಅಳ್ತೀಯವ್ವ?"

"ಇಲ್ಲ ಮಗ. ಅಳ್ತ ಇಲ್ಲ ಮಗಾ"

ಪಕ್ಕದಲ್ಲಿ ಮಲಗಿದ್ದ ಮಗ ಶೀನು ಏನು ಹೇಳಿದರೂ ಕೇಳಲೊಲ್ಲ. ತಾಯಿಯ ಉತ್ತರಕ್ಕಾಗಿ ಒಂದೇ ಸಮನೆ ಪಟ್ಟು ಹಿಡಿದಿದ್ದಾನೆ. ಏನು ಮಾಡಿದರೂ ನಿದ್ದೆ ಹೋಗಲೊಲ್ಲನು. ಕಥೆ ಹೇಳಿ ಹೇಗೆ ತಾನೇ ಸಂತೈಸಿಯಾಳು ಅಬ್ಬಕ್ಕ?

"ಇಕೋ ರಾತ್ರಿ ಮಸ್ತಾಯ್ತು. ಕಥೆ ಕೇಳ್ತ ನಿದ್ದೆ ಮಾಡು ಮಗ. ಆಮೇಲೆ ಆ ಕೂಸಿಗೆ ಬಾಳ ಭಯ ಆಗಿ.."

ಇಲ್ಲ ಏನಾರೂ ಶೀನು ಕೇಳನು. ಸೀರೆಯ ಅಂಚಿನಿಂದ ಅಬ್ಬಕ್ಕ ಕಣ್ಣೊರೆಸಿಕೊಂಡು ಮಗನ ಬೆನ್ನು ಸವರುತ್ತ ಪುಸಲಾಯಿಸುವ ಧ್ವನಿಯಲ್ಲಿ ಹೇಳಿದಳು:

"ಮಾತಾಡಬೇಡ ಮಗಾ. ತೊಟ್ಟಿಲಲ್ಲಿ ಮಲಗಿದ ಕೂಸೆದ್ದೀತು. ಈಗ ಕಥೆ ಕೇಳು... ಹೇಳ್ತಿನಿ. ಆ ಕೂಸು ಅಷ್ಟು ಗಟ್ಟಿಯಾಗಿ ಅತ್ತರೂ ಆ ಪಾಪಿ ತಾಯಿ "

"ಊಹು ...ನಂಗೆ ಕಥೇ ಬೇಡ. ಬೆಳಗ್ನಿಂದ ಯಾಕೆ ಒಂದೇ ಸಮ್ನೆ ಹಾಗೆ ಅಳ್ತಾ ಇದಿ ಹೇಳು." ಎಂಟು ವರ್ಷವಾಗಿದ್ದರೂ ಬಲು ಬುದ್ಧಿ ಈ ಹಸುಳೆಗೆ ! ತಾಯಿಯೆಂದರೆ ಪ್ರಾಣ. ಯಾರಿಗಾದರೂ ಎದೆ ತೋಡಿ ತೋರಿಸದೆ ನಿರ್ವಾಹವಿಲ್ಲ. ಅಷ್ಟು ನೋಯುತ್ತಿದೆ ಅಬ್ಬಕ್ಕನ ಹೆತ್ತ ಕರುಳು. ಶೀನುವಿಗಾದರೂ ಹೇಳಬಾರದೇಕೆ?... ಹೇಳಬಹುದು... ಆದರೆ ಹೇಗೆ?

"ನಿಂಗೊಂದು ಹಿರೀ ಅಣ್ಣ ಇತ್ತು ಮಗಾ... ಇವತ್ತು ಅದ್ರ ಹುಟ್ಟಿದ ಹಬ್ಬ..."

"ಈಗೆಲ್ಲಿದ್ದಾನವ್ವ, ಅಣ್ಣ...?"

ಏನೆಂದು ತಾನೆ ಉತ್ತರ ಹೇಳಿಯಾಳು ಅಬ್ಬಕ್ಕ? ಯೋಚಿಸಿದಂತೆಲ್ಲಾ 'ಅಮಾಸೆ'ಯ ಕತ್ತಲೇ ಅವಳ ಎದೆ ತುಂಬಿ ಕಪ್ಪು ಹೊಯ್ಯುತ್ತದೆ.

ಅಣ್ಣ ಎಲ್ಲಿ ಹೋದೆನೆಂದು ಹೇಳಿಯಾಳು? ದಂಡು ಸೇರಿದನೆ? ಎಲ್ಲೋ ದೂರದಲ್ಲಿ ಹೋಟೆಲು ಸೇರಿದನೆ? ಗಿರಣಿ ಸೇರಿದನೆ? ಪೇಟೆಯಲ್ಲಿ ಕಂಡಕಂಡವರ ಸಾಮಾನು ಹೊತ್ತು ಕೂಲಿ ಮಾಡುವನೆ? ದಿಕ್ಕಿರದ ಪರದೇಶಿಯಂತೆ ಪ್ರಾಣಬಿಟ್ಟನೆ? ತಾಯಿಯನ್ನು ತೊರೆದ ಆ ಮಗುವಿಗ ಸುಖವೆ,ದುಃಖವೆ? ಏನು? ಏನುತಾನೆ ಹೇಳಿಯಾಳು? ಅವನನ್ನು ನೋಡದೆ ಎಂಟು ಹತ್ತು ವರ್ಷವಾದರೂ ಈಗಲೂ ತಾಯಿ ಮಗನನ್ನು ಗುರುತಿಸಬಲ್ಲಳು. ಹೆಸರು ಚೆಲುವನೆಂದು. ಹೆಸರಿನಂತೆಯೇ ನೋಡುವವರ ದೃಷ್ಟಿ ತಗಲುವಂತಹ ಚೆಲುವನವನು!

ನಸುಗಪ್ಪಿನ ಎತ್ತರದ ಆಳು. ಕೋಲುಮುಖ. ಬೇವಿನಸಳಂತಹ ಕುಡಿ ಹುಬ್ಬು. ಹಚ್ಚ ಹೊಯ್ದ ಎತ್ತರದ ಹಣೆ. ತುದಿಯಲ್ಲಿ ಬಾಗಿದ ಮೂಗು. ಶಿವನ ಕೈಯಲಗು ಹೊಳೆದಂತಹ ನೋಟದ ಆ ಚಿಕ್ಕ ದುಂಡು ಕಣ್ಣುಗಳು. ಸ್ವಲ್ಪ

ಗಾಂಭೀರ್ಯದಿಂದ ತುಸು ಗರ್ವದಿಂದ ಬಿಗಿದ ಮುದ್ರೆಯ ದಪ್ಪ ತುಟಿಗಳು. ಒರಟು ಗುಂಗುರು ಕೂದಲಿನ ಆ ದೊಡ್ಡ ತಲೆ. ನಿದ್ದೆಯಿಂದ ಈಗತಾನೇ ಎದ್ದು ಬಂದಂತಹ ಆ ನಿಧಾನವಾದ ನಡಿಗೆ...

ಎಲ್ಲವೂ ಕಣ್ಣಿಗೆ ಕಟ್ಟಿದಂತಿದೆ ಅಬ್ಬಕ್ಕನಿಗೆ. ಹತ್ತು ಹನ್ನೆರಡು ವರ್ಷ ಕಣ್ಣು ಗೊಂಬೆಯಂತೆ ಸಾಕಿದ ಚೆಲುವನ ರೂಪವನ್ನು ಹೇಗೆ ತಾನೆ ಮರೆತಾಳು ಅವಳು?

"ಅಣ್ಣ ಎಲ್ಲಿದ್ದಾನೆ ಹೇಳವ್ವ?

"ನಿನ್ನ ಅವ್ವನ ಮೇಲೆ ಸಿಟ್ಟು ಮಾಡಿ ದೂರ ಹೊಂಟ್ಹೋದ"

ಇದಕ್ಕಿಂತ ಹೆಚ್ಚು ಅಬ್ಬಕ್ಕ ಹೇಳಲಾರಳೂ, ಹೇಳಿದರೂ ಹೇಗೆ ತಿಳಿದೀತು ಈ ಮಗುವಿಗೆ?

"ಹೋಗೋದು ಬ್ಯಾಡಾಂತ ನೀಯಾಕೆ ಹೇಳ್ಲಿಲ್ಲವ್ವ?"

ಚೂರಿಯಂತೆ ನೆಡುತ್ತದೆ ಈ ಮಾತು ಅಬ್ಬಕ್ಕನ ಎದೆಯಲ್ಲಿ. ಅವನು ಹಾಗೆ ಹಟ ತೊಟ್ಟು ಹೊರಟೇಬಿಡುತ್ತಾನೆ ಎಂದು ತೋರಿದ್ದರೆ ಅವಳು ಸೆರಗೊಡ್ಡಿ ಬೇಡಿಕೊಳ್ಳುತ್ತಿರಲಿಲ್ಲವೆ? ಏನೋ ಹಾಳು ಸಿಟ್ಟಿನ ಭರದಲ್ಲಿ ಅವಳು ನಾಲ್ಕು ಬಿರುನುಡಿಯಾಡಿದ್ದು ನಿಜ.ಅಷ್ಟಕ್ಕೇನೇ ಅವ...

"ಅಪ್ಪಯ್ಯ ಯಾಕೆ ಬ್ಯಾಡ ಅನ್ಲಿಲ್ಲವ್ವ?"

ಶೀನು ಈ ಮಾತು ಆಡಿದ ಬಳಿಕ ಇನ್ನು ಹೇಳದೆ ವಿಧಿಯಿಲ್ಲ... ಎಷ್ಟು ದಿನವಂತ ಈ ಮಗುವಿನಿಂದ ಬಚ್ಚಿಡುವುದು ಸಾಧ್ಯ?

"ನಿನ್ನಪ್ಪಯ್ಯ ಬೇರೆ, ಅವ್ನಪ್ಪಯ್ಯ ಬೇರೆ ಮಗ, ಅವ್ನಪ್ಪಯ್ಯ ಸತ್ಹೋದ ಮೇಲೆ..."

ಬೇರೆ ಕೂಡಿಕೆ ಮಾಡಿಕೊಂಡಳು ಅಬ್ಬಕ್ಕ. ಅವನ ಅಪ್ಪಯ್ಯ ಅವನು ಹುಟ್ಟವಾಗಲೇ ತೀರಿಕೊಂಡರು. ಆಮೇಲೆ ಹದಿಮೂರು ವರ್ಷವೂ ಎಂತೆಂತಲೋ ಕೂಲಿನಾಲಿ ಮಾಡಿ ಒಬ್ಬಂಟಿಯಾಗಿ ಚೆಲುವನನ್ನು ಸಾಕಿದ ಮೇಲೆ ಈ ಕೂಡಿಕೆಯಾದದ್ದು... ಈ ವಿಷಯದಲ್ಲೇ ಅವಳಿಗೂ ಮಗನಿಗೂ ವೈಮನಸ್ಸು ತಲೆದೋರಿ...

ಇವೆಲ್ಲವನ್ನೂ ಹೇಳಿದರೆ ಆ ಮಗು ಶೀನುವಿಗೆ ಹೇಗೆ ತಿಳಿದೀತು?... ಎಂತಲೇ ಏನೂ ಅರ್ಥವಾಗದೆ ಮಗು ಮಾತನಾಡದೆ ಕಣ್ಣನ್ನು ಪಿಳಿಪಿಳಿ ಬಿಡುತ್ತ ಸುಮ್ಮನಾಗಿದೆ.

ಆ ಮೇಲೆ ... ಒಂಟಿಯಾಗಿ ಬಾಳಲಾರದೆ ಆ ಹೊಸ ಮೋಹಕ್ಕೆ ಸಿಲುಕಿ... ಹಾಗೆ ತಾನು ಮಾಡಬಾರದಿತ್ತೋ ಏನೋ?

ಆದರೆ ಅವಳ ಜಾತಿಯಲ್ಲದು ಆಗುವುದಿಲ್ಲವೆ? ಸೀತು ಮಾಡಿಕೊಂಡಿಲ್ಲವೆ? ಅಕ್ಕುವಿಗೆ ಮೂರು ಕೂಡಿಕೆಯಾಗಿಲ್ಲವೆ? ಐದು ಮಕ್ಕಳ ತಾಯಿ ಮೀಟಿ ಮೊನ್ನೆ ತಾನೆ ಆಗಲಿಲ್ಲವೆ? ಹೀಗಿದ್ದಾಗ ತನ್ನದು ತಪ್ಪೆ?
ಆದರೆ ಹದಿಮೂರು ವರ್ಷ ಪ್ರಾಯಕ್ಕೆ ಬಂದ ಪ್ರೀತಿಯ ಮಗ ಹೇಳಿದರೂ ಕೇಳದೆ ಆದದ್ದು?

ಹಾಗಾದರೆ ಚೆಲುವ ಕಂಡ ಕಂಡವರ ಜಾಡಿಗೆ ಒಲಿದು ತನ್ನೆದುರು ನಿಲ್ಲುವುದೆ? ಅದು ಸರಿಯೆ? ಕೈಯಾರೆ ಸಾಕಿದ ತಾಯಿಯ ಎದುರು ಕೈಯೆತ್ತಿ ನಿಲ್ಲುವುದೆ? ತಾಯಿ ಏನೋ ಕೋಪದ ಭರದಲ್ಲಿ ಏನಾದರೂ ಅಂದರೆ ಮನೆ ಬಿಟ್ಟು ಹೊರಟು ಹೋಗುವುದೆ? ಮಗನಾದವನಿಗೆ ಹೇಳಿಸಿದ ವರ್ತನೆಯೆ ಅದು?

ಅಯ್ಯೋ ತಾಯಿಯನ್ನರಿಯದ ಚೆಲುವ! ಅವ್ವನ ಒಲವಿನ ಆಳವನ್ನರಿಯದ ಹಸುಳೆ! ಪ್ರಾಯ ಬಂತೆಂದು ಹೊತ್ತು ಹೆತ್ತವಳನ್ನೂ ತೊರೆದು...

...ಎಂಟ್ಹೊಂಬತ್ತು ವರ್ಷವಾಯಿತು. ಒಮ್ಮೆಯೂ ಇತ್ತ ಮುಖ ಹಾಕಿಲ್ಲ. ಕಣ್ಣಿನಲ್ಲಿ ಎಣ್ಣೆಯಿಟ್ಟು ಹಾದಿಕಾಯುವ ತಾಯಿಗೊಂದು ಕಾಗದ ಬರೆದಿಲ್ಲ. ತಾಯಿಯ ಮುಖವನ್ನು ಒಮ್ಮೆಯಾದರೂ ನೋಡುವ ಆಸೆ ಇಲ್ಲದೆ ಹೋಯಿತೆ ಮಗುವಿಗೆ?

"ಅವ್ವ...ಘಟ್ಟದ ಕೆಳಗಿಂದ ಅಪ್ಪಯ್ಯ ಎಂದು ಬರ್ತಾರವ್ವ?...ಅವ್ರು ಬಂದ್ರೆ ನಿಂಗೆ ಹಿಂಗೆ ಆಳೋಕೆ ಬಿಡಲ್ಲ"

...ಎಷ್ಟು ಮುದ್ದಾಗಿ ಮಾತಾಡುತ್ತೆ ಈ ಹಸುಳೆ ಶೀನು! ಅದು ಹೇಳುವುದೂ ಸುಳ್ಳಲ್ಲ... ತನ್ನನೊಲಿದು ಕೈಹಿಡಿದವನು ಅಂಥವನೆ, ಎಂದೂ ಕಂಬನಿ ಕರೆಯಲು ಬಿಡುವನಲ್ಲ, ಇಲ್ಲದಿದ್ದರೆ ತಾನು ಅವನ ಕೈಹಿಡಿಯುತ್ತಿದ್ದಳೆ?

ಅವನ ಆ ತೀಡಿದ ಮೀಸೆ. ಕವಳ ಜಗಿದು ಕೆಂಪಾದ ಸದಾ ಮುಗುಳು ನಗುವ ತುಟಿಗಳು. ಎಲೆವಸ್ತ್ರದ ಮುಂಡಾಸಿನಿಂದ ಇಣುಕಿ ನೋಡುವ ಆ ನೀಳವಾದ ಕೂದಲು. ಆ ಹೊಲೆಯುವ ದೊಡ್ಡ ದೊಡ್ಡ ಒಂಟಿಗಳು. ಕೂಲಿ ಆಳುಗಳ ಜೊತೆ ಅವನು ಸೇರೆಗಾರಿಕೆ ನಡೆಸುವ ಠೀವಿ. ದೇವರಂತಹ ಮನುಷ್ಯ... ಅವಳ ಅವ್ವ ಬತ್ತ ಕುಟ್ಟುವಾಗ ಹಾಡುತ್ತಿದ್ದ ಆ ಪದದಲ್ಲಿ ವರ್ಣಿಸಿದಂತೆಯೇ ಹಾಸಿಗೆಯ ಹಾಸೆಂದಮಲ್ಲಿಗೆಯ ಮುಡಿಯೆಂದಬ್ಯಾಸೆತ್ತರ ಮಡದಿ ಮಲಗೆಂದ ಬ್ಯಾಸೆತ್ತರ ಮಡದಿ ಮಲಗೆಂದ ನನ ನೋಡಿ..." ತೌರೂರನ್ನೇ ಏಕೆ? ಪ್ರಪಂಚವನ್ನೇ ಮರೆ ಎಂದ ರಸಿಕ ಅವನು... ಹೌದು! ತುಂಬು ಯೌವ್ವನದ ತನಗೆ ಆಗ ಎಲ್ಲವೂ ಮರೆತದ್ದು ಆಶ್ಚರ್ಯವಲ್ಲ. ಆ ಮೋಹದಲ್ಲಿ ಮಗನ ಮೇಲಿನ ವಾತ್ಸಲ್ಯವೂ ಕ್ಷಣಕಾಲ ಮರೆಯಿತೋ ಏನೋ? ಅದಕೇ ಅಲ್ಲವೇ ಎಂದೂ ದುಡುಕದವಳು ಅಂದು ದುಡುಕಿದ್ದು. ಪ್ರೀತಿಯ ಮಗನನ್ನೂ ಜರಿದು ದೂರಿದ್ದು, ನನ್ನ ಸುಖಕ್ಕೆ ಅಡ್ಡಿಯಾದ ಚೆಲುವವನ್ನು ಧಿಕ್ಕರಿಸಿ ನಡೆದದ್ದು...

ಅಯ್ಯೋ! ತಾನು ಪಾಪಿಯಲ್ಲವೆ? ಅದು ಎಂತಹ ಮೋಹ? ಯಾವ ತಾಯಿಯ ಕರುಳೂ ಹಾಗೆ ಮಾಡಿರಲಿಕ್ಕಿಲ್ಲ. ಆಗ ನಾಲ್ಕು ಜನ ಆಡಿಕೊಂಡಂತೆ ತಾನು ಸೂಳೆಗಿಂತಲೂ ಅತ್ತತ್ತವಾಗಿ ನಡೆಯಲಿಲ್ಲವೇ? ತನ್ನನ್ನೊಲಿದವನು ಸಭ್ಯಸ್ಥ. ಆದರೆ ಆ ಹಾಳು ಮೋಹದ ದೆಸೆಯಿಂದಲೇ ಈಗ ಕೈ ತಪ್ಪಿ ಹೋದವನಲ್ಲವೇ ಮಗ?

ಎಲ್ಲಿ ಹೋಗುತ್ತ ಯಾವ ಹುಲಿಯ ಬಾಯಿಗೆ ತುತ್ತಾದನೋ? ಯಾವ ಕಳ್ಳ ಕಾಕರ ಕೈಗೆ ಸಿಕ್ಕನೊ. ಯಾವ ನದಿಗೆ ದುಃಖ ತಡೆಯಲಾರದೆ ಹಾರಿಕೊಂಡನೊ? ಎಲ್ಲಿ ಒಬ್ಬಂಟಿಯಾಗಿ ಹಸಿದು ಒದ್ದಾಡಿದನೊ? ತಾಯಿ ಇದ್ದೂ ಇಲ್ಲದ ಪರದೇಶಿಗೆ ಏನಾಯಿತೊ? ಇವತ್ತು ಅವನ ಹುಟ್ಟಿದ ಹಬ್ಬ. ಈಗ ಒಡನೆ ಇದ್ದಿದ್ದರೆ ಅವನಿಗೆ ವರ್ಷ ಇಪ್ಪತ್ತೆರಡು. ಸೊಸೆಯನ್ನು ಮನೆಗೆ ತಂದು ಮೊಮ್ಮಗನನ್ನು ಆಡಿಸುವ ಪುಣ್ಯ ನನಗೆಲ್ಲಿ? ತಾನು ತಾಯಿಯೆ?... ಅಲ್ಲ ರಾಕ್ಷಸಿ! ಪಿಶಾಚಿ! ಕಡುಪಾಪಿ!..

'ಅವ್ವ ಅಳಬೇಡಾಂದ್ರೆ ಕೇಳಲ್ವೇನವ್ವ?..."

"ನಿಂಗೆ ಇನ್ನೂನಿದ್ದೇನೇಹತ್ತಿಲ್ವಾಮಗಾ?"

"ನೀನಳ್ತಾ ಇದ್ರೆನಾನುನಿದ್ದೇನೇಮಾಡಲ್ಲ"

"ಆಳ್ತಾ ಇಲ್ಲಶೀನು...ನಿದ್ದೆಮಾಡು..."

"ನಿನ್ನಬಿಟ್ಟುಹೋಗಿದ್ದು ಅಣ್ಣಂದೇ ತಪ್ಪು ... ನೀನ್ಯಾಕೆ ಅಳಬೇಕವ್ವ? ... ಹೋಗ್ಲಿಬಿಡು ಆ ಕಥೆ ಮುಂದೇನಾಯ್ತು ಹೇಳು ... ಆ ಮಗು ಆಳ್ತಾ ಇದ್ದಾಗ"

"...ಅಳ್ತಾ ಇದ್ರೂನೂನನ್ನಂಥಾ ಕ್ರೂರಿ ತಾಯಿಗೆ ಕರುಣೆನೇ ಬರ್‍ಲಿಲ್ಲ..ಬಿದ್ರು ಹಿಂಡ್ಲ ಬುಡ್ದಲ್ಲಿ ಸಟ ಸಟಾಂತ ಶಬ್ದ ಆದ್ಹಂಗೆ ಕೇಳಿಸ್ತು. ಏನೂ ಹೆದ್ರಿಕೇಂದ ಮಗು ಪುಟ್ಟ ಕಣ್ಣನ್ನು ದೊಡ್ಡಕ್ಕೆ ಅರಳಿಸಿ ನೋಡ್ದಾಗ ಒಂದು ಹೆಬ್ಬುಲಿ!

ಕೂಸು ಗಡಗಡ ನಡಗ್ತ ಅದರ ಪುಟ್ಟ ಕೈಯಿಂದ ಬಾಗ್ಲನ್ನ ದಡದಡ ಬಡಿದು ಆದ್ರ ಪುಟ್ಟ ಪುಟ್ಟ ಮಾತ್ನಲ್ಲೇ... 'ಅರ್ಧ ರೊಟ್ಟಿಸಾಕವ್ವ –ಬಾಗ್ಲು ತೆಗ್ಯವ್ವ, ಕಣ್ಣುಪಿಳಿಪಿಳಿ –ಬಾಲಪಟಪಟ...' ಅಂತಬೇಡಿಕೊಳ್ಳಕ್ಕೆಶುರುಮಾಡ್ತು. ಹುಲೀಂತ ಹೇಳಕ್ಕೆ ಪಾಪದಕ್ಕೆ ಬಾಯಿ ಬರಲ್ಲ. ಆ ನನ್ನಂಥ ಕ್ರೂರಿ ತಾಯಿ ಕೂಸು ಕಿರುಚಿಕೋತಿದೇಂತ ಎಗ್ಗೂ ಇಲ್ಲ. 'ಅರ್ಧ ರೊಟ್ಟಿ ಸಾಕವ್ವ–ಬಾಗ್ಲು ತೆಗ್ಯವ್ವ – ಕಣ್ಣುಪಿಳಿಪಿಳಿ –ಬಾಲಪಟಾಪಟಾ'... ಹಾಗೇನೇ ಆಳು ನಿಂತಿತು. ಹಠಾನ ಇನ್ನಾರು ನಿಲ್ಲಸ್ತಲ್ಲಾಂತ ರೊಟ್ಟಿ ತಿಂದು ಕೂತಿದ್ದ ತಾಯಿ ಹೊರ್ಗೆ ಬಂದು ಬಾಗ್ಲು ತೆಗ್ದು ನೋಡಿದ್ಲು...

ಎಲ್ಲಿದೆ ಹಸುಗೂಸು?... ಹುಲಿಯ ಬಾಯಿಯ ಪಾಲು!"

... ನೀಚ ತಾಯಿಯ ದೆಸೆಯಿಂದ, ಪಾಪಿ ತಾಯಿಯ ದೆಸೆಯಿಂದ , ಮಗ–ಕೈಗೆ ಬಂದ ಮಗ–ಹುಲಿಯ ಬಾಯಿಗೆ ತುತ್ತು.

ಹುಲಿಯ ಬಾಯಿಗೋ?
ಯಾವ ಅಡವಿಯ ಪಾಲಿಗೋ?
ಯಾವ ನದಿಯ ಮಡಿಲಿಗೋ?
ಎಲ್ಲೋ! ಏನೋ!! ಎಂತೋ!!!
ಅಯ್ಯೋ... ಅಮ್ಮ... ನನ್ನಮ್ಮ
ಬಂದಾನೋ?...

ಬಾರಾನೋ?...

ಆ ನನ್ನ ಹಿರಿಯ ಮಗ, ನನ್ನ ಕಣ್ಣಿನ ಗೊಂಬೆಯಾಗಿದ್ದ ಆ ಚೆಲುವ, ತಾನೇ ಕೈಯಾರೆ ಮನೆ ಬಿಟ್ಟು ಓಡಿಸಿದ ಆ ಹಸುಳೆ, ಆ ಮುದ್ದು ಮಗ–

ಬಂದಾನೋ?...
ಬಾರಾನೋ??...

ದಾರಿ ಕಾದು ಕಾದು ಬೇಸತ್ತಿದ್ದಾಳೆ ಅಬ್ಬಕ್ಕ.. ತನ್ನ ಹಟ್ಟಿಯ ಹೊರಗೆ, ಹಾವಿನಂತೆ ಸುರುಳಿ ಸುರುಳಿಯಾಗಿ ಸುತ್ತಿ ಬೆಟ್ಟ ಗುಡ್ಡಗಳ ಕಾಡು ಮೇಡುಗಳ ನಡುವೆ ಬಳಸಿ ಎಲ್ಲಿಗೋ, ದೂರ, ದೂ...ರ... ನನ್ನ ಮಗನನ್ನು ಒಯ್ದು ದಾರಿಯನ್ನು ಕಾಯ್ದು ಕಾಯ್ದು ಕಣ್ಣೀರೆರೆದು ಹಂಬಲಿಸಿದ್ದಾಳೆ...

ಬಂದಾನೊ?...
ಬಾರಾನೋ??...

ಬಂದರೆ ತಿನ್ನಲು ಮಾಡಿಟ್ಟ ಹಲಸಿನ ಹಣ್ಣಿನ ಚೆಟ್ಟು ಕೊಡುತ್ತಾಳೆ. ಉಡಲು ಒಳ್ಳೆಯ ವಸ್ತ್ರ ತಂದು ಕೊಡುತ್ತಾಳೆ... ತನ್ನದೆಂದು ಕೂಡಿಟ್ಟ ಆ ಬೆಳ್ಳಿಯ ಮುನ್ನೂರು ರೂಪಾಯಿಗಳನ್ನು ಖರ್ಚುಮಾಡಿ ಮದುವೆ ಮಾಡಿಸುತ್ತಾಳೆ ಅವನು ಮನೆಯಲ್ಲೇ ಕೂತು ತಿಂದರೂ ಸರಿಯೆ ತನ್ನ ಗಂಡನಿಂದ ಒಂದು ಬಿರು ನುಡಿಯೂ ಬರದಂತೆ ನೋಡಿಕೊಳ್ಳುತ್ತಾಳೆ... ಆದರೆ ಚೆಲುವ...
ಬಂದಾನೋ?...
ಬಾರಾನೋ??...
ಆ ತನ್ನ ಮುದ್ದು ಹಸುಳೆ...
ಬಂದಾನೋ?...ಬಾರಾನೋ??...ಬಂ...ದಾ...ನೋ...ಬಾ...ರಾ...ನೋ??...ಬಂದಾ??...???
...ಏನಿದು ಹೊರಗೆ ಶಬ್ದ??
"ಅವ್ವ...ಅವ್ವಾ...ಅವ್ವಾ...
...ಯಾರ ಧ್ವನಿ?...
ಮಧ್ಯಾಹ್ನದ ರಣರಣ ಬಿಸಿಲಿಗೆ ದಣಿದ ಧ್ವನಿ!... ಮೃದುವಾದ ಪ್ರೇಮಮಯವಾದ ಬಳಲಿದ 'ಅವ್ವಾ' ಎನ್ನುವ ಧ್ವನಿ!
ಅಯ್ಯೋ ಬಾಗಿಲು ತೆರೆಯುವುದರೊಳಗೆ ಏಕೆ ಹೀಗೆ ಎದ್ದೆ...

...ಆಹ್! ನೀ ಬಂದೆಯಾ ಕಂದ ಈಸು ದಿನದ ಮೇಲಾದರೂ ಬಂದೆಯಾ ಮಗನೆ... ನಿನ್ನ ಅವ್ವನ ತಪ್ಪನ್ನು ಕ್ಷಮಿಸಿದೆಯಾ ಚೆಲುವ... ಕೂತುಕೋ ಮಗನೆ... ಎಷ್ಟು ಬಡವಾಗಿದೆ ನಿನ್ನ ದೇಹ! ನೀರಡಿಸಿ ಬಂದೆಯಾ?... ಹಸಿದು ಬಂದೆಯಾ? ಎಲ್ಲಿ ಎಲ್ಲಿ ಪರದೇಸಿಯಂತೆ ಅಲೆಯಿತು ನನ್ನ ಕಂದ?... ನನ್ನ ಮುದ್ದು ಚೆಲುವ?... ಎಣ್ಣೆ ಹಚ್ಚಿ ಮೀಯಿಸುವೆ ಮಗನೆ. ನನ್ನ ಬಿಟ್ಟು ಎಲ್ಲಿಗೂ ಹೋಗಬೇಡ... ತಾಯಿಯ ಹೆತ್ತ ಕರುಳಿಗೆ ಬೆಂಕಿಯಿಕ್ಕಬೇಡ, ಕಂಡೆಯಾ?... ನಿನ್ನ ತೊರೆದು ನಾನಿನ್ನು ಈ ಜೀವ ತೇಯಲಾರೆ.
ಅಯ್ಯೋ!...ಅಯ್ಯೋ!...

ಇದೇನು ಕಂದಾ? ಮತ್ತೆಲ್ಲಿಗೆ ಹೊರಟು ನಿಂತಿ?... ಅವ್ವನನ್ನು ಯಾಕಾರೂ ತೊರೆಯುವೆ ಮಗನೇ? ಅದೇಕೆ ಹಾಗೆ ದೂರ ದೂರ ಮಂಜಿನಂತೆ ಕರಗಿ ಕರಗಿ ಮಾಯವಾಗಿತ್ತಿದ್ದೀಯಾ ಚೆಲುವಾ? ನಾ ನಿನಗೆ ಬ್ಯಾಡವೇ??...
ಯಾಕೆ ಹಾಗೆ ನಿನ್ನ ಕಣ್ಣಲ್ಲಿ ತಿರಸ್ಕಾರ?... ಬೇಡ ಹಾಗೆ ದುರುಗುಟ್ಟಿ ನೋಡಬೇಡ ಮಗನೆ... ನಿನಗಾಗಿ ಅವರನ್ನು, ನನ್ನ ಪ್ರಾಣವಾದ ಅವರನ್ನು ಬೇಕಾದರು ತೊರೆಯುವೆ ಚೆಲುವ ಆದರೆ ಇವು... ಈ ಎರಡು ಹಸುಳೆಗಳೂ ನನ್ನ ಹೊಟ್ಟೆಯಯಲ್ಲಿ ಹುಟ್ಟಿದವು. ನಿನ್ನಂತೆಯೇ ನನ್ನ ಮಕ್ಕಳು ನಿನ್ನ ತಮ್ಮಂದಿರು. ಚೆಲುವಾ ನಿನ್ನನ್ನು ಅಣ್ಣನೆಂದು ಪ್ರೀತಿಸುತ್ತಾರೆ ಕಂದಾ... ತುಂಬ ತುಂಬ ಪ್ರೀತಿಸುತ್ತಾರೆ ಚೆಲುವಾ... ಇವುಗಳನ್ನು ಖಂಡಿತಾ ತೊರೆಯಲಾರೆ ಮಗನೇ... ನನಗಾಗಿ ... ನಿನ್ನ ದಮ್ಮಯ್ಯ!...
ನನಗಾಗಿ ನಿಲ್ಲು ... ಕಂದಾ... ನನ್ನಾಣೆ ನಿಲ್ಲು...ನಿಲ್ಲು... ಚೆಲುವಾ!...ಚೆ...ಲು...
"ಅವ್ವಾ...ಅವ್ವಾ...ಅವ್ವಾ...ಇದ್ವಾಕವ್ವ ನಿದ್ದೇಲಿ ಹಿಂಗೆ ಹಂಬಲಿಸ್ತಿ? ನಿನಗೇನಾಯ್ತವ್ವ?"

ಪಕ್ಕದಲ್ಲಿ ಆಗತಾನೆ ಜೊಂಪುಹತ್ತಿ ಮಲಗಿದ್ದ ಎಂಟು ವರ್ಷದ ಹಸುಳೆ ಶೀನು ಧಿಗ್ಗನೆಂದು ಅಬ್ಬಕ್ಕನ ಮೈಯಲುಗಿಸಿ ಕರೆಯುತ್ತದೆ.... ತೊಟ್ಟಲಿನಲ್ಲಿನ ಹಸುಗೂಸು ತಾಯಿಯ ಹಾಲಿಗಾಗಿ ಹಂಬಲಿಸಿ ಅಳುತ್ತದೆ... ಅಬ್ಬಕ್ಕ ಉಕ್ಕಿಹರಿಯುವ ಕಣ್ಣೀರನ್ನು ಸೀರೆಯ ಸೆರಗಿನಿಂದ ಒರೆಸಿಕೊಳ್ಳಲು ಯತ್ನಿಸುತ್ತ ಮಗುವಿಗೆ ಮೊಲೆಯುಣಿಸುತ್ತಾಳೆ...ಆ ನೀರವ, ಗಂಭೀರ ಕತ್ತಲಿನಲ್ಲಿ... ದುಃಖತಪ್ತ ಎದೆಯಿಂದ ಹಾಲು ಹರಿಯುತ್ತದೆ, ಸಿಹಿಯಾದ ಹಾಲು. ಆದರೆ ತಾಯಿಯ ಕಣ್ಣಿನಿಂದ ನೀರೂ ಸುರಿಯುತ್ತದೆ, ಉಪ್ಪಾದ ನೀರು, ಅನಂತವಾಗಿ....

**ಕಥೆಗಾರರ ಪರಿಚಯ**: ಡಾ. ಯು.ಆರ್. ಅನಂತಮೂರ್ತಿಯವರು **೧೯೩೨**ರಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಮೇಳಿಗೆಯಲ್ಲಿ ಜನಿಸಿದರು. ನವ್ಯ ಚಳುವಳಿಯ ಪ್ರವರ್ತಕರಲ್ಲಿ ಒಬ್ಬರಾದ ಇವರು ಪ್ರಶ್ನೆ, ಮೌನಿ, ಆಕಾಶ ಮತ್ತು ಬೆಕ್ಕು, ಸೂರ್ಯನ ಕುದುರೆ ಎಂಬ ಕಥಾಸಂಕಲನಗಳನ್ನು, ಸಂಸ್ಕಾರ, ಭಾರತೀಪುರ, ಅವಸ್ಥೆ ಎಂಬ ಕಾದಂಬರಿಗಳನ್ನು ಪ್ರಜ್ಞೆ ಮತ್ತು ಪರಿಸರ, ಪೂರ್ವಾಪರ ಎಂಬ ವಿಮರ್ಶಾ ಸಂಕಲನಗಳನ್ನು ರಚಿಸಿದ್ದಾರೆ. ಇವರ ಸಂಸ್ಕಾರ ಕಾದಂಬರಿ ಹಲವಾರು ಭಾಷೆಗಳಿಗೆ ಅನುವಾದಗೊಂಡಿದೆ. ಇವರ ಸಮಗ್ರ ಸಾಹಿತ್ಯಕೆ ಜ್ಞಾನಪೀಠ ಪ್ರಶಸ್ತಿ **೧೯೯೪** ರಲ್ಲಿ ಪಡೆದಿದ್ದಾರೆ.

**ಪ್ರಶ್ನೆಗಳು:**

೧. ಮಾತೃ ಹೃದಯದ ಅಬ್ಬಕ್ಕನು ಪಡುವ ವೇದನೆಯನ್ನು 'ತಾಯಿ' ಕಥೆಯ ಮೂಲಕ ವಿವರಿಸಿ.
೨. ಚೆಲುವ ಮನೆ ಬಿಟ್ಟು ಹೋದ ಸಂದರ್ಭವನ್ನು ವಿವರಿಸಿ.
೩. ಅಬ್ಬಕ್ಕ ಕೂಡಿಕೆ ಮಾಡಿಕೊಳ್ಳಲು ಕಾರಣವೇನು?
೪. 'ತಾಯಿ' ಕಥೆಯ ತಾತ್ಪರ್ಯ ಬರೆಯಿರಿ.

# ೩. ಹರಕೆಗಳು

**–ಎ.ಎನ್. ಮೂರ್ತಿರಾವ್**

**ಆಶಯ:** ಹರಕೆಗಳು ಸಂಪ್ರದಾಯ ಬದ್ಧ ಬದುಕಿನಲ್ಲಿ ಇಂದಿಗೂ ಹಾಸುಹೊಕ್ಕಾಗಿವೆ. ಅದು ನಗರದ ಜನರ ಬದುಕಿನಲ್ಲಿ ಸರ್ವೇ ಸಾಮಾನ್ಯವಾಗಿದೆ. ತಮ್ಮೆಲ್ಲ ಏಳ್ಗೆಯಲ್ಲಿ ಹರಕೆಯ ಕೃಪೆ ಇದೆ. ಅದು ತನ್ನ ಬದುಕನ್ನು ಬಿಟ್ಟಿಲ್ಲ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

"ನಮ್ಮ ಮನೆಯ ಎಮ್ಮೆ ಸರಿಯಾಗಿ ಹಾಲು ಕೊಡುತ್ತಿಲ್ಲ. ಆದ್ದರಿಂದ ಎಂಟಾಣೆ ಕಾಣಿಕೆ ಸಲ್ಲಿಸಿದ್ದೇನೆ. ಮಹಾಮಹಿಮ ಸಂತ ಅಂತೋಣಿಗೆ ಬೇಡಿ ಕೊಳ್ಳಿ". ಬಹುದಿನಗಳ ಹಿಂದೆ ಮಾಸಪತ್ರಿಕೆಯೊಂದರಲ್ಲಿ ಕಂಡ ಈ ಭಕ್ತನ ಮೊರೆಯನ್ನು ಓದಿ ಇದೆಂಥ ಮೂಢ ಭಕ್ತಿ ಎಂದು ನಕ್ಕದ್ದು ನೆನಪಿದೆ. ಭಕ್ತನಿಗೆ ಸಂತರ ನೆನಪು ವರ್ಷಕ್ಕೊಂದು ಸಾರಿ ಬರುತ್ತಿದೆಯೋ ಇಲ್ಲವೋ– ಸಂಕಟ ಬಂದಾಗ ಸಂತ ಅಂತೋಣಿ ಹಾಗೆ ನೆನಪು ಬಂದಾಗಲೂ ತನ್ನನ್ನು ಸಂಕಟದಿಂದ ಪಾರುಮಾಡುವ ಹೊರೆಯನ್ನು ಸಂಪೂರ್ಣವಾಗಿ ಸಂತರ ಮೇಲೆಯೇ ಒರಗಿಸುವ ಧೈರ್ಯ ಮಾಡುವುದಿಲ್ಲ. ಅವರ ಪ್ರಯತ್ನಕ್ಕೆ ನೆರವಾಗಿ ನಿಲ್ಲುವ ಸದುದ್ದೇಶದಿಂದ ಆ ಎಮ್ಮೆಗೆ ಹೆಚ್ಚು ಹೆಚ್ಚಾಗಿ ಹಿಂಡಿಯನ್ನೂ ಹತ್ತಿಯ ಬೀಜವನ್ನೂ ಹಾಕಿಯೇ ಹಾಕುತ್ತಾನೆ. ಬಹುಶಃ ಒಂದು ತಿಂಗಳಾದ ಮೇಲೆ ಎಮ್ಮೆ ಸರಿಯಾಗಿ ಹಾಲು ಕೊಡಬಹುದು. ಅದು ಹತ್ತಿಯ ಬೀಜದ ಕೃಪೆಯೋ, ಸಂತರ ಕೃಪೆಯೋ ಹೇಗಾದರೂ ಇರಲಿ, ಕೀರ್ತಿಯೇನೋ ಸಂತರ ಬಗಲಿಗೇ ಬೀಳುತ್ತದೆ.

ಈ ಕಥೆಯನ್ನು ಹೇಳಿ ಹಾಸ್ಯಮಾಡಿದ ಸ್ವಲ್ಪ ದಿನಕ್ಕೆ ನಮ್ಮ ಮನೆಯಲ್ಲಿ ಲಲಿತ ಬಚ್ಚಿಟ್ಟಿದ ಒಂದು ಗುಟ್ಟು ಬಯಲಾಗಬೇಕಾಗಿ ಬಂತು. ನಾನು ಆಗತಾನೆ ನೌಕರಿಗೆ ಸೇರಿ ಮೊದಲನೆಯ ತಿಂಗಳ ಸಂಬಳವನ್ನು ಸ್ವಲ್ಪ ಹೆಮ್ಮೆಯಿಂದ ಹೊತ್ತು ತಂದೆ. ಅಂಥ ಹೊರಲಾರದ ಭಾರವೇನೂ ಅಲ್ಲ. ಕೇವಲ ಎಪ್ಪತ್ತೈದು ರೂಪಾಯಿ. ಆದರೇನು, ಹೆಚ್ಚಾಗಲಿ, ಕಡಿಮೆಯಾಗಲಿ, ನನ್ನ ಸ್ವಂತ ಸಂಪಾದನೆ, ಸಂಪಾದನೆ ಮಾಡಿದ ಹೆಮ್ಮೆಯ ಜೊತೆಗೆ ಅದನ್ನು ಖರ್ಚುಮಾಡುವ ಆತುರವೂ ಹೆಚ್ಚಾಗಿತ್ತು. ರಾಮಕೃಷ್ಣ ಪರಮಹಂಸರಂಥವರಿಗೆ ಹತ್ತಿರದಲ್ಲಿ ಹಣವಿದ್ದರೆ ಮನಶಾಂತಿಯಿರುವುದಿಲ್ಲವಂತೆ. ನನ್ನ ಸ್ವಭಾವವೂ ಸ್ವಲ್ಪ ಹಾಗೆಯೇ; ಇರುವ ಹಣ ಮುಗಿದು ಬರಿಗೈಯಾಗುವವರೆಗೂ ಮನಸ್ಸು ಸ್ಥಿಮಿತಕ್ಕೆ ಬರುವುದಿಲ್ಲ. ಆದ್ದರಿಂದ ದಾರಿಯಲ್ಲೇ ಆ ಎಪ್ಪತ್ತು ರೂಪಾಯಿಗಳ ವೆಚ್ಚದ ವ್ಯವಸ್ಥೆ ಮಾಡಿ ನೌಕರಿಗೆ ಸೇರಿದ್ದಕ್ಕೆ ಗುರುತಾಗಿ ಮೊದಲನೆಯ ತಿಂಗಳ ಸಂಬಳದಿಂದ ಒಂದು ಬೈಸಿಕಲ್ ಕೊಳ್ಳಬೇಕೆಂದು ನಿಶ್ಚಯಿಸಿಕೊಂಡು ಬಂದೆ. ಆದರೆ ಮನೆಗೆ ತಲುಪಿದೊಡನೆಯೇ ಲಲಿತ ತನ್ನ ಬಯಕೆಯ ಮೇಲೆ ಹಾಸುಗಲ್ಲೆಳೆಯಲು ಅನುವಾದಳು. ಅವಳು ತಿರುಪತಿ ವೆಂಕಟರಮಣಸ್ವಾಮಿಗೆ ಹರಕೆ ಹೊತ್ತಿದ್ದಳಂತೆ, ಅವರಿಗೆ ಕೆಲಸವಾದರೆ ಮೊದಲ ತಿಂಗಳ ಸಂಬಳವನ್ನು ಅರ್ಪಿಸುತ್ತೇನೆಂದು. ನಾನು ಸಂಪಾದನೆ ಮಾಡುವ ಮೊದಲೇ ಅವಳು ನನ್ನ ಹಣಕಾಸಿನ ಯಜಮಾನಿಕೆಯನ್ನು ವಹಿಸಿಕೊಂಡುಬಿಟ್ಟಳು.

ಅವಳ ಹರಕೆಗೂ ನನಗೆ ಕೆಲಸ ದೊರೆತದ್ದಕ್ಕೂ ಐದಾರು ತಿಂಗಳ ಅಂತರ. ನಾನೇನೋ ಸರ್ಕಾರದವರು ನನ್ನ ಚಾತುರ್ಯಕ್ಕೂ ಕಾರ್ಯದಕ್ಷತೆಗೂ ಮೆಚ್ಚಿ ನನ್ನನ್ನು ನಿಯಮಿಸಿಕೊಂಡರೆಂದು ಭಾವಿಸಿದ್ದೆ. ಲಲಿತೆ ಆ ಭ್ರಮೆಯನ್ನು ಹೋಗಲಾಡಿಸಿದಳು. ಬುದ್ಧಿವಂತಿಕೆ, ಮುಂದಾಲೋಚನೆ ಇವೆಲ್ಲಾ ತನ್ನದೆಂದೂ, ಅದರಲ್ಲಿ ನನ್ನ ಕೈವಾಡವೇನೂ ಇಲ್ಲವೆಂದು ಅವಳ ಮಾತಿನಿಂದ ವ್ಯಕ್ತವಾಯಿತು. ಅವಳು ವೆಂಕಟರಮಣಸ್ವಾಮಿಯ ಸಹಾಯವನ್ನು ಕೋರದಿದ್ದರೆ ನನ್ನ ಮುದ್ದು ಮುಖವನ್ನು ನೋಡಿ ಯಾರೂ ನೌಕರಿ ಕೊಡುತ್ತಿರಲಿಲ್ಲವಂತೆ. ಈ ಅವಹೇಳನವನ್ನು ಕೇಳಿ ನನ್ನ ಸ್ವಾಭಿಮಾನ ಕೆರಳಿತು. ಅಲ್ಲದೆ ಕೈಗೆ ಬಂದಂತಿದ್ದ ಬೈಸಿಕಲ್ಲಿನ ತುತ್ತು ಕಣ್ಮರೆಯಾಗುವಂತೆ ತೋರಿತು. ಗೃಹಕೃತ್ಯದಲ್ಲಿ ಅಲ್ಪ ವಿಷಯಗಳಿಗೆಲ್ಲಾ ಅಡ್ಡಿ ಬರಬಾರದೆಂದು ನಾನು ಖುದ್ದು ರಾಜಿಯಿಂದ ಮನೆಯ ಪಾರುಪತ್ಯವನ್ನು ಬಹುಮಟ್ಟಿಗೆ ಲಲಿತೆಯೇ ವಹಿಸಿರುವುದು ನಿಜ. ಆದರೆ ಅವಳು ತನ್ನ ಸ್ವಾತಂತ್ರ್ಯವನ್ನು ಹೀಗೆ ದುರುಪಯೋಗ ಮಾಡಿದರೆ ಸುಮ್ಮನಿರುವುದು ಹೇಗೆ? ಹೀಗೆಯೇ ಬಿಟ್ಟರೆ ನನ್ನನ್ನು ಕೈಗೊಂಬೆಯಂತೆ ಕುಣಿಸಿಬಿಡುತ್ತಾಳೆ, ಸಂಬಳವನ್ನು ತಿರುಪತಿ ದೇವರಿಗೆ ಒಪ್ಪಿಸಿ ಕೈಮುಗಿಯಲು ನಾನು ಒಪ್ಪಲಿಲ್ಲ. ಅವಳು ಹರಸಿಕೊಂಡದ್ದು ನಿಜವಿರಬಹುದು! ನನಗೆ ಕೆಲಸವಾದದ್ದು ನಿಜ, ಇವೆರಡಕ್ಕೂ ಸಂಬಂಧವಿದೆಯೆನ್ನುವುದನ್ನು ಮಾತ್ರ ನಂಬಲಾರದೆ ಹೋದೆ, ಅಥವಾ ಇದ್ದರೂ; ಮನೆಯ ಬಾಗಿಲಿನಲ್ಲಿ ನಕ್ಷತ್ರಿಕನಂತೆ ಬಂದು ನಿಲ್ಲುವ ಸಾಲಗಾರನಿಗೆ ಕೊಟ್ಟ ಸಾಲವನ್ನು ವಾಪಸು ಮಾಡಲು ಮನಸ್ಸು ಬರುವುದಿಲ್ಲ– ಹೀಗಿರುವಾಗ ಬೇರೆ ಯಾವುದೋ ಲೋಕದಲ್ಲಿ ವಾಸಿಸುವ, ಕಣ್ಣಿಗೆ ಕಾಣದ, ದೇವರಿಗೆ ಹಣ ಸಲ್ಲಿಸಲು ಮನಸ್ಸು ಒಪ್ಪೀತೆ? ಅವನು ಇದ್ದಾನೆಯೋ, ಇಲ್ಲವೋ ಅದು ಸಹ ನನಗೆ ತಿಳಿಯದು.

ದೇವರನ್ನು ಒಲಿಸಿಕೊಂಡು ನಮ್ಮ ಇಷ್ಟಾರ್ಥಗಳನ್ನು ಸಾಧಿಸಬೇಕಾದರೆ ನಾವು ಅವನ ಮಟ್ಟಕ್ಕೆ ಏರಬೇಕು. ಇಲ್ಲವೆ ಅವನನ್ನು ನಮ್ಮ ಮಟ್ಟಕ್ಕೆ ಇಳಿಸಿಕೊಳ್ಳಬೇಕು. ನಾವು ಅವನ ಮಟ್ಟಕ್ಕೆ ಏರಿದರೆ ಆತನ ಸಹಾಯವೇ ಅನಾವಶ್ಯಕ. ಅಲ್ಲದೆ ಆಗ ನಮ್ಮ ಇಷ್ಟಾರ್ಥಗಳು ನಮಗೆ ಬೇಡವೆನ್ನಿಸಬಹುದು. ಆದ್ದರಿಂದ ದೇವರನ್ನೇ ನಮ್ಮ ಮಟ್ಟಕ್ಕೆ ಇಳಿಸಿಕೊಂಡು ನಮ್ಮಂತ ಸ್ತೋತ್ರಪ್ರಿಯನೆಂದು ಭಾವಿಸಿ ದೇವರನ್ನು ನಮ್ಮ ಪ್ರತಿಬಿಂಬವಾಗಿ ಸೃಷ್ಟಿಸುತ್ತೇವೆ. ದೊಡ್ಡ ಮನುಷ್ಯರ ಸಹಾಯವನ್ನು ಕೋರಿ ಅವರನ್ನು ನೋಡುವುದಕ್ಕೆ ಹೋದಾಗ ಕೈಯಲ್ಲಿ ಎರಡು ನಿಂಬೆಯ ಹಣ್ಣುಗಳನ್ನಾದರೂ ಹಿಡಿದುಕೊಂಡು ಹೋಗುತ್ತೇವೆ. ಏನಾದರೂ ನೆಪದಿಂದ ಅವರನ್ನು ಉಪಾಹಾರಕ್ಕೆ ಕರೆತರುತ್ತೇವೆ. ದೇವರನ್ನು ಟೀ ಪಾರ್ಟಿಗೆ ಕರೆಯಲಾಗುವುದಿಲ್ಲ. ಆದ್ದರಿಂದ ಭಜನೆ ಮಾಡಿ ಹಣ್ಣು ಕಾಯಿ ಮಾಡಿಸುತ್ತೇವೆ. ವಿಘ್ನೇಶ್ವರನಿಗೆ ಇಡುಗಾಯಿ ಒಡೆದು ಶ್ರೀಕಂಠೇಶ್ವರನಿಗೆ ಶಾಲ್ಯಾನ್ನದ ಅಭಿಷೇಕ ಮಾಡಿಸಿ, ನರಸಿಂಹನಿಗೆ ಚಿನ್ನದ ಕಿರೀಟ ಹಾಕಿಸಿ, ಮುಚ್ಚುಮರೆಯೇನೂ ಇಲ್ಲದೆ ದೇವರಿಗೆ ಲಂಚಕೊಟ್ಟು ನಮ್ಮ ಕೆಲಸ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ನಮ್ಮಂತೆಯೇ ನಮ್ಮ ದೇವರಿಗೂ ನಾಲಗೆಯ ಚಪಲ ಹೆಚ್ಚು, ವಸ್ತ್ರಭೂಷಣಗಳ ಗೀಳು ಉಂಟು. ಪ್ರತಿಫಲಾಪೇಕ್ಷೆಯಿಲ್ಲದೆ ನಮ್ಮ ಪ್ರಾರ್ಥನೆಯನ್ನು ಸಲ್ಲಿಸುವುದು ಆತನಿಗೇನೂ ಕಷ್ಟವಲ್ಲವೆಂದರೂ ಪ್ರತಿಫಲ ದೊರಕಿದರೆ ಯಾರನ್ನು ಕೆಡಿಸಿತು. ಹರಕೆ ಮಾಡಿಕೊಂಡ ಮೇಲೆ ಅದನ್ನು ತೀರಿಸದಿದ್ದರೆ ದೈವಕ್ಕೆ ಸಿಟ್ಟು ಬಂದು ನಮ್ಮ ಮೇಲೆ ಸೇಡು ತೀರಿಸಿಕೊಳ್ಳಲು ರೋಗರುಜಿನಗಳನ್ನು ತಂದು ಹಾಕಿ ಹರಕೆ ತೀರುವವರೆಗೂ ನಮ್ಮನ್ನು ಕಾಡುತ್ತಿರುತ್ತದೆ. ಅದರಲ್ಲಿಯೂ ತಿರುಪತಿ ವೆಂಕಟರಮಣನಂತಹ ಸಾಲಗಾರರ ದೈವವಾದರಂತೂ ಒಂದು ಕಿಲುಬು ಕಾಸು ಉಳಯದಂತೆ ವಸೂಲಾಗುವವರೆಗೂ ನಿಮ್ಮನ್ನು ಬಿಡುವುದಿಲ್ಲ. ಪದ್ಮಾವತಿಯನ್ನು ಮದುವೆಯಾದಾಗ ನಡೆದ ವೈಭವಕ್ಕೆ ತಂದ ಸಾಲವೆಲ್ಲ ಮಾನವಕೋಟಿಯ ಲಂಚದಿಂದ ತಾನೇ ತೀರಬೇಕು. "ಒಂದು ಮೋರಟೋರಿಯಂ" ಆಜ್ಞೆ ಹೊರಡಿಸಿ ವೆಂಕಟರಮಣ ತನ್ನ ಕಷ್ಟದಿಂದ ಪಾರಾಗಬಹುದು. ಆದರೆ ವೈಕುಂಠದಲ್ಲಿ ಮೋರಟೋರಿಯಂ ಪದ್ಧತಿ ಜಾರಿಯಲಿಲ್ಲವೇನೋ.

ನಾವು ಹರಕೆಕಟ್ಟುವುದು ನಮ್ಮ ಜಾತಿಯ ದೇವರಿಗೆ ಮಾತ್ರವಲ್ಲ. ಮಹಮ್ಮದೀಯರು ಊರ ಮುಂದಿನ ಹನುಮಂತರಾಯನಿಗೆ ದಧ್ಯೋದನದ ಸೇವೆ ಮಾಡಿಸಿದ್ದುಂಟು. ಬ್ರಾಹ್ಮಣರು ಫಿಲೋಮಿನಾ ದೇವಾಲಯಕ್ಕೆ ಮುಡುಪು ಕಟ್ಟಿಡುತ್ತಾರೆ, ಹದಿನಾರಾಣೆ ಅಚ್ಚ ಹಿಂದುಗಳು ಹರಕೆ ತೀರಿಸಲು ಮೋಹರಂ ಹಬ್ಬದಲ್ಲಿ ವೇಷಹಾಕಿ ಕುಣಿಯುತ್ತಾರೆ. ಸ್ವಪ್ರಯೋಜನದ ಮುಂದೆ ಮತಧರ್ಮಗಳ ಎಲ್ಲ ಕಟ್ಟುಗಳು ಹೇಗೆ ನಿಂತಾವು? ನಮಗೆ ಸೌಖ್ಯಬೇಕು ಅದೂ ಹಿಂದೂ ಅಂಗಡಿಯಲ್ಲಿ ಸಿಕ್ಕಲಿ ಕ್ರೈಸ್ತರ ಅಂಗಡಿಯಲ್ಲಿ ಸಿಕ್ಕಲಿ. ಯಾವ ದೈವವು ಮಾರಿದರೂ ಕೊಳ್ಳಲು ಸಿದ್ಧರಿದ್ದೇವೆ. ಇದು ಸ್ವಾರ್ಥದ ಪರಾಮಾಧಿಯೆಂದು ಬೇಕಾದವರು ಅಲ್ಲಗಳೆಯಬಹುದು. ನಿಜವಾಗಿ ನೋಡಿದರೆ ಸರ್ವಮತ ಸಮನ್ವಯಕ್ಕೆ ಸ್ವಪ್ರಯೋಜನವೂ ಒಂದು ಹೆದ್ದಾರಿ. ಹೀಗಾದರೆ ನಮ್ಮ ವಿಚಾರ ಶಕ್ತಿಯ ಗತಿಯೇನು ಎನ್ನಬಹುದು, ಈ ವಿಷಯಗಳು ವಿಚಾರ ಶಕ್ತಿಗೆ ಮೀರಿದವು. ಜಗತ್ತಿನಲ್ಲಿ ವಿಪತ್ತನ್ನು ನಿವಾರಣೆ ಮಾಡುವ ಮಂಗಳವನ್ನುಂಟುಮಾಡುವ ಶಕ್ತಿ ಎಲ್ಲಿದೆಯೋ ಯಾರು ಬಲ್ಲರು? ಅದಕ್ಕೆ ನಾವು ನಾಮಕರಣ ಮಾಡಲಾರೆವು. ಇಂದ್ರಿಯಕ್ಕೆ ಗೋಚರವಲ್ಲದ ಆ ನಸುಗತ್ತಲಿನ ಅಸ್ಪಷ್ಟ ಪ್ರಪಂಚದ ನಕ್ಷೆಯನ್ನು ಯಾರೂ ಬರೆದಿಲ್ಲ. ಯಾವ ದಾರಿಯಲ್ಲಿ ಹೋದರೆ ಭಗವಂತನ ಪಾದಸ್ಪರ್ಶ ಮಾಡಬಹುದೋ ಆ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಕೊಡಲಾಗುವುದಿಲ್ಲ. ಅಲ್ಲದೆ ಸೌಖ್ಯದ ಆಕಾಂಕ್ಷೆ ಹೆಚ್ಚಿದ ಹಾಗೆಲ್ಲಾ ವಿಚಾರಶಕ್ತಿ ಅಳಿಯತ್ತ ಬರುತ್ತದೆ. ಈ ಪ್ರಾಪಂಚಿಕ ಸೌಖ್ಯದಿಂದ ಏನಾಗುತ್ತದೆ ಎನ್ನುವುದು ಬೇರೆ ಮಾತು. ವಿರಾಗಿಗಳಿಗೆ ಬಯಕೆಯೆನ್ನುವುದೇ ಹುಚ್ಚುತನ. ಆದರೆ ಅದನ್ನು ತೊರೆಯುವುದೇ ಸೌಖ್ಯ ಎಂಬ ಶುಷ್ಕ ವೇದಾಂತ ನಮಗೆ ಒಪ್ಪದು. ನಾವು ಐಹಿಕ ಸುಖದ ಹಂಬಲವನ್ನು ಬಿಡಲಾರೆವು.

ಅಂದಣವ ಕೊಡು ಎಂದು ಅನುನಯದಿ ಬೇಡುವೆನೆ
ಅಂದಣವನೇರಿದ ನಹುಷನೇನಾದ !

ಇರಬಹುದು ಆದರೆ ಅಂದಣ ಬೇಡವೆನ್ನುವ ದಾಸರೊಬ್ಬರಿದ್ದರೆ ಅದನ್ನು ಬೇಡುವವರು ಲಕ್ಷಮಂದಿ. ಅಲ್ಲದೆ ನಮ್ಮೆಲ್ಲರ ಮನಸ್ಸಿನಲ್ಲೂ "ನಾನೇನು ನಹುಷನಂತೆ ಹುಚ್ಚನಲ್ಲ, ಇಂದ್ರಪದವಿಗೆ ಏರಿದ್ದರೆ ಅದನ್ನು ಉಳಿಸಿಕೊಳ್ಳದೇ ಬಿಡುತ್ತಿರಲಿಲ್ಲ" ಎಂಬ ಭ್ರಾಂತಿ ನೆಲೆಗೊಂಡಿದೆ. ಜೀವನವು ಮಾಯೆಯೆಂದು ಹೇಳುವವರು ಯಾರು ತಾನೇ ಪ್ರಾಣವನ್ನು ಒಪ್ಪಿಸಲು ಸಿದ್ಧರಾಗಿದ್ದಾರೆ? ಬ್ರಹ್ಮಸಾಕ್ಷಾತ್ಕಾರವೇ ಮುಖ್ಯ. ಅದಾದ ಮೇಲೆ ನಾವು ಮತ್ತೇನನ್ನೂ ಬೇಡಿ ಹರಕೆ ಹೊರಬೇಕಾಗುವುದಿಲ್ಲ ನಿಜ. ಆದರೆ ಸತ್ಯವಾಗಿ ಪರೀಕ್ಷಿಸಿ ನೋಡಿದರೆ ಬಾಯಲ್ಲಿ ನಾವು ಏನೇ ಹೇಳಲಿ, ಅಂತಹ ಸಾಕ್ಷಾತ್ಕಾರ ನಮ್ಮಲ್ಲಿ ಬಹುಜನರಿಗೆ ಬೇಡ, ವಿರಾಗಿಗಳಾಗಿ ಸ್ವಾರ್ಥವನ್ನು ಜಯಿಸಿ ಹಂಬಲವೆಲ್ಲವನ್ನೂ ತೊರೆಯುವುದೇ ಅದಕ್ಕೆ ಮಾರ್ಗ, ಆದರೆ ಮಧುಪಾನದ ಚಟವಿರುವವನಿಗೆ ಮಧುವಿಲ್ಲದ ಬ್ರಹ್ಮಸಾಕ್ಷಾತ್ಕಾರವೆಂದರೆ ಅಷ್ಟೇನೂ

ಆನಂದವಾಗುವುದಿಲ್ಲ. ಮದುವೆಯಾಗುವುದು ಮದುವೆ ಮಾಡಿಕೊಳ್ಳುವುದು ಸ್ವರ್ಗದಲ್ಲಿ ಇಲ್ಲವೆಂದು ಕ್ರೈಸ್ತರ ವೇದ ಸಾರುತ್ತದೆ. ನನ್ನ ಪ್ರೇಯಸಿಯ ಮೇಲೆ ನನಗಿರುವ ವ್ಯಾಮೋಹ ಅಳಿದು ಹೋಗುವದಾದರೆ ನಮ್ಮಿಬ್ಬರ ಹೃದಯ ಬಂಧನವನ್ನು ಸ್ವರ್ಗ ತಡೆಯುವದಾದರೆ ಆ ಸ್ವರ್ಗ ಇನ್ನೂ ದೂರವಿರಲಿ ಎನಿಸುತ್ತದೆ. ನಮ್ಮ ಹಸಿವು ಬಾಯಾರಿಕೆಗಳಡಗಿ ಚಪಲಗಳೆಲ್ಲಾ ತೃಪ್ತಿ ಪಡೆದು ಕರಣಗಳ ಆಸೆ ಹಿಂಗಿದ ಮೇಲೆ ಚರ್ಚೆಗೆ ಕುಳಿತರೆ ಈ ವೇದಾಂತವನ್ನು ನಾವು ವಾಚಾ ಮಾತ್ರವಲ್ಲದೆ ಮನಸಾ ಸಹ ಒಪ್ಪುತ್ತವೆಯೋ ಏನೋ ಆದರೆ ರಕ್ತವಿನ್ನೂ ಬಿಸಿಯಾಗಿರುವಾಗ ಲವಲವಿಕೆ ಉಕ್ಕಿ ಹೊರಹೊಮ್ಮಿ ನಾವು ಜೀವನವನ್ನು ನೂಕುವುದಕ್ಕೆ ಬದಲು ನರ್ತಿಸುತ್ತಿರುವಾಗ ನಮಗೆ ಪ್ರಪಂಚದ ತೃಷ್ಣೆಯಡಗಬೇಕೆಂಬ ಬಯಕೆಯಾದರೂ ಇದ್ದೀತೇ ? ದೇವರು ನಮ್ಮನ್ನು ಇಲ್ಲಿ ತಂದಿಟ್ಟಿರುವುದು ಇಲ್ಲಿಂದ ಹೊರಡಲು ಸಿದ್ಧರಾಗಲೆಂದು ಮಾತ್ರವೇ? ವೈರಾಗ್ಯವೆಂದರೆ ಯೌವ್ವನದ ಉತ್ಸಾಹ, ಮಾಡಿದ ಗುರುತೋ ಅಥವಾ ಮುಗ್ಗಿದ ಗುರುತೋ ಎಂಬ ಸಂದೇಹ ಬರುತ್ತದೆ. ಅದು ಅನೇಕ ವೇಳೆ ಜೀವನವನ್ನು ಎದುರಿಸುವ ಕೆಚ್ಚಿಲ್ಲದೆ ಬೆನ್ನು ತಿರುಗಿಸುವ ಹೇಡಿಯ ಮನೋವೇಳೆ ನಾವು ಪ್ರಪಂಚದ ಹಂಬಲವನ್ನು ಬಿಡಲಾರೆವು. ಈಸಬೇಕು ಇದ್ದು ಜಯಿಸಬೇಕು. ಈಜುವುದಕ್ಕೆ ಹೊರಟಾಗ ನಮ್ಮ ಸಹಾಯಕ್ಕೆ ಈ ಹರಕೆಗಳೇ ಈಜು ಬುರುಡೆಗಳು.

**ಪ್ರಬಂಧಕಾರರ ಪರಿಚಯ:**ಎ.ಎನ್. ಮೂರ್ತಿರಾವ್ (೧೯೦೦–೨೦೦೩) ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಅಕ್ಕಿಹೆಬ್ಬಾಳುವಿನಲ್ಲಿ ಜನನ. ಇವರಿಗೆ ಅತ್ಯಂತ ಪ್ರಿಯವಾದದ್ದು 'ಪ್ರಬಂಧ', ಹಗಲುಗನಸುಗಳು, ಅಲೆಯುವ ಮನ, ಮಿನುಗು–ಮಿಂಚು, ಚಿತ್ರಗಳು – ಪತ್ರಗಳು (ಲಲಿತ ಪ್ರಬಂಧ ಸಂಗ್ರಹಗಳು); ಆಷಾಢಭೂತಿ, ಸಾಕ್ರೆಟೀಸನ ಕೊನೆಯ ದಿನಗಳು, ಚಂಡಮಾರುತ, ಹವಳದ ದ್ವೀಪ, ಪಾಶ್ಚಾತ್ಯ ಸಣ್ಣ ಕಥೆಗಳು, ಇಂಡಿಯ, ಇಂದು ಮತ್ತು ನಾಳೆ (ಅನುವಾದಿತ ಕೃತಿಗಳು); ಷೇಕ್ಸ್‌ಪಿಯರ್ ಪೂರ್ವ ಭಾಗ, ಶ್ರೀ ಮಾಸ್ತಿಯವರ ಕಥೆಗಳು, ಪೂರ್ವ ಸೂರಿಗಳೊಡನೆ, ಸಾಹಿತ್ಯ ಮತ್ತು ಸತ್ಯ, ವಿಮರ್ಶಾತ್ಮಕ ಪ್ರಬಂಧಗಳು (ವಿಮರ್ಶಾ ಕೃತಿಗಳು); ಅಪರವಯಸ್ಕನ ಅಮೆರಿಕಾ ಯಾತ್ರೆ (ಪ್ರವಾಸ ಕಥನ) ಎಂಬಿವೇ ಮುಂತಾದ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

**ಪ್ರಶ್ನೆಗಳು:**

೧. ಹರಕೆಗಳ ಬಗೆಗೆ ಪ್ರಬಂಧಕಾರರ ನಿಲುವುಗಳೇನು?

೨. **'ಹರಕೆ'** ಕಟ್ಟುವುದು ಎಲ್ಲರ ಸ್ವಭಾವವೆ? ವಿವರಿಸಿ.

೩. ಲೇಖಕರ ಮೊದಲ ಸಂಬಳವನ್ನು ತಿರುಪತಿ ವೆಂಕಟರಮಣನಿಗೆ ಹರಕೆ ಕಟ್ಟಿದ ಪ್ರಸಂಗವನ್ನು ಬರಿಯಿರಿ.

**ಕನ್ನಡ ಭಾಷೆ ಮಾದರಿ ಪ್ರಶ್ನೆಪತ್ರಿಕೆ**
**ಮೂರನೇ ಸೆಮಿಸ್ಟರ್ ಬಿಎಸ್ಸಿ ಐಡಿ**
**ಕನ್ನಡ ಸೌಂದರ್ಯ–೨**

**ಸಮಯ: 2.30 ನಿಮಿಷ** **ಗರಿಷ್ಟಾಂಕಗಳು: 60**

**I ಪದ್ಯದ ಭಾವಾರ್ಥ ಬರೆಯಿರಿ:** **(1X6=6)**

ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆಮಲಯಜಂಗಳಂ ಕೊಂಕಿದೊಡೇಂ
ಸ್ಮರಚಾಪಮನಿಳಿಕಯ್ವರೆ
ಮರುಳೇಪೊಲ್ಲಮೆಯೆಲೇಸುನಲ್ಲರಮೆಯ್ಯೊಳ್

**II ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:** **(4X2=8)**

1) ಜನ್ನ
2) ವಚನಗಳು
3) ಡಾ. ಯು.ಆರ್. ಅನಂತಮೂರ್ತಿ
4) ವರವರರಾವ್
5) ಸಣ್ಣನಿಂಗು
6) ಮಹಾತ್ಮ

**III ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ** **(4X4=16)**

7) ಕಾವ್ಯಕ್ಕೂ ಸಂಗೀತಕ್ಕೂ ಇರುವ ಸಾಮ್ಯತೆಗಳು.
8) ಚೆನ್ನಬಸವಣ್ಣನ ವಚನಗಳ ಆಶಯ.
9) ರೈತನ ಶ್ರಮದ ಬದುಕು.
10) ಪರಿಸರ ಉಳಿಸಲು ಕೈಗೊಳ್ಳಬೇಕಾದ ಕ್ರಮಗಳು.
11) 'ತಾಯಿ' ಕಥೆಯ ಮಾತೃ ಹೃದಯದ ವೇದನೆ
12) ಹರಕೆಗಳು ಮನುಷ್ಯನ ಬದುಕಿನಲ್ಲಿ ವಹಿಸುವ ಪಾತ್ರ.

**IV ಯಾವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ:** **(3X10=30)**

13) ಅಮೃತಮತಿಯ ನಿಲುವು ಸಕಾರಣವೇ? ವಿವರಿಸಿ.
14) ಅನಸೂಯೆ ವ್ಯಕ್ತಿತ್ವ ಎಂತಹದು?
15) ಕುಂಡಜ್ಜ ಮತ್ತು ಶಿವಮಲ್ಲು ಪಾತ್ರಗಳನ್ನು ಪರಿಚಯಿಸಿ.
16) ಮಾಧವರಾಯರ ಮನೆತನ ಮತ್ತು ಅವರ ವ್ಯಕ್ತಿತ್ವವನ್ನು ನಿರೂಪಿಸಿ.
17) ಬೆಂಗಳೂರು ಅತ್ತೆಮ್ಮನ ಫಳಾರದ' ಸ್ವಾರಸ್ಯವನ್ನು ಕುರಿತು ಬರೆಯಿರಿ.